'ಧಾರ್ಮಿಕ ಸಾಮರಸ್ಯದ ಕೇಂದ್ರವಾಗಿ ಉಳ್ಳಾಲ ದರ್ಗಾ'

ಒಂದು ಐತಿಹಾಸಿಕ ದೃಷ್ಟಿಕೋನದ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಎಂ. ಫಿಲ್ ಪದವಿಗಾಗಿ

[ಸಮಾಜ ವಿಜ್ಞಾನ ನಿಕಾಯ] ಸಾದರಪಡಿಸಿದ ಸಂಪ್ರಬಂಧ

ಸಂಶೋಧಕ

ಸುಬೇರ್

ಮಾರ್ಗದರ್ಶಕರು

ಡಾ. ಡೆನಿಸ್ ಫೆರ್ನಾಂಡಿಸ್

2008–09

ರ್ನಾಟಕ ಥಿಯೋಲೋಜಿಕಲ್ ಸಂಶೋಧನಾ ಕೇಂದ್ರ

ಬಲ್ಮಠ, ಮಂಗಳೂರು

623

'ಧಾರ್ಮಿಕ ಸಾಮರಸ್ಯದ ಕೇಂದ್ರವಾಗಿ ಉಳ್ಳಾಲ ದರ್ಗಾ'
ಒಂದು ಐತಿಹಾಸಿಕ ದೃಷ್ಟಿಕೋನದ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಎಂ. ಫಿಲ್ ಪದವಿಗಾಗಿ
[ಸಮಾಜ ವಿಜ್ಞಾನ ನಿಕಾಯ] ಸಾದರಪಡಿಸಿದ ಸಂಪ್ರಬಂಧ

ಸಂಶೋಧಕ
ಸುಬೇರ್

ಮಾರ್ಗದರ್ಶಕರು
ಡಾ. ಡೆನಿಸ್ ಫೆರ್ನಾಂಡಿಸ್

2008–09

ಕರ್ನಾಟಕ ಥಿಯೋಲೋಜಿಕಲ್ ಸಂಶೋಧನಾ ಕೇಂದ್ರ
ಬಲ್ಮಠ, ಮಂಗಳೂರು

ಯೋಗ್ಯತಾ ಪತ್ರ

ಸುಬೇರ್ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ "ಧಾರ್ಮಿಕ ಸಾಮರಸ್ಯದ ಕೇಂದ್ರವಾಗಿ ಉಳ್ಳಾಲ ದರ್ಗಾ" ಒಂದು ಐತಿಹಾಸಿಕ ದೃಷ್ಟಿಕೋನದ ಅಧ್ಯಯನ ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ. ಫಿಲ್ ಪದವಿ ಪ್ರಾಪ್ತಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ, ಅಭಿಪ್ರಾಯ ಸಂಗ್ರಹ, ಭೋಧನೆ, ಮತ್ತು ಸಂಶೋಧನೆಯ ಫಲ ಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಇನ್ನಿತರ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲ.

ಡಾ। ಡೆನಿಸ್ ಫೆರ್ನಾಂಡಿಸ್
ಸಂಶೋಧನ ಮಾರ್ಗದರ್ಶಕರು

ಕರ್ನಾಟಕ ಥಿಯೋಲೋಜಿಕಲ್ ಸಂಶೋಧನಾ ಕೇಂದ್ರ,
ಬಲ್ಮಠ, ಮಂಗಳೂರು

ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ. ಫಿಲ್ ಪದವಿಗಾಗಿ ಸಾದರಪಡಿಸಿದ 'ಧಾರ್ಮಿಕ ಸಾಮರಸ್ಯದ ಕೇಂದ್ರವಾಗಿ ಉಳ್ಳಾಲ ದರ್ಗಾ' ಒಂದು ಐತಿಹಾಸಿಕ ದೃಷ್ಟಿಕೋನದ ಅಧ್ಯಯನ – ಶೀರ್ಷಿಕೆಯ ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು, ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರಿನ ಥಿಯೋಲೋಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ। ಡೆನಿಸ್ ಫೆರ್ನಾಂಡಿಸ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವು ಬೇರಾವುದೇ ಪದವಿ, ಡಿಪ್ಲೋಮ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

ಸುಬೇರ್

ಕರ್ನಾಟಕ ಥಿಯೋಲೋಜಿಕಲ್ ಸಂಶೋಧನಾ ಕೇಂದ್ರ,
ಬಲ್ಮಠ, ಮಂಗಳೂರು

ನೆನಕೆ

'ಧಾರ್ಮಿಕ ಸಾಮರಸ್ಯದ ಕೇಂದ್ರವಾಗಿ ಉಳ್ಳಾಲ ದರ್ಗಾ' ಒಂದು ಐತಿಹಾಸಿಕ ದೃಷ್ಠಿಕೋನದ ಅಧ್ಯಯನ – ಎಂಬ ಶೀರ್ಷಿಕೆಯ ಸಂಪ್ರಬಂಧವು ಕರ್ನಾಟಕ ಥಿಯೋಲೋಜಿಕಲ್ ಸಂಶೋಧನಾ ಕೇಂದ್ರದಡಿಯಲ್ಲಿ ನಡೆಸಿದ ಕಾಲಬದ್ಧ ಸಂಶೋಧನೆ. ಈ ಸಂಶೋಧನಾ ಕಾರ್ಯಕ್ಕೆ ಎಲ್ಲಾ ಬಗೆಯ ವ್ಯವಸ್ಥಾಪನ ನೆರವು ನೀಡಿದ ಪ್ರೇರಕ ಕೇಂದ್ರಗಳಾದ ಕನ್ನಡ ವಿಶ್ವವಿದ್ಯಾಲಯ, ಹಂಪಿ ಹಾಗೂ ಕರ್ನಾಟಕ ಥಿಯೋಲೋಜಿಕಲ್ ಸಂಶೋಧನಾ ಕೇಂದ್ರ, ಮಂಗಳೂರು ಇವೆರಡನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇನೆ.

ಈ ಸಂಪ್ರಬಂಧ ರಚನೆಯ ಸಂದರ್ಭದಲ್ಲಿ ಮಾರ್ಗದರ್ಶಕರಾಗಿ ನನಗೆ ಸೂಕ್ತ ಸಲಹೆ, ಸೂಚನೆ, ಮಾರ್ಗದರ್ಶನ ನೀಡಿದ ಕರ್ನಾಟಕ ಥಿಯೋಲೋಜಿಕಲ್ ಸಂಶೋಧನಾ ಕೇಂದ್ರದ ಮಾರ್ಗದರ್ಶಕರು ಹಾಗೂ ಸಂತ ಅಲೋಶಿಯಸ್ ಕಾಲೇಜಿನ ಇತಿಹಾಸ ಉಪನ್ಯಾಸಕರಾದ ಡಾ। ಡೆನಿಸ್ ಫೆರ್ನಾಂಡಿಸ್‌ರಿಗೆ ನನ್ನ ವಿಶೇಷ ವಂದನೆಗಳು. ಆಡಳಿತಾತ್ಮಕ ಸಹಕಾರ ನೀಡಿ ನನ್ನ ಸಂಶೋಧನೆಗೆ ಪೂರ್ಣ ಬೆಂಬಲ ನೀಡಿದ ಕರ್ನಾಟಕ ಥಿಯೋಲೋಜಿಕಲ್ ಕಾಲೇಜಿನ ಪ್ರಾಂಶುಪಾಲರಾದ ರೆ। ಡಾ। ಜೆ. ಎಸ್. ಸದಾನಂದರನ್ನು ಮತ್ತು ಕರ್ನಾಟಕ ಥಿಯೋಲೋಜಿಕಲ್ ಸಂಶೋಧನಾ ಕೇಂದ್ರದ ನಿರ್ದೇಶಕ ಡಾ। ಎ. ವಿ. ನಾವಡರನ್ನು ಗೌರವ ಪೂರ್ವಕವಾಗಿ ಸ್ಮರಿಸಿಕೊಳ್ಳುತ್ತೇನೆ.

ಸಂಶೋಧನೆಯ ಸಂದರ್ಭದಲ್ಲಿ ಉಪಯುಕ್ತ ದಾಖಲೆಗಳನ್ನು ಒದಗಿಸಿದ ಪದಾಧಿಕಾರಿಗಳು, ದರ್ಗಾ ಸಮಿತಿ ಉಳ್ಳಾಲ, ಸೈಯ್ಯದ್ ಮದನಿ ಕನ್ನಡ ಸಾಹಿತ್ಯ ವೇದಿಕೆ, ಸಿರಾಜುಲ್ ಹುದಾ ಸಾಹಿತ್ಯ ವೇದಿಕೆ ಇವರೆಲ್ಲರಿಗೂ ನನ್ನ ಹೃತ್ಪೂರ್ವಕ ನಮನಗಳು. ಸಂಶೋಧನೆಯ ಅಂಗವಾದ ಕ್ಷೇತ್ರ ಭೇಟಿಯ ಸಂದರ್ಭದಲ್ಲಿ ಸೂಕ್ತ ಮಾಹಿತಿಯನ್ನು ನೀಡಿದ

ಡಾ। ಅಮೃತ ಸೋಮೇಶ್ವರ, ಪ್ರೊ. ಬಿ. ಎಂ. ಇಚ್ಲಂಗೋಡು, ಬಿ. ಎಂ. ಇದಿನಬ್ಬ, ಭಾಸ್ಕರ್, ಚಂದ್ರ ಕೆ. ಪಿ., ವಾಸುದೇವ್, ಮಹಮ್ಮದ್ ಇಸ್ಮತ್ ಫಜೀರ್, ಅಬೂಬಕ್ಕರ್ ಡಿ. ಐ. ಕೈರಂಗಳ, ಹಮ್ಮಬ್ಬ ಹಾಜಿ, ಮಹಮ್ಮದ್ ತಂಜಳ್ ಹಾಗೂ ದರ್ಗಾದಲ್ಲಿ ಭೇಟಿಗೆ ಲಭಿಸಿದ ಹಿಂದೂ, ಮುಸ್ಲಿಂ, ಕ್ರೈಸ್ತ ಭಕ್ತಾದಿಗಳನ್ನು ಸಂದರ್ಭೋಚಿತವಾಗಿ ನೆನೆಯುತ್ತೇನೆ.

ಈ ಸಂಶೋಧನೆಯ ಸಂದರ್ಭದಲ್ಲಿ ನನ್ನನ್ನು ಪ್ರೋತ್ಸಾಹಿಸಿದ ಸಂತ ಫಿಲೋಮಿನಾ ಕಾಲೇಜಿನ ಪ್ರಾಚಾರ್ಯ ರೆ। ಫಾ। ಎಫ್. ಎಕ್ಸ್. ಗೋಮ್ಸ್, ಸಮಾಜಶಾಸ್ತ್ರ ಉಪನ್ಯಾಸಕ ಜೋನ್ ಬಿ. ಸಿಕ್ವೇರಾ, ಕಾಲೇಜ್‌ನ ಗ್ರಂಥಪಾಲಕ, ನೌಕರವರ್ಗ ಹಾಗೂ ಈ ಕಾರ್ಯದಲ್ಲಿ ಪ್ರತ್ಯಕ್ಷ ಪರೋಕ್ಷ ಸಲಹೆ ಸೂಚನೆಗಳನ್ನು ನೀಡಿದ ಎಲ್ಲರನ್ನೂ ನಾನು ಸ್ಮರಿಸಿಕೊಳ್ಳುತ್ತೇನೆ.

ಕರ್ನಾಟಕ ಥಿಯೋಲೋಜಿಕಲ್ ಸಂಶೋಧನಾ ಕೇಂದ್ರ, ಸುಬೇರ್
ಬಲ್ಮಠ, ಮಂಗಳೂರು ಸಂಶೋಧಕ

ಉಳ್ಳಾಲ ಭೂಪಟ


N
S
ನೇತ್ರಾವತಿ ನದಿ
ಜಪ್ಪಿನ ಮೊಗ್ರು ಗ್ರಾಮ
RAILWAY TRACK
N H 17 ROAD
ಸೋಮೇಶ್ವರ ಗ್ರಾಮ
1
2
3
4
5
6
7
8
9
10
11
12
14
15
16
18
19
20
21
22
23
24
25
27
SOUTH
NORTH
EAST
WEST
MUNNUR VILLAGE
ARABIAN SEA

'ಧಾರ್ಮಿಕ ಸಾಮರಸ್ಯದ ಕೇಂದ್ರವಾಗಿ ಉಳ್ಳಾಲ ದರ್ಗಾ'

ಒಂದು ಐತಿಹಾಸಿಕ ದೃಷ್ಟಿಕೋನದ ಅಧ್ಯಯನ

ಅಧ್ಯಾಯಗಳ ವಿವರ

1. ಪೀಠಿಕೆ–ಐತಿಹಾಸಿಕ ಹಿನ್ನೆಲೆ
2. ಉಳ್ಳಾಲ ದರ್ಗಾದ ಇತಿಹಾಸ – ಸೈಯ್ಯದ್ ಮದನಿಯವರ ಜೀವನ ಚರಿತ್ರೆ– ಮುಸ್ಲಿಂ ಧಾರ್ಮಿಕ ಕೇಂದ್ರವಾಗಿ ಬೆಳೆದು ಬಂದ ರೀತಿ.
3. ಉರೂಸ್ ಆಚರಣೆ – ಹಿನ್ನೆಲೆ–ವಿವಿಧ ಆಚರಣೆಗಳು
4. ಧಾರ್ಮಿಕ ಸಾಮರಸ್ಯದ ಕೇಂದ್ರವಾಗಿ ಉಳ್ಳಾಲ ದರ್ಗಾ
5. ಸಾಮಾಜಿಕ ಸೇವೆಯಲ್ಲಿ ದರ್ಗಾದ ಪಾತ್ರ–ಶಿಕ್ಷಣ, ಆರೋಗ್ಯ ಹಾಗೂ ಕಲ್ಯಾಣ ಕಾರ್ಯಕ್ರಮಗಳು
6. ಉಪಸಂಹಾರ
7. ಅನುಬಂಧಗಳು
8. ಗ್ರಂಥ ಸೂಚಿ

"ಧಾರ್ಮಿಕ ಸಾಮರಸ್ಯದ ಕೇಂದ್ರವಾಗಿ ಉಳ್ಳಾಲ ದರ್ಗಾ"
ಒಂದು ಐತಿಹಾಸಿಕ ದೃಷ್ಟಿಕೋನದ ಅಧ್ಯಯನ

ಅಧ್ಯಾಯ 1

ಪೀಠಿಕೆ–ಐತಿಹಾಸಿಕ ಹಿನ್ನೆಲೆ

ತುಳುನಾಡು

ತುಳುನಾಡಿನಲ್ಲಿ ಇಸ್ಲಾಂ

ತುಳುನಾಡಿನಲ್ಲಿ ಉಳ್ಳಾಲದ ಮಹತ್ವ

ಪೀಠಿಕೆ–ಐತಿಹಾಸಿಕ ಹಿನ್ನೆಲೆ

ತುಳುನಾಡಿನ ಕರಾವಳಿ ಪ್ರದೇಶದ ಪ್ರಮುಖ ವಿದೇಶಿ ವರ್ತಕರು ಅರಬರಾಗಿದ್ದರು. ದೇಶದ ಪಶ್ಚಿಮದ ಕಡಲನ್ನು ಅರಬ್ಬಿ ಸಮುದ್ರ ಎಂದು ಕರೆದುದು ಇದಕ್ಕೆ ಸಾಕ್ಷಿ. ಸುಮಾರು 3000 ವರ್ಷಗಳಿಂದಲೂ ಭಾರತೀಯರು, ಫೊನೇಶಿಯನ್ನರು, ಅರಬ್ಬರು ಮತ್ತು ಜಗತ್ತಿನ ಎಲ್ಲಾ ಸಾಗರ ವ್ಯಾಪಾರಿಗಳಿಗೆ ಈ ಸಮುದ್ರವು ಪ್ರಮುಖ ಜಲಮಾರ್ಗವಾಗಿತ್ತು. 1

ತುಳುನಾಡಿನ ಬಹು ಧರ್ಮೀಯ ಮತ್ತು ಬಹು ಭಾಷೀಯ ಸಾಮರಸ್ಯದ ಬಗ್ಗೆ ಬ್ರಿಟೀಷ್ ಅಧಿಕಾರಿ ಮತ್ತು ಲೇಖಕ ಎಸ್. ಮಿಲ್ಲೆಯವರು 'ಈ ಜಿಲ್ಲೆಯ ಜನರು ಸೇವಾ ಮನೋಭಾವದವರು, ಸಹಾನುಭೂತಿಪರರು, ಉದಾರ ಭಾವನೆಯುಳ್ಳವರು, ಬುದ್ಧಿವಂತರು, ಉದ್ಯಮಶೀಲರು' ಎಂದು ಉಲ್ಲೇಖಿಸಿದ್ದಾರೆ. ಪುರಾತನ ಕಾಲದಿಂದಲೂ ಈ ಜಿಲ್ಲೆಯಲ್ಲಿ ಭೂತಾರಾಧನೆ ಮತ್ತು ನಾಗಾರಾಧನೆ ಧಾರ್ಮಿಕ ಆಚರಣೆಯಾಗಿದ್ದವು. ಜೊತೆಯಲ್ಲಿ ವೈದಿಕ, ಶೈವ, ಜೈನ ಧಾರ್ಮಿಕ ಆಚರಣೆಗಳು ಚಾಲ್ತಿಯಲ್ಲಿದ್ದವು. 2

ತುಳುನಾಡು ಮತ್ತು ಅರೇಬಿಯಗಳ ನಡುವಿನ ವ್ಯಾಪಾರ ಸಂಬಂಧ ಪುರಾತನವಾದುದು. ಕ್ರಿ ಶ 4ನೇ ಮತ್ತು 5ನೇ ಶತಮಾನಗಳಲ್ಲಿ ತುಳುನಾಡಿನೊಂದಿಗೆ ಅರಬ್ಬರ ವ್ಯಾಪಾರ – ಸಂಬಂಧದ ಬಗ್ಗೆ ಹಲವಾರು ದಾಖಲೆಗಳಿವೆ. ಪರ್ಶಿಯಾದ ಕುದುರೆಗಳನ್ನು ಶ್ರೀಲಂಕಾಕ್ಕೆ ತರುತ್ತಿದ್ದಾಗ ಆ ವ್ಯಾಪಾರವು ಪಶ್ಚಿಮ ಕರಾವಳಿಯವರೆಗೂ ಹಬ್ಬಿಕೊಂಡಿತ್ತು ಎಂದು ಕೋಸ್ಮೋಸ್ ಇಂಡಿಕೊ ಬಸ್ತ್ ಎಂಬ 6ನೇ ಶತಮಾನದ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ. 3

ತುಳುನಾಡಿನಲ್ಲಿ ಇಸ್ಲಾಂ

ಕೇರಳದಲ್ಲಿ ದೊರಕಿದ ಅಪ್ರಕಟಿತ ಅರಬ್ಬಿ ಭಾಷೆಯ ದಾಖಲೆಯಂತೆ ತುಳುನಾಡಿನ ಪ್ರಥಮ ಮಸೀದಿಯು ಮಾಲಿಕ್ ಇಬ್ನ್ ಹಬೀಬ್‌ರಿಂದ ಬಾರಕೂರಲ್ಲಿ ನಿರ್ಮಾಣವಾಯಿತು. ಹಿಜರಿ ಶಕ 22 ಅಥವಾ ಕ್ರಿ ಶ 644ರಲ್ಲಿ ಇಬ್ನ್ ಹಬೀಬ್ ಮಂಗಳೂರಿನಲ್ಲಿ ಒಂದು ಮಸೀದಿ ಹಾಗೂ ಕಾಸರಗೋಡಿನಲ್ಲಿ ಇನ್ನೊಂದು ಮಸೀದಿಯನ್ನು ನಿರ್ಮಿಸಿದ ಬಗ್ಗೆ "ಮಾಪಿಳ್ಳಾಸ್ ಆಫ್ ಮಲಬಾರ್" ಎಂಬ ಕೇರಳದ ಇತಿಹಾಸಕಾರ ಗೋಪಾಲನ್ ನಾಯರ್‌ರವರ ಪುಸ್ತಕದಲ್ಲಿ ಉಲ್ಲೇಖಿಸಲಾಗಿದೆ. 4

ತುಳುನಾಡಿನಲ್ಲಿ ಆಳುಪರ ಆಳ್ವಿಕೆಗಳಿಂತಲೂ ಹಿಂದೆ ಅರಬ್ಬರು ವಾಸ್ತವ್ಯವಿದ್ದರೂ, ಇಲ್ಲಿ ಇಸ್ಲಾಂನ ಆಗಮನ ಸ್ಪಷ್ಟವಾಗಿ ದಾಖಲಿಸಲ್ಪಡಲಿಲ್ಲ. ಆದರೆ ಜಾನಪದಗಳ ಆಧಾರದಲ್ಲಿ ಪಶ್ಚಿಮ ಕರಾವಳಿಯಲ್ಲಿ ಮುಸ್ಲಿಮರು ಏಳನೇ ಶತಮಾನದ ಮಧ್ಯ ಭಾಗದಲ್ಲಿ ಅರಬೀ ವರ್ತಕರ ರೂಪದಲ್ಲಿ ಜೀವನ ನಡೆಸುತ್ತಿದ್ದರು. ಅರಬ್ ಪ್ರವಾಸಿಗರು ಈ ಪ್ರದೇಶದ ಹವಮಾನ ತಮ್ಮ ವ್ಯಾಪಾರಕ್ಕೆ ಅನುಕೂಲವೆಂದು ತಿಳಿಸಿ ಇಲ್ಲಿ ಇಸ್ಲಾಂ ಮತ ಶಾಂತರೀತಿಯಲ್ಲಿ ಪ್ರಸಾರವಾಗುತ್ತಿತ್ತೆಂದು ಸೂಚಿಸಿದ್ದು ಗಮನಾರ್ಹ ಅಂಶವಾಗಿದೆ. 5

ಕ್ರಿ ಶ 1175ರಲ್ಲಿ ತುಳುನಾಡಿಗೆ ಆಗಮಿಸಿದ ಇದ್ರಾನ್ ಮಸೂದಿ ಎಂಬ ಮುಸ್ಲಿಂ ಪ್ರವಾಸಿ ಮಂಗಳೂರಿಗೆ ಭೇಟ ನೀಡಿ ಇಲ್ಲಿ 4000 ಸಾವಿರ ಮುಸ್ಲಿಮರು ಇರುವುದಾಗಿಯೂ, ಇಲ್ಲಿನ ಹಿಂದೂಗಳು ಮುಸ್ಲಿಮರನ್ನು ಸಹೋದರರಂತೆ ನೋಡಿಕೊಳ್ಳುತ್ತಿದ್ದರೆಂದು ದಾಖಲಿಸಿದ್ದಾರೆ. ಅಂದು ಮುಸ್ಲಿಮರು ಮುಖ್ಯ ವ್ಯಾಪಾರಿಗಳಾಗಿ ತುಳು ಸಮುದಾಯದ ಭಾಗವಾಗಿದ್ದರು ಎಂದು ಈ ದಾಖಲೆಯು ಮಾಹಿತಿ ನೀಡುತ್ತದೆ. ಅದೇ ರೀತಿ ಏಳನೇ ಶತಮಾನದ ಅರಬೀ ದಾಖಲೆಯೊಂದರಲ್ಲಿ ತುಳುನಾಡಿನ ಬಂದರುಗಳಾದ ಸಿಂಧಭೂರ್ ಅಥವಾ ಕುಂದಾಪುರ, ಫಾಕನೂರ್ ಯಾ ಬಾರಕೂರ್ ಮತ್ತು ಮಂಜಲೂರ್ ಅಥವಾ ಮಂಗಳೂರುಗಳ ಬಗ್ಗೆ ಉಲ್ಲೇಖವಿದೆ. 6

ಈ ನಾಡಿನ ಅತೀ ಪುರಾತನ ಆರಾಧನಾ ಪದ್ದತಿಯಾದ ಭೂತಾರಾಧನೆಗೆ ಸಂಬಂಧಿಸಿಂದಂತೆ ಬಬ್ಬರ್ಯ ಪಾಡ್ದನದಲ್ಲಿ ಬಬ್ಬರ್ಯನ ತಾಯಿ ದುಗ್ಗುಸೆಟ್ಟಿದಿ ಮೊದಲು ಜೈನ ಹೆಣ್ಣಾಗಿದ್ದಳು ಎಂದು ಅವಳಿಗೆ ಸಂಬಂಧಪಟ್ಟ ಆಪತ್ತೊಂದನ್ನು ಪರಿಹರಿಸಿದ ಸುಲಿಕಳ್ಳ "ಮದವ ಬ್ಯಾರಿ" ಎಂಬಾತನಿಗೆ ಆಕೆಯನ್ನು ಆಕೆಯ ಸೋದರರು ತಮ್ಮ ವಾಗ್ದಾನದಂತೆ ಮದುವೆ ಮಾಡಿಕೊಟ್ಟರೆಂದು ವಿವರವಿದೆ. ಇಲ್ಲಿನ ತುಳುವರು ಬಬ್ಬರ್ಯ ಅಥವಾ ಬಾವು ಬ್ಯಾರಿ ಮೀನುಗಾರರಿಗೆ ಸಂಕಷ್ಟದ ಸಮಯದಲ್ಲಿ ಸಹಾಯ ಹಸ್ತವನ್ನು ನೀಡುವ ದೈವವೆಂದು ಬಿಂಬಿಸಲಾಗಿದೆ. 7

ಪ್ರಾಚೀನ ತುಳುನಾಡು ಪ್ರದೇಶದಲ್ಲಿ ಸ್ಥಳೀಯರಾಗಿ ಬೆಳೆದು ಬಂದ ಮುಸ್ಲಿಮರನ್ನು ಬ್ಯಾರಿಗಳೆಂದು ಕರೆಯುತ್ತೇವೆ. ಸಾಂಪ್ರದಾಯಿಕವಾಗಿ ಹತ್ತೊಂಬತ್ತನೇಯ ಶತಮಾನದ ಕೊನೆಯವರೆಗೂ ತಮ್ಮ ಹೆಸರುಗಳ ಮುಂದೆ 'ಬ್ಯಾರಿ' 'ಬ್ಯಾರ್ದಿ' ಪದಗಳನ್ನು ಹೆಮ್ಮೆಯಿಂದ ಗೌರವ ಪದವಾಗಿ ಬಳಸುತ್ತಿದ್ದರು. ಕರಾವಳಿಯ ಮುಸ್ಲಿಮರಲ್ಲಿ ಪ್ರಾಚೀನ ಕಾಲದಲ್ಲಿ ಶೇ 95ರಷ್ಟು ವ್ಯಾಪಾರ ಕಸುಬನ್ನೇ ಆಧರಿಸಿ ಕೊಂಡಿದ್ದ ಜನಸಮುದಾಯಕ್ಕೆ ಕಸುಬಾಧರಿಸಿ ನೀಡಿದ ಸ್ಥಳೀಯ ಹೆಸರೇ ಬ್ಯಾರಿಗಳು. 'ಬ್ಯಾರಿ' ಎಂಬುದು ತುಳು ಪದವಾಗಿದ್ದು ವ್ಯಾಪಾರವನ್ನು 'ಬ್ಯಾರ' ಎಂದೂ, ಬ್ಯಾರವನ್ನು ಕಸುಬಾಗಿರಿಸಿಕೊಂಡವರನ್ನು 'ಬ್ಯಾರಿ' ಎಂದು ಕರೆಯಲಾಗುತ್ತದೆ. ಪ್ರಸಿದ್ದ ಇತಿಹಾಸಕಾರ ತಾರಾಚಂದರ

ಅಭಿಪ್ರಾಯದಂತೆ, ಪೋರ್ಚುಗೀಸರು ಕರಾವಳಿಯಲ್ಲಿ ವ್ಯಾಪಾರ ಸ್ಥಾಪಿಸುವವರೆಗೂ, ಅಂದರೆ ಹದಿನಾಲ್ಕನೇ ಶತಮಾನದವರೆಗೂ ಅರಬ್ ವ್ಯಾಪಾರ ನಿರಂತರವಾಗಿದ್ದು, ಅರಬ್ಬರು ಕರವಳಿಯುದ್ದಕ್ಕೂ ನೆಲೆನಿಂತಿದ್ದರು. ಸ್ಥಳೀಯ ಮಹಿಳೆಯರನ್ನು ವಿವಾಹವಾಗುತ್ತಿದ್ದರು. ಅವರ ಸಂತಾನಗಳು ಮುಸ್ಲಿಮರಾಗಿ ಬೆಳೆದರು. ಇಂತಹ ಜನರು ಕರಾವಳಿಯುದ್ದಕ್ಕೂ ಸಾಮಾನ್ಯವಾಗಿದ್ದೂ, ಸ್ಥಳೀಯ ಮುಸ್ಲಿಂ ಸಮುದಾಯಗಳು ಉಂಟಾಗಿವೆ. ಕ್ರಿ ಶ ಮೊದಲನೇಯ ಶತಮಾನದಿಂದಲೇ ಅರಬ ವ್ಯಾಪಾರ ಸಂಬಂಧ ಕರಾವಳಿ ಜಿಲ್ಲೆಗಳಲ್ಲಿತ್ತೆಂಬುದನ್ನು, "ದಕ್ಷಿಣ ಕನ್ನಡ ಗಜೆಟ್ಟಿಯರ್ ಆಫ್ ಇಂಡಿಯಾ" ದಲ್ಲಿ ಉಲ್ಲೇಖಿಸಲಾಗಿದೆ. 8

ಅದೇ ರೀತಿ ಗಣಪತಿ ರಾವ್ ಐ ಗಳ್‌ರ 'ದಕ್ಷಿಣ ಕನ್ನಡದ ಪ್ರಾಚೀನ ಇತಿಹಾಸ'ದಲ್ಲಿ ಅರಬ ವ್ಯಾಪಾರ ಸಂಪರ್ಕ ಪ್ರಾಚೀನ ಕಾಲದಿಂದಲೇ ಇದ್ದು ಬಾರಕೂರು ಮಂಗಳೂರು, ಉಳ್ಳಾಲ, ಮಂಜೇಶ್ವರ ಮತ್ತು ಕಾಸರಗೋಡು ವ್ಯಾಪಾರಕೇಂದ್ರಗಳಾಗಿದ್ದು, ಅಲ್ಲೆಲ್ಲಾ ಮುಸ್ಲಿಂ ಸಮುದಾಯ ಬೆಳೆಯಿತು ಎಂದಿರುವರು. 9

ಅರಬ ಸಂಪರ್ಕದಿಂದುಂಟಾದ ಹೊಸ ಸಮುದಾಯವೇ ಕರಾವಳಿಯ ಮುಸ್ಲಿಮರೆಂದು ಡಾ। ಟೈಟಸ್ ಎಂಬ ಇತಿಹಾಸಕಾರ ತಿಳಿಸಿದ್ದಾರೆ. ಮಲಬಾರಿನ ಮಾಪಿಳ್ಳಗಳು, ಕೊಂಕಣದ ನವಾಯತರು, ಸ್ಥಳೀಯ ಭಾಷೆ, ಸಂಸ್ಕೃತಿಯನ್ನಾದರಿಸಿ ಬೆಳೆದ ಮುಸ್ಲಿಂ ಸಮುದಾಯದಂತೆ, ತುಳುನಾಡಿನ ಬ್ಯಾರಿಗಳು ಸ್ಥಳೀಯವಾಗಿ ಬೆಳೆದು ಬಂದ ಒಂದು ಸಮುದಾಯವಾಗಿದೆ. 10

ಪಾಡ್ದನಗಳಲ್ಲಿ ತುಳುನಾಡಿನ ಸ್ಥಳೀಯ ಜನರನ್ನು 7 ಅಥವಾ 8 ಪಂಗಡಗಳಾಗಿ ಗುರುತಿಸಲಾಗಿದೆ. ಬಿಲ್ಲವರು, ಬಂಟರು, ಬ್ರಾಹ್ಮಣರು, ಜೈನರು, ಮೊಗವೀರರು, ಬ್ಯಾರಿಗಳು, ಪಂಬದರು ಮತ್ತು ಹೊಲೆಯರು, ಈ ಎಂಟು ಪಂಗಡಗಳಾಗಿವೆ. ಇಲ್ಲಿನ ಬ್ಯಾರಿಗಳು ತುಳು ತಾಯಿಯ ಮತ್ತು ಅರಬ್ ತಂದೆಯ ಮಕ್ಕಳೆಂದು ಖ್ಯಾತ ಇತಿಹಾಸಕಾರ ಬಿ. ಎ. ಸಾಲೆತ್ತೂರು ರವರ ಅಭಿಪ್ರಾಯ. ತುಳುನಾಡಿನ ಬ್ಯಾರಿಗಳನ್ನು ಸಂಬಂಧಿಸಿ ಪಾಡ್ದನ ಒಂದರಲ್ಲಿ ಬ್ಯಾರಿಗಳು ಬ್ರಹ್ಮನ ದೇವಸ್ಥಾನದ ಹತ್ತಿರ ಬಂದಾಗ ಹಳ್ಳಿಯ ಜನರು ಅವರಲ್ಲಿ "ನೀವು ಜಾತಿ ಬ್ಯಾರಿಗಳೋ? ನೀತಿ ಬ್ಯಾರಿಗಳೋ? ಜಾತಿ ಬ್ಯಾರಿಗಳಾಗಿದ್ದರೆ ದೇವಸ್ಥಾನದ ಮೊಗಸಾಲೆಗೆ ಪ್ರವೇಶಿಸಿ ಬಾಗಿಲನ್ನು ಮುಟ್ಟಿ ನಿಮಗೆ ಏನು ಬೇಕಾಗಿದೆ ಎಂದು ಕೇಳಿ" ಎಂಬುದಾಗಿ ಉಲ್ಲೇಖಿಸಲಾಗಿದೆ. ಇದು ಬ್ಯಾರಿಗಳು ತಮ್ಮ ಹಿಂದೂ ಸಹೋದರರಿಂದ ಪಡೆದ ಗೌರವ ಎಂಬುದಾಗಿ ಬಿ ಎ ಸಾಲೆತ್ತೂರು ಅಭಿಪ್ರಾಯ ಪಡುತ್ತಾರೆ. 11

ತುಳುನಾಡಿನಲ್ಲಿ ಉಳ್ಳಾಲದ ಮಹತ್ವ

ಕರಾವಳಿ ಕರ್ನಾಟಕದ ಪ್ರಮುಖ ವ್ಯಾಪಾರಿ ನೆಲೆ ಹಾಗೂ ಬಂದರಾಗಿದ್ದ ಉಳ್ಳಾಲದ ಚರಿತ್ರೆಯು, ತುಳುನಾಡಿನ ಪ್ರಾಚೀನತೆಯಷ್ಟೇ ಶ್ರೀಮಂತ ಹಾಗೂ ಕುತೂಹಲಕಾರಿಯಾಗಿದೆ.ಉಳ್ಳಾಲ ಎಂದೊಡನೆ ತಟ್ಟನೆ ಮೂಡುವ ವಿಚಾರಗಳೆಂದರೆ, ರಾಣಿ ಅಬ್ಬಕ್ಕ, ಉಳ್ಳಾಲದ ಕಡಲು, ಉಳ್ಳಾಲದ ಸೇತುವೆ, ಉಳ್ಳಾಲದ ಉರೂಸ್ ಮುಂತಾದುವುಗಳು. ತುಳುನಾಡಿನ ಪ್ರಸಿದ್ದ ಐತಿಹಾಸಿಕ ಮತ್ತು ಸಾಂಸ್ಕೃತಿಕ ಸ್ಥಳಗಳಲ್ಲಿ ಒಂದಾಗಿರುವ ಉಳ್ಳಾಲವನ್ನು ಈ ನಾಡಿನ ಅರಸು ಮನೆತನಗಳಲ್ಲಿ ಒಂದಾದ ಚೌಟರು ತಮ್ಮ ಒಂದು ಶಾಖೆಯನ್ನಾಗಿ ಸಮರ್ಥವಾಗಿ ಆಳ್ವಿಕೆ ನಡೆಸಿರುವರು. ವಿದೇಶಿ ಬರಹಗಾರರ ಬರಹಗಳಲ್ಲಿ ಉಳ್ಳಾಲ ಮತ್ತು ರಾಣಿ ಅಬ್ಬಕ್ಕನ ಉಲ್ಲೇಖ ಅನೇಖ ಬಾರಿ ಬಂದು ಅದೊಂದು ಅವಿಸ್ಮರಣೀಯವಾದ ಹೆಸರಾಗಿಬಿಟ್ಟಿದೆ. ಉಳ್ಳಾಲದ ಪ್ರಾಕೃತಿಕ ಸನ್ನಿವೇಶವನ್ನು ಅವಲೋಕಿಸುವಾಗ ನೇತ್ರಾವತಿ ನದಿಯ ಸಮುದ್ರ ಸಂಗಮ ಸ್ಥಳಕ್ಕೆ ಹೊಂದಿಕೊಂಡು ಈ ಊರು ಇರುವುದರಿಂದ ಇದೊಂದು ಉತ್ತಮ ರೇವು ಸ್ಥಳವಾಗಿ ಮಾರ್ಪಟ್ಟಿದೆ . ಅಂತೆಯೇ ಇತರ ಪ್ರದೇಶಗಳೊಂದಿಗೆ ಜಲಸಂಪರ್ಕದಿಂದಾಗಿ ಇದು ಪ್ರಾಚೀನ ವ್ಯಾಪಾರ ಕೇಂದ್ರವೆನಿಸಿತ್ತು. 12

ಉಳ್ಳಾಲ ಎಂಬುದು ಉಳ್+ಆಲ ಎಂಬ ಕೂಡುನುಡಿಯಾಗಿದ್ದು ಇದರ ಅರ್ಥ ಒಳಗೆ+ನೀರು ಎಂದಾಗಿದೆ. ಸಮುದ್ರದ ಹಾಗೂ ನದಿಯ ದಡದಲ್ಲಿರುವ ಸ್ಥಳವಾದುದರಿಂದ ನೀರು ಊರೊಳಕ್ಕೆ ಚಾಚಿಕೊಂಡಿರುವ ಸ್ಥಿತಿಯನ್ನು ಇಲ್ಲಿ ಕಾಣಬಹುದು. ಕ್ರಿ ಶ 1175ರಲ್ಲಿ ತುಳುನಾಡಿಗೆ ಭೇಟಿನೀಡಿದ ಇದ್ರಾನ್ ಮಸೂದಿ ಎಂಬ ಪ್ರವಾಸಿ ಮಂಗಳೂರಿನಿಂದ ಮಣೇಲ್‌ಗೆ ಪ್ರಯಾಣಿಸಿ ಅಲ್ಲಿ ಹಲವಾರು ವ್ಯಾಪಾರಿಗಳಿರುವುದನ್ನು, ಹೊಳೆಯ ಬದಿಯಲ್ಲೊಂದು ಮಸೀದಿ ಕಟ್ಟಲು ಈ ಪ್ರವಾಸಿಗನಿಗೆ ಸ್ಥಳೀಯ ಜನರು ಅನುಮತಿ ನೀಡಿದರೆಂದು ಹೇಳಲಾಗಿದೆ. 13

ಉಳ್ಳಾಲದ ಭೂಸ್ಥಿತಿಯ ವಿವರಣೆ ಉಳ್ಳಾಲ ರಾಣಿ, ಅಲ್ಲಿನ ಅರಮನೆ, ದೇವಸ್ಥಾನ, ಕೋಟೆ, ಪೇಟೆ ಕೃಷಿ, ವ್ಯಾಪಾರಗಳ ಬಗ್ಗೆ ಸಾಕಷ್ಟು ವಿವರವನ್ನು ಕ್ರಿ ಶ 1623 ರಲ್ಲಿ ಇಲ್ಲಿಗೆ ಭೇಟಿ ನೀಡಿದ ಇಟಲಿಯ ಪ್ರವಾಸಿ ಪಿಯಾತ್ರೊ ಡೆಲ್ಲವೆಲ್ಲೆಯು ದಾಖಲಿಸಿದ್ದಾನೆ. ಉಳ್ಳಾಲವನ್ನು ಒಳಾಲವೆಂದು ಕರೆದ ಡೆಲ್ಲವೆಲ್ಲೆ, ಇಲ್ಲಿಯ ರಾಣಿ ಅಬ್ಬಕ್ಕ ದೇವಿ ಎಂದು ಸೂಚಿಸಿದ್ದಾನೆ. ಒಳಾಲದ ರಾಣಿಯ ನಾಡಾದ ಮಣೇಲ್ ಪ್ರವೇಶಿಸಿ, ಅಲ್ಲಿನ ಬೀದಿ, ಅಲ್ಲಿರುವ ಮನೆಗಳು, ಸುತ್ತಮುತ್ತಲಿನ ಸೊಗಸಾದ ಪ್ರದೇಶವನ್ನು

ಒಟ್ಟಾಗಿ ಮಣೇಲ್ ಎಂದೂ, ಒಳಾಲದ ರಾಣಿಯ ಮತ್ತು ಆಕೆಯ ಮನೆತನದ ದೇವರು ಸೋಮನಾಥನೆಂದೂ ಡೆಲ್ಲವೆಲ್ಲೆ ಸೂಚಿಸಿದ್ದಾನೆ. 14

ಎನ್. ಎ. ಶೀನಪ್ಪ ಹೆಗಡೆಯವರ ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಯಲ್ಲಿ ಉಳ್ಳಾಲದ ಶಾಸನದ ಯಥಾ ನಕಲನ್ನು ಪ್ರಕಟಿಸಿ, ಅದರಲ್ಲಿ ಉಳ್ಳಾಲವನ್ನು ನಾನೂರಾಳರ ಸೀಮೆ ಎಂದು ಹೇಳಲಾಗಿದೆ. ಅದೇ ರೀತಿ ಗಣಪತಿ ರಾವ್ ಐಗಳ ದಕ್ಷಿಣ ಕನ್ನಡದ ಪ್ರಾಚೀನ ಇತಿಹಾಸ, ಕೇಶವ ಕುಡ್ವರ ದಕ್ಷಿಣ ಕನ್ನಡದ ಇತಿಹಾಸ, ಡಾ. ಪಿ. ಗುರುರಾಜ ಭಟ್ಟರ ಸ್ಟಡೀಸ್ ಇನ್ ತುಳುವ ಹಿಸ್ಟರಿ ಆ್ಯಂಡ್ ಕಲ್ಚರ್, ಕರ್ನಾಟಕ ಗಜೆಟ್ಟಿಯರ್, ಜಿ. ಎಂ. ಮೊರಾಸ್‌ರ ಮಂಗಳೂರು(1927), ಪ್ರೊ. ಸಿ. ಜೆ. ವಾರ್ಕಿಯವರ ಹಿಸ್ಟರಿ ಆಫ್ ಉಳ್ಳಾಲ್ ಇತ್ಯಾದಿಗಳಲ್ಲಿ ಉಳ್ಳಾಲ ಮತ್ತು ಉಳ್ಳಾಲದ ರಾಣಿಯ ವಿಚಾರ ಉಲ್ಲೇಖಗೊಂಡಿದೆ. 15

ಅದೇ ರೀತಿ ಡಾ। ಕೆ. ಜಿ. ವಸಂತಮಾಧವರ "ಅಬ್ಬಕ್ಕ ದೇವಿಯರು" ಎಂಬ ಕೃತಿಯು ಉಳ್ಳಾಳದ ಅಬ್ಬಕ್ಕ ದೇವಿಯರ ಬಗ್ಗೆ ಉಪಯುಕ್ತವಾದ ಮಾಹಿತಿಯನ್ನು ನೀಡುತ್ತದೆ. ಈ ಕೃತಿಯಲ್ಲಿ ಅವರು ಅಬ್ಬಕ್ಕ ದೇವಿಯರ ಕಾಲಕ್ಕೆ ಸಂಬಂಧಪಟ್ಟಂತೆ ನಾನಾ ರೀತಿಯ ಆಕರಗಳು, ಹಿರಿಯ, ಕಿರಿಯ ಅಬ್ಬಕ್ಕದೇವಿಯರು ಅವರ ಆಳ್ವಿಕೆಯ ಬಗ್ಗೆ ಧಾರಾಳವಾದ ಮಾಹಿತಿಯನ್ನು ನೀಡುತ್ತಾರೆ. 16

ತುಳುನಾಡಿನ ಕೆಲವು ದೈವಗಳಿಗೆ ಸಂಬಂಧಿಸಿದ ಪಾಡ್ದನ ವಾದ ಬಬ್ಬರ್ಯನ ಒಂದು ಪಾಡ್ದನದಲ್ಲಿ ಉಳ್ಳಾಲದ ಪ್ರಸ್ತಾಪ ಬರುತ್ತದೆ. ಎ. ಮೇನರ್ ರವರ ಪಾಡ್ದನೊಳು(1886) ಎಂಬ ಸಂಕಲನದಲ್ಲಿ ಉಳ್ಳಾಲದ ಸೋಮನಾಥ ದೇವರ, ಅರಸರ ಬಗ್ಗೆ ಉಲ್ಲೇಖವಿದೆ. ಉಳ್ಳಾಲವು 16ನೇ ಶತಮಾನದ ಪ್ರಮುಖ ರಾಜಕೀಯ ಮತ್ತು ವ್ಯಾಪಾರ ಕೇಂದ್ರವಾಗಿದೆ. ರಾಜಕೀಯವಾಗಿ ಇಲ್ಲಿನ ಆಡಳಿತ ನಡೆಸಿದ ಕಿರಿಯ ರಾಣಿ ಅಬ್ಬಕ್ಕ, ಜೈನ ಮತಾವಲಂಬಿಯಾದ ಇವಳು ಪುತ್ತಿಗೆ ಮೂಲದ ಚೌಟ ರಾಜಮನೆತನಕ್ಕೆ ಸೇರಿದವಳು ಹಾಗೂ ಉಳ್ಳಾಲವನ್ನು ಕೇಂದ್ರವಾಗಿಟ್ಟುಕೊಂಡು ಸ್ವತಂತ್ರವಾಗಿ ಆಡಳಿತ ನಡೆಸುತ್ತಿದ್ದಳೆಂದು ಪಿಯಾತ್ರೊ ಡೆಲ್ಲವೆಲ್ಲೆ ಹೇಳುತ್ತಾನೆ. 17

ಸಣ್ಣದೊಂದು ಜೈನ ಅರಸೊತ್ತಿಗೆಯ ಸ್ಥಳವಾಗಿದ್ದರೂ ಉಳ್ಳಾಲವೂ ದ.ಕ ಜಿಲ್ಲೆಯ ಪ್ರಾಚೀನ ಇತಿಹಾಸದಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದುದರಿಂದ ಮಂಗಳೂರಿನ ಪ್ರಾಚೀನ ಚರಿತ್ರೆಯ ಅನ್ವೇಷಣೆಯ ಕುರಿತು ಹಲಕಾರಿಯಾಗಿದೆಯೆಂದು ರೆ. ಫಾ. ಮೂರ್ ಅಭಿಪ್ರಾಯಪಡುತ್ತಾರೆ. 1565ರ ತಾಳಿಕೋಟೆ ಕದನದಲ್ಲಿ ವಿಜಯನಗರದ ಪತನದೊಂದಿಗೆ ಕೆನರಾ ಜಿಲ್ಲೆಯುಲ್ಲಿ ಹಲವು ಸ್ವತಂತ್ರ ಅರಸು ಮನೆತನಗಳು ಮೂಡಿ ಬಂದುದರಲ್ಲಿ ಚೌಟ ವಂಶದ ಉಳ್ಳಾಳ ಶಾಖೆಯು ಒಂದು. ಡೆಲ್ಲವೆಲ್ಲೆಯನ್ನು ಒಳಗೊಂಡು ಪೋರ್ಚುಗೀಸರು ಉಳ್ಳಾಳಕ್ಕೆ ಸಂಬಂಧಿಸಿ ಬರೆದ ದಾಖಲೆಗಳಲ್ಲಿ ಹೆಚ್ಚಾಗಿ 'ಉಳ್ಳಾಲ

ರಾಣಿ' ಎಂಬ ಪ್ರಸ್ತಾಪವೇ ಬರುತ್ತದೆ. ಪೋರ್ಚುಗೀಸರ ಕಾಲಘಟ್ಟದಲ್ಲಿ ಉಳ್ಳಾಲ ರಾಣಿಗೆ ಸಂದ ಪ್ರಾಶಸ್ತ್ಯವನ್ನು ಗಮನಿಸಿದರೆ ಆಕೆ ಆ ಕಾಲದ ಮಹತ್ವದ ರಾಣಿ ಎಂದೂ, ದಕ್ಷಿಣ ಕನ್ನಡದ ಕಪ್ಪಕೊಡುವ ಮುಖ್ಯ ಅರಸೊತ್ತಿಗೆ ಆಕೆಯದೆಂದು ಉಲ್ಲೇಖಿಸಿದ್ದಾರೆ. 18

ರಾಣಿ ಅಬ್ಬಕ್ಕಳು ಬಂಡಾಯ ರಾಣಿಯಾಗಿ, ಪುರುಷ ಪ್ರಧಾನ ಸಮಾಜದ ವಿರುದ್ಧ ಸೆಟೆದು ನಿಂತ ಉದಾಹರಣೆ ಇದೆ. ತನ್ನ ಪತಿ ಲಕ್ಷ್ಮಪ್ಪ ಬಂಗರಸ ಪೋರ್ಚುಗೀಸರಿಗೆ ಬೆದರಿ ಅವರಿಗೆ ಕಪ್ಪ ಕೊಡುವುದನ್ನು ನಿಲ್ಲಿಸುವಂತೆ ತಾಕೀತು ಮಾಡಿದ್ದಳು. ಆದರೆ ಬಂಗರಸ ಅವಳ ಮಾತನ್ನು ದಿಕ್ಕರಿಸಿದಾಗ, ಸ್ವಾಭಿಮಾನಿ ಅಬ್ಬಕ್ಕ ಆತ ನೀಡಿದ ಒಡವೆಗಳನ್ನು ಹಿಂದಿರುಗಿಸಿ ಆತನಿಂದ ದೂರ ನಡೆದಿದ್ದಳು. ಮಾತ್ರವಲ್ಲದೇ ನಾಡಿನ ಅಭಿವೃದ್ಧಿಗಾಗಿ ವ್ಯಯವಾಗಬೇಕಿದ್ದ ತೆರಿಗೆ ಸುಂಕದ ಹಣವನ್ನು, ವ್ಯಾಪಾರಕ್ಕಾಗಿ ಬಂದು ಮೋಸದ ಮೂಲಕ ಸಾಮ್ರಾಜ್ಯ ಬೆಳೆಸಿಕೊಂಡ ಪೋರ್ಚುಗೀಸರಿಗೆ ಕೊಟ್ಟು ಅವರಿಗೆ ಅಡಿಯಾಳಾಗಿ ಬದುಕುವ ಬದಲು, ಹೋರಾಡಿ ಸಾಯುವುದೇ ಲೇಸು ಎಂದು ರಾಣಿ ಅಬ್ಬಕ್ಕ ಪ್ರತಿಪಾದಿಸಿದ್ದಳು. 19

ರಾಣಿ ಅಬ್ಬಕ್ಕ ಮತ್ತು ಮುಸ್ಲಿಮರು

ಈ ಅಬ್ಬಕ್ಕ ರಾಣಿಯ ಸೈನ್ಯದಲ್ಲಿ ಸ್ಥಳೀಯ ಮುಸ್ಲಿಮರು ಬಹುಸಂಖ್ಯೆಯಲ್ಲಿದ್ದರು. ಮಾತ್ರವಲ್ಲದೇ ಆಕೆ ನಡೆಸಿದ ಯುದ್ಧಗಳಲ್ಲಿ ಆಕೆಗೆ ಹೆಗಲು ಕೊಟ್ಟು ವೀರಾವೇಶದಿಂದ ಹೋರಾಡಿದ್ದರು. ರಾಣಿಯನ್ನು ಆಕೆಯ ಸೀಮೆಯಲ್ಲಿದ್ದ ಮುಸ್ಲಿಮರು ಅದಮ್ಯವಾಗಿ ಪ್ರೀತಿಸುತ್ತಿದ್ದರು. ರಾಣಿ ಅಬ್ಬಕ್ಕನ ಕಾಲದಲ್ಲಿ ಅವಳ ಸೀಮೆಯಲ್ಲಿ ಮತೀಯ ಸಾಮರಸ್ಯವಿತ್ತು. ಮಾತ್ರವಲ್ಲದೇ ಅವಳ ಸೈನ್ಯದಲ್ಲಿ ಹಿಂದೂಗಳಂತೇ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿದ್ದರು. ಆಕೆಯ ಅಂಗರಕ್ಷಕರಾಗಿ ಅಕ್ಕಪಕ್ಕದಲ್ಲಿ ಒಬ್ಬ ಮುಸಲ್ಮಾನ ಹಾಗೂ ಒಬ್ಬ ಹಿಂದೂ ಸದಾ ಇದ್ದರೆಂದು ಡಾ ಅಮೃತ ಸೋಮೇಶ್ವರರು ಉಲ್ಲೇಖಿಸಿದ್ದಾರೆ. 20

16ನೇ ಶತಮಾನದ ಆದಿ ಭಾಗದಲ್ಲಿ ವಾಸ್ಕೋಡಗಾಮನು ಭಾರತಕ್ಕೆ ಬಂದಾಗ, ಯಾರೂ ಮೂರರೊಂದಿಗೆ(ಮುಸ್ಲಿಮರೊಂದಿಗೆ) ವ್ಯಾಪಾರ ಮಾಡಬಾರದು, ಜಾಮೂರಿನ್ ದೊರೆ ಮೂರರನ್ನು ಓಡಿಸಲು ನಿರಾಕರಿಸಿದ್ದರಿಂದ ಆತನೊಂದಿಗೆ ವ್ಯವಹರಿಸಬಾರದು ಎಂದು ತಾಕೀತು ಮಾಡಿದ್ದನು. ಈ ತಾಕೀತಿನಿಂದ ಉಳ್ಳಾಲ ಸೇರಿದಂತೆ ತುಳುನಾಡಿನ ಹೆಚ್ಚಿನ ಎಲ್ಲಾ ವ್ಯಾಪಾರ ಕೇಂದ್ರಗಳಲ್ಲಿ ಮುಸ್ಲಿಮರ ಪ್ರಭಾವವಿರುವುದನ್ನು ಗ್ರಹಿಸಬಹುದಾಗಿದೆ.

ಕ್ರಿ. ಶ.1567ರಲ್ಲಿ ಉಳ್ಳಾಲದಲ್ಲಿ ರಾಣಿ ಅಬ್ಬಕ್ಕನ ಅರಮನೆಗೆ ದಾಳಿಯಿಟ್ಟ ಪೋರ್ಚುಗೀಸರು, ಜನರಲ್ ಪಿಕ್ಸಾಟೊನ ನೇತೃತ್ವದಲ್ಲಿ ಅದನ್ನು ವಶಪಡಿಸಿಕೊಂಡರು. ಈ ಸಮಯದಲ್ಲಿ ರಾಣಿ ಅಬ್ಬಕ್ಕ

ಅರಮನೆಯಿಂದ ತಪ್ಪಿಸಿಕೊಂಡು ಉಳ್ಳಾಲದ ಅಳೇಕಲ್ ಮಸೀದಿಯಲ್ಲಿ ಅಡಗಿ ಕುಳಿತಳು. ಪೊರ್ಚುಗೀಸ್ ಜನರಲ್ ಮತ್ತವನ ಸೈನಿಕರು ಗೆಲುವಿನ ಸಂತೋಷದಿಂದ ರಾತ್ರಿ ಕುಡಿದು ನರ್ತಿಸುತ್ತಿದಾಗ, ರಾಣಿ ತನ್ನ ಮುಸ್ಲಿಂ ಸೈನ್ಯದೊಂದಿಗೆ ಮರು ದಾಳಿ ನಡೆಸಿ, ಜನರಲ್ ಪಿಕ್ಸಾಟೊ ಮತ್ತು ಆತನ 70 ಸೈನಿಕರನ್ನೂ ಕೊಂದಳು. ಈ ಗೆಲುವು ರಾಣಿ ಮತ್ತು ಮುಸ್ಲಿಮರಲ್ಲಿ ಆತ್ಮಸ್ಥೈರ್ಯ ನೀಡಿತು. ಇದು ಆ ಕಾಲದ ಅಂತರಾಷ್ಟ್ರೀಯ ಸುದ್ದಿಯಾಗಿತ್ತು. 21

ಅದೇ ರೀತಿ ಮತ್ತೊಂದು ಪೊರ್ಚುಗೀಸರ ಆಕ್ರಮಣ, ವೈಸರಾಯ್ ಅಂತೋನಿ ನೊರೋನ್ಹನ ನೇತೃತ್ವದಲ್ಲಿ ಸಜ್ಜುಗೊಂಡಾಗ, ಸುಮಾರು ಐನೂರು ಮುಸ್ಲಿಂ ಯುವಕರು ಹಠಾತ್ ದಾಳಿ ಮಾಡಿ, ಪೋರ್ಚುಗೀಸ್ ಹಡಗುಗಳನ್ನು ಬೆಂಕಿಗಾಹುತಿ ಮಾಡಿ ಎಡ್ಮಿರಲ್ ನೊರೋನ್ಹ ಮತ್ತು 50 ಪೋರ್ಚುಗೀಸ್ ನಾವಿಕರನ್ನು ಹತ್ಯೆಗೆಯ್ಯಲಾಯಿತು. ಕ್ರಿ ಶ 1569ರಲ್ಲಿ ಪೋರ್ಚುಗೀಸರು ರಾಣಿ ಅಬ್ಬಕ್ಕನ ಕೋಟೆಯನ್ನು ಪುಡಿಗೈದರು.ಈ ಸಂದರ್ಭದಲ್ಲಿ ರಾಣಿ ಅಬ್ಬಕ್ಕ ಪೋರ್ಚುಗೀಸರಿಗೆ ಬಲವಾದ ಪ್ರತಿರೋಧ ಒಡ್ಡಿದಳು. ಉಳ್ಳಾಲದ ರಾಣಿ ಕಲ್ಲಿಕೋಟೆಯ ರಾಜ ಝಮೋರಿನ್‌ನೊಂದಿಗೆ ಮಾಡಿದ ಒಪ್ಪಂದದ ಪ್ರಕಾರ ಅವನ ದಳಪತಿಯಾದ "ಕುಟ್ಟಿಪ್ಪೋಕರ್" ರಾಣಿ ಅಬ್ಬಕ್ಕನ ಪರವಾಗಿ ಹೋರಾಡಿ ಪೋರ್ಚುಗೀಸರ ಮಂಗಳೂರು ಕೋಟೆಯನ್ನು ನಾಶಮಾಡಿದ. ಆದರೆ ಆ ಗೆಲುವಿನೊಂದಿಗೆ ಕಲ್ಲಿಕೋಟೆಗೆ ಹಿಂದಿರುಗುತ್ತಿದ್ದಾಗ ಪೋರ್ಚುಗೀಸರ ಪ್ರಬಲ ನೌಕಾಪಡೆಯೊಂದಿಗೆ ಹೋರಾಡಿ ಬಲಿಯಾದ. ಇದು ಅಬ್ಬಕ್ಕ ರಾಣಿ ಮುಸ್ಲಿಮರೊಂದಿಗೆ ಇಟ್ಟುಕೊಂಡ ಸೌಹಾರ್ದದ ಕೊಂಡಿಗೆ ಮತ್ತು ಮುಸ್ಲಿಮರು ರಾಣಿ ಪರವಾಗಿ ನಡೆಸಿದ ತ್ಯಾಗಗಳಿಗೆ ಐತಿಹಾಸಿಕ ಸಾಕ್ಷಿಯಾಗಿದೆ. 22

ಅಬ್ಬಕ್ಕ ರಾಣಿಯ ಸೈನ್ಯದಲ್ಲಿ ಸ್ಥಳೀಯ ಬ್ಯಾರಿಗಳು ಸೈನಿಕರಾಗಿ ದುಡಿಯುತ್ತಿದ್ದು, 'ಬಾವ' ಎಂಬ ಪದ ಒಂದು ಸೇನಾ ಪದವಾಗಿತ್ತು ಎಂದು ಪ್ರೊ. ಬಿ. ಯಂ. ಇಚ್ಲಂಗೋಡು ಅಬಿಪ್ರಾಯ ಪಟ್ಟಿದ್ದಾರೆ. ಹಾಗೂ ಇಲ್ಲಿನ ಸ್ಥಳೀಯ ಬಬ್ಬರ್ಯ ದೈವ ಬಾವುಬ್ಯಾರಿ ಎಂಬ ನಂಬಿಕೆ ರೂಢಿಯಲ್ಲಿದೆ. ಆದುದರಿಂದ ಬಾವ ಎಂಬ ಹೆಸರು ಮತ್ತು ಪದ ಇಂದಿಗೂ ಬ್ಯಾರಿ ಸಮುದಾಯದಲ್ಲಿ ಉಳ್ಳಾಲವೂ ಸೇರಿದಂತೆ "ಎಂದ್ರೆ ಬಾವ" ಅಥವಾ "ಏನು ಮಾರಾಯ(ಮಹಾರಾಯ)" ಎಂಬಂತೆ ಜನಜನಿತವಾಗಿದೆ. ಇದು ರಾಣಿ ಅಬ್ಬಕ್ಕ ಮತ್ತು ಮುಸ್ಲಿಮರ ನಡುವೆ ಇದ್ದ ಅನ್ಯೋನ್ಯತೆಗೆ ಸಾಕ್ಷಿಯಾಗಿದೆ. 23

ಆಕರ ಸೂಚಿ

1. ಡಾ। ಕೆ.ವಿ ರಮೇಶ್, *'ಎ ಹಿಸ್ಟರಿ ಆಫ್ ಸೌತ್ ಕೆನರಾ'*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 1970 ಪು. 253 ಮತ್ತು ಕೆ. ಎಮ್. ಫಣಿಕ್ಕರ್, *'ಜಿಯೋಗ್ರಫಿಕಲ್ ಫ್ಯಾಕ್ಟರ್ ಇನ್ ಇಂಡಿಯನ್ ಹಿಸ್ಟರಿ'*, ಬಾಂಬೆ 1948 ಪು. 59.

2. ಎಸ್. ಮಿಲೆ, *'ಕೆನರಾ ಪಾಸ್ಟ್ ಎಂಡ್ ಪ್ರಸೆಂಟ್'* ಮಂಗಳೂರು 1875 ಪು. 4, 5.

3. ಗೋಪಾಲನ್ ನಾಯಕ್ ಸಿ., *'ಮಾಪಿಳ್ಳಾಸ್ ಆಫ್ ಮಲಬಾರ್'*, ಬಾಸೆಲ್‌ಮಿಶನ್ ಮಂಗಳೂರು 1922 ಪು. 26

4. ಅದೇ ಪು. 27

5. ಡಾ। ಕೆ. ಈ. ವಸಂತ ಮಾಧವ, *'ಪೊಲಿ (ಸಂ) ಕೆನರಾ 200'*– ಜಿಲ್ಲೆಯ ಇತಿಹಾಸಕ್ಕೆ ವಿದೇಶಿ ಆಕರಗಳು 1800ರ ವರೆಗೆ, ಜಿಲ್ಲಾಧಿಕಾರಿ ಮಂಗಳೂರು 2000 ಪು. 46–51

6. ಡಾ। ವಹ್ಹಾಬ್ ದೊಡ್ಡಮನಿ, *'ತುಳುನಾಡ ಮುಸ್ಲಿಮರು'* ಗ್ರೀನ್ ವರ್ಡ್ಸ್ ಮಂಗಳೂರು 2008 ಪು. 30

7. ಅದೇ – ಪು. 31

8. ಬಿ. ಎಂ. ಇಚ್ಲಂಗೋಡು, *'ಪೊಲಿ (ಸಂ) ಕೆನರಾ 200'* ಬ್ಯಾರಿ ಬೆಳೆದು ಬಂದ ದಾರಿ, ಜಿಲ್ಲಾಧಿಕಾರಿ, ಮಂಗಳೂರು 2000, ಪು. 522–528

9. ಗಣಪತಿ ರಾವ್ ಐಗಳ್, *ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ*–ಶಾರದಾ ಪ್ರೆಸ್ ಮಂಗಳೂರು – 1923

10. ಬಿ. ಎಂ. ಇಚ್ಲಂಗೋಡು, *'ಪೊಲಿ (ಸಂ) ಕೆನರಾ 200'* ಬ್ಯಾರಿ ಬೆಳೆದು ಬಂದ ದಾರಿ, ಜಿಲ್ಲಾಧಿಕಾರಿ, ಮಂಗಳೂರು 2000, ಪು. 522–528

11. ಬಿ. ಎ. ಸಾಲೆತ್ತೂರು *ಏನ್ಶಿಯಂಟ್ ಕರ್ನಾಟಕ, ತುಳುವ ಹಿಸ್ಟರಿ* ಸಂ. 1 ಪೂನ ಒರಿಯೆಂಟಲ್ ಬುಕ್ ಏಜೆನ್ಸಿ 1936 ಪು. 546

12. ಡಾ। ಅಮೃತ್ ಸೋಮೇಶ್ವರ, *ಉಳ್ಳಾಲ ಇತಿಆದಿ (ಸಂ)*, ಉಳ್ಳಾಲ ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪು. 67

13. ಅದೇ ಪು. 68

14. ಎಡ್ವರ್ಡ್ ಗ್ರೇ *ದಿ ಟ್ರಾವೆಲ್ಸ್ ಆಫ್ ಪಿಯಾತ್ರೊ ಡೆಲ್ಲವೆಲ್ಲೆ* (ಭಾಷಾಂತರ ಹ್ಯಾವರ್ಸ್) ಇ. ಇ. ಜಿ. ಪು. 311, 312

15. ಡಾ। ಅಮೃತ್ ಸೋಮೇಶ್ವರ, *ಉಳ್ಳಾಲ ಇತಿಆದಿ (ಸಂ)*, ಉಳ್ಳಾಲ ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪು. 69

16. ಡಾ। ವಸಂತ ಮಾಧವ ಕೆ. ಜಿ., *ಅಬ್ಬಕ್ಕ ದೇವಿಯರು*, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪು. 5

17. ಡಾ। ಎಚ್. ಎಲ್. ನಾಗೇಗೌಡ, *ಪ್ರವಾಸಿ ಕಂಡ ಇಂಡಿಯ*, ಸಂ. 1 ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು 1983. ಪುಟ 173

18. ಸಿ. ಜೆ. ವಾರ್ಕಿ, (ಅನುವಾದ ಅಮೃತ ಸೋಮೇಶ್ವರ) ಉಳ್ಳಾಲ ಇತಿಆದಿ-ಸಂ. ಉಳ್ಳಾಲದ ಇತಿಹಾಸ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಪು. 2–27

19. ಮಹಮ್ಮದ್ ಇಸ್ಮತ್ ಫಜೀರ್, ಅಬ್ಬಕ್ಕಳ ಮರೆತರೇ ಇತಿಹಾಸಕಾರರು ?, ಪತ್ರಿಕಾ ಲೇಖನ ವಾರ್ತಾಭಾರತಿ ಫೆಬ್ರವರಿ 5, 2006

20. ಡಾ। ಅಮೃತ್ ಸೋಮೇಶ್ವರ, *ಉಳ್ಳಾಲ ಇತಿಆದಿ (ಸಂ)*, ಉಳ್ಳಾಲ ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪು. 76

21. ಡಾ। ವಹಾಬ್ ದೊಡ್ಡಮನಿ *ಉಳ್ಳಾಲ ಇತಿಆದಿ (ಸಂ)*, ಉಳ್ಳಾಲ ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪು. 30

22. ಡಾ। ವಹಾಬ್ ದೊಡ್ಡಮನಿ *ತುಳುನಾಡ ಮುಸ್ಲಿಮರು*, ಗ್ರೀನ್ ವರ್ಡ್ಸ್ ಮಂಗಳೂರು 2008 ಪು.45

23. ಬಿ.ಎಂ. ಇಚ್ಲಂಗೋಡು ಅವರ ಸಂದರ್ಶನದಲ್ಲಿ ದೊರಕಿದ ಮಾಹಿತಿ, ಮೇ 20 2008.

ಅಧ್ಯಾಯ 2

ಉಳ್ಳಾಲ ದರ್ಗಾದ ಇತಿಹಾಸ

ಉಳ್ಳಾಲ ಮತ್ತು ಇಸ್ಲಾಂ
ಇಸ್ಲಾಂನಲ್ಲಿ ದರ್ಗಾ ಸಂಪ್ರದಾಯ
ಭಾರತದಲ್ಲಿ ದರ್ಗಾ ಸಂಪ್ರದಾಯ
ಸೂಫಿ ತತ್ವ
ದಕ್ಷಿಣ ಭಾರತದಲ್ಲಿ ಸೂಫಿ ಸಂತರು
ತುಳುನಾಡಿನಲ್ಲಿ ಸೂಫಿ ಸಂತರು
ಉಳ್ಳಾಲದ ಸಂತ ಶರೀಫುಲ್ ಮದನಿ, ದರ್ಗಾ ಸಂತರ ಜೀವನ ಚರಿತ್ರೆ
ಉಳ್ಳಾಲ ಶರೀಫುಲ್ ಮದನಿ ದರ್ಗಾ
ಉಳ್ಳಾಲದಲ್ಲಿರುವ ಇತರ ದರ್ಗಾಗಳು–ಅರೇಕಲ, ಕೋಟೆಪುರ, ಕಡಪ್ಪುರ,
ಮಹಿಯುದ್ದೀನ್ ಬಾವ ದರ್ಗಾ

ಅಧ್ಯಾಯ 2

ಉಳ್ಳಾಲ ದರ್ಗಾದ ಇತಿಹಾಸ, ಸಯ್ಯದ್ ಮದನಿಯವರ ಜೀವನ ಚರಿತ್ರೆ, ಧಾರ್ಮಿಕ ಕೇಂದ್ರವಾಗಿ ಬೆಳೆದು ಬಂದ ರೀತಿ

ಉಳ್ಳಾಲ ಮತ್ತು ಇಸ್ಲಾಂ

ಉಳ್ಳಾಲದಲ್ಲಿ ಇಸ್ಲಾಂ ಪರಂಪರೆಗೆ ಪ್ರಾಚೀನ ಇತಿಹಾಸವಿದೆ. 7ನೇ ಶತಮಾನದಲ್ಲಿ ಇಸ್ಲಾಮಿನ ಸಂದೇಶಗಳು ಅರಬ್ ಸಾಗರ ವ್ಯವಹಾರಕ್ಕೆ ಹೊಸ ಚಾಲನೆ ನೀಡಿತು. ಅರಬರ ವ್ಯಾಪಾರ ಇಸ್ಲಾಮಿನ ಸಂದೇಶಗಳ ಪ್ರಚಾರಕ್ಕೆ ಪೂರಕವಾಯಿತು. ಉಳ್ಳಾಲವು ತುಳುನಾಡಿನ ಒಂದು ಪ್ರಮುಖ ವ್ಯಾಪಾರ ಕೇಂದ್ರವಾದುದರಿಂದ ಈ ಸಮಯದಲ್ಲೇ, ಇಸ್ಲಾಂ ಉಳ್ಳಾಲವನ್ನು ತಲುಪಿರುವ ಸಾಧ್ಯತೆ ಇದೆ. ಕೇರಳದ ಕಣ್ಣೂರು ಜಿಲ್ಲೆಯ ಪಯ್ಯಂಗಡಿ ಎಂಬಲ್ಲಿನ ಮಾಡಾಯಿ ಮಸೀದಿಯ ಬಾಗಿಲಿನ ಮರದಲ್ಲಿರುವ ಮಾಹಿತಿಯಂತೆ ಜಾಬಿರ್-ಬಿನ್-ಮಲಿಕ್ ಎಂಬವರನ್ನು ಕಾಸರಗೋಡು ಮತ್ತು ಉಳ್ಳಾಲಕ್ಕೆ ಹಿಜರಿ 21(ಅಂದಾಜು ಕ್ರಿ. ಶ. 643) ಖಾಝಿಯಾಗಿ ನೇಮಕ ಮಾಡಿದ ಬಗ್ಗೆ ಉಲ್ಲೇಖನವಿದೆ. ಈ ಮಾಹಿತಿಯಿಂದ ಉಳ್ಳಾಲದಲ್ಲಿ ಸುಮಾರು 7ನೇ ಶತಮಾನದಲ್ಲೇ ಮಸೀದಿ ಅಸ್ತಿತ್ವದಲ್ಲಿತ್ತು ಎಂಬ ಅಂಶ ಬೆಳಕಿಗೆ ಬರುತ್ತದೆ. "ಉಳ್ಳಾಲವೂ ಸೇರಿದಂತೆ ಪಶ್ಚಿಮ ಕರಾವಳಿಯಲ್ಲಿ ಮುಸ್ಲಿಮರು 7ನೇ ಶತಮಾನದ ಮಧ್ಯಭಾಗದಲ್ಲಿ ಅನಧಿಕೃತವಾಗಿ ಅರಬೀ ವರ್ತಕರ ರೂಪದಲ್ಲಿ ಇದ್ದರು ಎನ್ನುವುದು ಅಲ್ಲಗಳೆಯಲಾಗದ ಸಂಗತಿ". 1

ಕ್ರಿ ಶ 1175ರಲ್ಲಿ ಇದ್ರಿಸ್ ಮಸೂದಿ ಎಂಬ ಪ್ರವಾಸಿಗ ಉಳ್ಳಾಲದ ಸಮೀಪದ ಮಣೇಲ್‌ಗೆ ಪ್ರಯಾಣಿಸಿ ಅಲ್ಲಿನ ಹೊಳೆಯ ಬದಿಯಲ್ಲೊಂದು ಮಸೀದಿ ಕಟ್ಟಲು ಸ್ಥಳೀಯ ಜನರು ಅನುಮತಿ ನೀಡಿದ್ದರು ಎಂದು ಉಲ್ಲೇಖಿಸುತ್ತಾರೆ. 2

ಉಳ್ಳಾಲದಲ್ಲಿ ಜೆಂಟೈಲರು (ಹಿಂದೂ) ಮತ್ತು ಮೂರರು (ಮುಸ್ಲಿಮರು) ತುಂಬಾ ಸಂಖ್ಯೆ ಯಲ್ಲಿದ್ದಾರೆ ಹಾಗೂ ಅವರ ಮಂದಿರ ಮಸೀದಿಗಳು ತುಂಬಾ ಇವೆ ಎಂದು ಕ್ರಿ. ಶ. 1623 ರಲ್ಲಿ ಇಲ್ಲಿಗೆ ಭೇಟಿ ನೀಡಿದ ಇಟಲಿಯ ಪ್ರವಾಸಿಗ ಪಿಯಾತ್ರೊ ಡೆಲ್ಲವೆಲ್ಲೆಯು ದಾಖಲಿಸಿದ್ದಾನೆ. ಪಿಯಾತ್ರೊ ಡೆಲ್ಲವೆಲ್ಲೆ ರಾಣಿ ಅಬ್ಬಕ್ಕನನ್ನು ಸಂದರ್ಶಿಸಿದ ನಂತರ ಮುಸ್ಲಿಮ್(ಮೂರ)ನಿಗೆ ಸೇರಿದ ಮನೆಯಲ್ಲಿ ಬಿಡಾರ ಹೂಡಿದ್ದು, ಮತ್ತೊಬ್ಬ ಮೂರನ(ಮುಸ್ಲಿಮನ) ಮನೆಯಿಂದ ಮಾಂಸದೂಟವನ್ನು ಮಾಡಿಸಿ ತಂದದ್ದು

ಹಾಗೂ ಮೂರರ ಮಸೀದಿಯ ಬಗ್ಗೆ ಉಲ್ಲೇಖ ನೀಡುತ್ತಾನೆ. ಮಾತ್ರವಲ್ಲದೇ ಉಳ್ಳಾಲದಲ್ಲಿ ಅಬ್ಬಕ್ಕನ ಕಾಲದಲ್ಲಿ ಸಾಕಷ್ಟು ಮುಸ್ಲಿಮರು ಸೈನಿಕರಾಗಿ, ಸೈನಿಕ ಅಧಿಕಾರಿಗಳಾಗಿ, ವ್ಯಾಪಾರಿಗಳಾಗಿ ಇದ್ದುದು, ಇಸ್ಲಾಂ ಇಲ್ಲಿ 16ನೇ ಶತಮಾನದಲ್ಲೇ ವ್ಯಾಪಕವಾಗಿ ಪ್ರಚಾರವಾಗಿತ್ತು ಎಂಬುದನ್ನು ಸೂಚಿಸುತ್ತದೆ.

ಇನ್ನೊಂದು ಸಂದರ್ಭದಲ್ಲಿ ರಾಣಿಯೊಂದಿಗೆ ಸಂಭಾಷಣೆ ಮಾಡುತ್ತಿರುವಾಗ ರಾಣಿಯು ಪಿಯಾತ್ರೊ ಡೆಲ್ಲವೆಲ್ಲೆನ ದೇವರ ಬಗ್ಗೆ ಪ್ರಶ್ನಿಸುತ್ತಾಳೆ. ಆಗ ಪಿಯಾತ್ರೊ ಡೆಲ್ಲವೆಲ್ಲೆಯು 'ಸ್ವರ್ಗದಲ್ಲಿರುವ ಆ ಸೃಷ್ಟಿಕರ್ತ' ಎನ್ನುತ್ತಾನೆ. ಇದನ್ನು ಕೇಳಿ ಅಲ್ಲಿದ್ದ ಕೆಲವು ಮುಸ್ಲಿಂ ಸಿಪಾಯಿಗಳು ತಮ್ಮ ಮೆಚ್ಚುಗೆಯೆಂಬಂತೆ "ಹಾ। ಚೋಡಿಯಾ। ಚೋಡಿಯಾ। ಅಥವಾ ಹೇ। ಖುದಾ। ಖುದಾ। ಎಂದು ಉದ್ಗರಿಸಿದರು. ಈ ಮಾಹಿತಿ ಕೂಡಾ ಉಳ್ಳಾಲದಲ್ಲಿ ಮುಸ್ಲಿಮರು ಅಬ್ಬಕ್ಕನ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿರುವುದನ್ನು ಸೂಚಿಸುತ್ತದೆ. 3

ರಾಣಿ ಅಬ್ಬಕ್ಕ ಪೋರ್ಚುಗೀಸರೊಂದಿಗೆ ಹೋರಾಡಿ ಸೋತಾಗ ಅಳೇಕಲ್ಲಿನ ಮಸೀದಿಯಲ್ಲಿ ಅಡಗಿ ಕುಳಿತು ಮರುದಿನ ಮುಸ್ಲಿಂ ಸೈನಿಕರರ ಸಹಾಯದಿಂದ ಪೋರ್ಚುಗೀಸರನ್ನು ಸೋಲಿಸಿದಳು. ಈ ಆಶ್ರಯಕ್ಕೆ ಪ್ರತ್ಯುಪಕಾರವಾಗಿ ಅಳೇಕಲ್ಲು ಮಸೀದಿಯನ್ನು ಪುನರ್ನಿರ್ಮಾಣ ಮಾಡಿಸಿದ್ದಳು. ಎಂಬ ಉಲೇಖ ಇದೆ, ಮಾತ್ರವಲ್ಲದೇ ಅಳೇಕಲ್ಲಿನ ಕೆರೆಯ ಹಾಸುಕಲ್ಲಿನಲ್ಲಿ "ಅಬ್ಬಕ್ಕ ಚೌಟದಿ" ಎಂಬ ಬರಹವಿತ್ತು. ಪ್ರಾಯಶಃ ಇದು ರಾಣಿ ಅಬ್ಬಕ್ಕನ ಕೊಡುಗೆಯಾಗಿರಬಹುದು. 4

ಉಳ್ಳಾಲದಲ್ಲಿ ದೊರಕಿರುವ ಹಂಜಮಾನ ಶಾಸನದ ಪ್ರಕಾರ ಕ್ರಿ. ಶ. 1474ರಲ್ಲಿ ವಿಟ್ಟರಸ ಒಡೆಯನೆಂಬವನು ಮುಸ್ಲಿಮರಿಗೆ ಭೂಮಿ ದಾನ ಮಾಡಿದ ಬಗ್ಗೆ ಉಲ್ಲೇಖವಿದೆಯೆಂದು ಇತಿಹಾಸಕಾರ ಡಾ। ವಸಂತಮಾಧವರ ಅಭಿಪ್ರಾಯ.5

ಉಳ್ಳಾಲವೊಂದು ಪ್ರಮುಖ ವ್ಯಾಪಾರ ಕೇಂದ್ರವಾಗಿದ್ದು, ನೂರಾರು ಸರಕಿನ ಎತ್ತಿನ ಗಾಡಿಗಳು ಉಳ್ಳಾಲದ ರಾಜರಸ್ತೆಯಲ್ಲಿ ದಿನವೂ ಸಾಲಾಗಿ ಚಲಿಸುತ್ತಿದ್ದವು. ಅಂತೆಯೇ ನೇತ್ರಾವತಿ ನದಿಯಲ್ಲಿ ಸರಕಿನ ಮತ್ತು ಕಡವಿನ ದೋಣಿಗಳು ಓಡಾಡುತ್ತಿದ್ದವು. ಈ ದೋಣಿ ನಡೆಸುವವರಲ್ಲಿ ಹೆಚ್ಚಿನವರು ಮುಸ್ಲಿಮರಾಗಿದ್ದರು. ಉಳ್ಳಾಲದಲ್ಲಿ ಹಲವು ಭಂಡಸಾಲೆಗಳಿದ್ದು, ಅಲ್ಲಿಂದ ಇತರೆಡೆಗೆ ಅಕ್ಕಿ, ತೆಂಗಿನಕಾಯಿ, ಬೆಲ್ಲ, ಒಣಮೀನು, ದವಸಧಾನ್ಯ, ಹುರಿಹಗ್ಗ ಇತ್ಯಾದಿ ಇತರೆಡೆಗೆ ಸಾಗಾಟವಾಗುತ್ತಿತ್ತು. ಈ ವ್ಯಾಪಾರ ನಡೆಸುವರಲ್ಲಿ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿದ್ದರು, ಮಾತ್ರವಲ್ಲದೆ ಇತರ ಪ್ರಮುಖ ವೃತ್ತಿಯಾದ ಮೀನುಗಾರಿಕೆ, ಸುಣ್ಣ ಹಂಚಿನ ಉದ್ಯಮಗಳಲ್ಲೂ ಮುಸ್ಲಿಮರು ದೊಡ್ಡ ಸಂಖ್ಯೆಯಲ್ಲಿದ್ದರು. ಇಲ್ಲಿನ ಮುಸ್ಲಿಮರು ಇತರ ಧರ್ಮೀಯರೊಂದಿಗೆ ಬಾತೃತ್ವದಲ್ಲಿದ್ದರು. ಅಂದಿನ ಬ್ಯಾರಿ ಸಾಹುಕಾರರು ಸಾಮಂತ

ಅರಸರಿಗೆ ಕಪ್ಪ ಸಲ್ಲಿಸಲು ಸಾಲ ನೀಡುತ್ತಿದ್ದರು. ಈ ಎಲ್ಲ ಮಾಹಿತಿಗಳಿಂದ ಉಳ್ಳಾಳವು ತುಳುನಾಡಿನಲ್ಲಿ 15, 16ನೇ ಶತಮಾನದಲ್ಲೇ ಒಂದು ಪ್ರಮುಖ ಮುಸ್ಲಿಂ ಪ್ರದೇಶವಾಗಿತ್ತು ಎಂದು ಸೂಚಿಸುತ್ತದೆ.6

ದರ್ಗಾ ಸಂಪ್ರದಾಯ

ಇಸ್ಲಾಮಿನ ಒಂದು ಪ್ರಮುಖ ಪಂಗಡವಾದ ಸುನ್ನಿಗಳ ಆಶಯದಂತೆ ದರ್ಗಾ ಸಂಪ್ರದಾಯ, ಅದರಲ್ಲೂ ವಿಶೇಷವಾಗಿ ಭಾರತದಲ್ಲಿ ರೂಢಿಯಲ್ಲಿದೆ. ಇವರ ಪ್ರಕಾರ ಸಜ್ಜನರ ಅಥವಾ ಮಹಾತ್ಮರ ಗೋರಿ ಸಂದರ್ಶನ(ಖಬರ್ ಝಿಯಾರತ್) ಪುಣ್ಯ ಕಾರ್ಯವಾಗಿದೆ. ಮುಸ್ಲಿಮರ ದಫನ ಭೂಮಿಯಲ್ಲಿ ಸಜ್ಜನರ ಗೋರಿಗಳಿದ್ದರೆ, ಅವುಗಳು ನಾಶವಾಗದಂತೆ ಜೋಪಾನವಾಗಿರಿಸಲು ಮತ್ತು ಅವುಗಳ ಗೌರವ ಉಳಿಸಿಕೊಳ್ಳಲು ಅದರ ಮಣ್ಣನ್ನು ಎತ್ತರಿಸುವುದು, ಹಾಗೂ ಗೋರಿಯ ಸುತ್ತ ಕಟ್ಟಡ ಯಾ ಮುಖಾಂ ನಿರ್ಮಿಸುವುದು ಸಮ್ಮಾತಾರ್ಹವೆಂದು ಖ್ಯಾತ ಮುಸ್ಲಿಂ ಧಾರ್ಮಿಕ ಪಂಡಿತ ಇಮಾಂ ಬುಖಾರಿ ಉಲ್ಲೇಖಿಸಿದ ಪ್ರವಾದಿ ವಚನಗಳಲ್ಲಿದೆ. ಉದಾ:- ಪ್ರವಾದಿಯವರು ಆರ್ಜ್ ಎಂಬ ಪ್ರದೇಶದ ಹಿಂಬಾಗದ ಬೆಟ್ಟದ ಬದಿಯಲ್ಲಿ ಪ್ರಾರ್ಥನೆ ನಿರ್ವಹಿಸಿದ ಸಮೀಪದಲ್ಲಿ ಕಲ್ಲುಗಳಿಂದ ಎತ್ತರಿಸಲ್ಪಟ್ಟ 2 ಅಥವಾ 3 ಗೋರಿಗಳಿದ್ದವು. ಪ್ರವಾದಿಯವರ ಅಳಿಯ ಹರ್ಝುತ್ ಅಲಿಯ್ಯ್‌ರವರ ಗೋರಿ ಮದೀನಾದಲ್ಲಿದ್ದು, ಅದರಲ್ಲಿ ಖುಬ್ಬ ಯಾ ಗುಮ್ಮಟವಿತ್ತೆಂದು ಇಮಾಂ ನವವಿಯವರು ಉಲ್ಲೇಖಿಸಿದ್ದಾರೆ. ಅದೇ ರೀತಿ ಇಮಾಂ ಅಬೂ ಹನೀಫ್‌ರವರ ಗೋರಿಯ ಮೇಲೆ ಗುಮ್ಮಟವಿತ್ತೆಂದು ಝರ್ಕಶಿ ಎಂಬ ಪಂಡಿತರು ಸೂಚಿಸಿದ್ದಾರೆ. ಸಜ್ಜನರನ್ನು ಸಂದರ್ಶಿಸುವುದನ್ನು ಇಸ್ಲಾಂ ಪ್ರೋತ್ಸಾಹಿಸಿದೆ. ಅವರ ಉಪದೇಶಗಳನ್ನು ಆಲಿಸುವುದು, ಅವರಿಂದ ಜ್ಞಾನ ಕರಗತ ಮಾಡುವುದು, ಅವರಲ್ಲಿ ಸ್ನೇಹದಿಂದಿರುವುದು, ಅವರ ಸನ್ನಡತೆಯನ್ನು ಅನುಸರಿಸುವುದು, ಮೋಕ್ಷದ ದಾರಿಯನ್ನು ಕಾಣುವುದು ಹಾಗೂ ಸಜ್ಜನರ ಸಹವಾಸದಿಂದ ಜನರು ತಮ್ಮ ದುಶ್ಚಿಂತೆ, ದುರ್ನಡತೆಗಳನ್ನು ಹೋಗಲಾಡಿಸಿ ಉತ್ತಮ ಜೀವನ ನಡೆಸುವಲ್ಲಿ ನಿರ್ಣಾಯಕ ಪಾತ್ರವಹಿಸುತ್ತದೆ.7

ಪ್ರವಾದಿ ಮುಹಮ್ಮದರ ಬಳಿಕ ಇಸ್ಲಾಮೀ ತತ್ವಗಳ ಪ್ರಚಾರದ ಹೊಣೆಯನ್ನು ಸಜ್ಜನ ಸರಣಿಯರಾದ ಸ್ವಹಾಬಿಗಳು (ಪ್ರವಾದಿಯವರ ಅನುಯಾಯಿಗಳು), ಉಲೇಮಾಗಳು, ಮಹಾತ್ಮರು, ಔಲಿಯಾಗಳು, ಹೊತ್ತುಕೊಂಡು, ನಿರಂತರವಾಗಿ ಇಸ್ಲಾಂನ್ನು ಜಗತ್ತಿನ ಬೇರೆ ಪ್ರದೇಶಗಳಲ್ಲಿ ತಲುಪಿಸಿದ್ದಾರೆ. ಮುಸ್ಲಿಂ ಜಗತ್ತು ಔಲಿಯಾಗಳನ್ನು ಸುಮಾರು 1400 ವರ್ಷಗಳಿಂದೀಚೆಗೆ ಗೌರವಿಸುತ್ತಾ ಬಂದಿದೆ. ಅವರ ಅಸಾಧಾರಣ ಶಕ್ತಿಯಲ್ಲಿ ನಂಬಿಕೆಯಿರಿಸಿ, ತಮ್ಮ ಕಷ್ಟನಿವಾರಣೆಗಾಗಿ, ಅವರಿಗೆ ಅಲ್ಲಾಹನು ನೀಡುವ ಅಭೌತಿಕವಾದ ಸಹಾಯವನ್ನು ಯಾಚಿಸುತ್ತಾ ಬಂದಿದೆ.

ಇಸ್ಲಾಂನಲ್ಲಿ ಸಂತರನ್ನು ಔಲಿಯಾ ಎಂದು ಕರೆಯುತ್ತಾರೆ. ಔಲಿಯಾ ಎಂಬುದು 'ವಲಿಯ್ಯ್' ಎಂಬ ಪದದ ಬಹುವಚನ. ವಲಿಯ್ಯ್ ಎಂದರೆ ನಿಕಟವರ್ತಿಯೆಂದು ಅರ್ಥ. ನಿಷ್ಕಳಂಕತೆ ಹಾಗೂ ವಿಧೇಯತೆಗಳ ಮೂಲಕ ದಾಸನು ಅಲ್ಲಾಹನಿಗೂ, ದಯಕರುಣೆಗಳಿಂದ ಅಲ್ಲಾಹು ದಾಸನಿಗೂ ನಿಕಟನಾಗುವನು ಎಂಬುದು ಇದರ ತಾತ್ಪರ್ಯ. ಅಲ್ಲಾಹನನ್ನು, ಅವನ ವಿಶೇಷತೆಗಳನ್ನು, ಸಾಧ್ಯವಿದ್ದಷ್ಟರ ಮಟ್ಟಿಗೆ ಅರಿತು, ಸತ್ಕರ್ಮಗಳನ್ನು ರೂಡಿಸುತ್ತಾ, ದುಷ್ಟಟಗಳನ್ನು ಸಂಪೂರ್ಣವಾಗಿ ತ್ಯಜಿಸಿ ಸ್ವೇಚ್ಛೆಯ ದಾಸನಾಗದವನೇ ವಲಿಯ್ಯ್ ಎಂದು ಸಅದುದ್ದೀನ್ ತಫ್ತಾಝಾನಿ ತಮ್ಮ 'ಶರಹುಲ್ ಅಖಾಯಿದ್' ಎಂಬ ಗ್ರಂಥದಲ್ಲಿ ವಲಿಯ್ಯ್ ನ ಬಗ್ಗೆ ವ್ಯಾಖ್ಯಾನವನ್ನು ನೀಡುತ್ತಾರೆ.

ಇಂತಹ 'ವಲಿಯ್ಯ್' ಯಾ ನಿಕಟವರ್ತಿಗೆ ಅಲ್ಲಾಹನು ನೀಡುವ ಅಭೌತಿಕವಾದ ಸಹಾಯವನ್ನು 'ಕರಾಮತ್' ಎನ್ನುವರು. ಕರಾಮತ್ ಮೂಲತಃ ಅಲ್ಲಾಹನಿಂದ ಉಂಟಾಗಿ ಸಜ್ಜನರ ಮೂಲಕ ಅದು ಪ್ರಕಟಗೊಳ್ಳುತ್ತದೆ. ಅಲ್ಲಾಹನು ದಯಪಾಲಿಸುವ ಮಾನವಾತೀತ ಸಾಮರ್ಥ್ಯದಿಂದ ಪ್ರವಾದಿಗಳು ಮತ್ತು ಔಲಿಯಾಗಳು ಸಹಾಯ ಮಾಡುತ್ತಾರೆಂಬುದು ಸುನ್ನಿ ಪಂಗಡದ ವಿಶ್ವಾಸ, ಮಾತ್ರವಲ್ಲದೇ ಔಲಿಯಾಗಳಿಗೆ ಜೀವಿತ ಕಾಲದಲ್ಲಿ ಇದ್ದ ಹಾಗೆ ಮರಣಾನಂತರವೂ ಅಸಾಧಾರಣ ಶಕ್ತಿಯಿದೆಯೆಂದು ಇವರ ನಂಬಿಕೆ.

ಪ್ರವಾದಿಗಳು ಮತ್ತು ಔಲಿಯಾಗಳು ಅವರ ಮರಣಾನಂತರವೂ ತಮ್ಮಲ್ಲಿಗೆ ಸಂದರ್ಶನಕ್ಕೆ ಬಂದವರಿಗೆ ಅಲ್ಲಾಹನ ಕೃಪೆಯಿಂದ ಸಹಾಯ ಮಾಡುತ್ತಾರೆ ಹಾಗೂ ಮರಣಾನಂತರ ಅವರ ವಿಶೇಷ ಶಕ್ತಿ ನಿಂತು ಹೋಗುವುದಿಲ್ಲವೆಂದು ಫತಾವರ್ರಂಲಿ ಎಂಬ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ. ಈ ರೀತಿಯ ನಂಬಿಕೆಯಿಂದ ಸಹಾಯ ಯಾಚನೆ ಮಾಡುವುದನ್ನು 'ಇಸ್ತಿಗಾಸ' ಎನ್ನುವರು. ಇಸ್ತಿಗಾಸ ಎಂದರೆ ಮಧ್ಯವರ್ತಿಯ ಮೂಲಕ ಅಲ್ಲಾಹನಲ್ಲಿ ಸಹಾಯವನ್ನು ಬೇಡುವುದು. ಉದಾ:- ಒಬ್ಬ ಮುಸ್ಲಿಂ ಯಾವುದಾದರೊಂದು ಸಂತ ಯಾ ವಲಿಯ್ಯ್‌ರ ಭೇಟಿ ನೀಡಿ ಅವರ ಒಳ್ಳೆಯ ಕರ್ಮ ಸನ್ನಡತೆಯ ಫಲವಾಗಿ ನನ್ನನ್ನು ಅದೇ ರೀತಿ ನಡೆಸು, ಮಾತ್ರವಲ್ಲ ನನ್ನ ಒಳ್ಳೆಯ ಉದ್ದೇಶಗಳನ್ನು ಪೂರ್ತೀಕರಿಸು ಎಂದು ಅಲ್ಲಾಹನಲ್ಲಿ ಪ್ರಾರ್ಥಿಸುವುದೇ ಇಸ್ತಿಗಾಸ. ಒಟ್ಟಿನಲ್ಲಿ ಅಲ್ಲಾಹನ ಮಹಾತ್ಮರ, ಜೀವಿತ ಕಾಲದಲ್ಲಿ ಮತ್ತು ಮರಣಾನಂತರವೂ ವಿಶೇಷ ಶಕ್ತಿಯಲ್ಲಿರುವ ನಂಬಿಕೆಯಿಂದಾಗಿ ದರ್ಗಾ ಸಂಪ್ರದಾಯ ರೂಡಿಯಲ್ಲಿದೆ.8

ಭಾರತದಲ್ಲಿ ದರ್ಗಾ ಸಂಪ್ರದಾಯ

ಭಾರತದಲ್ಲಿ ದರ್ಗಾ ಸಂಪ್ರದಾಯವು ಸುಮಾರು 11 – 12ನೇ ಶತಮಾನದಲ್ಲಿ ರೂಡಿಯಲ್ಲಿತ್ತು. ಔಲಿಯಾಗಳು ಯಾ ಸಂತರನ್ನು ಸೂಫಿತತ್ವದ ಪ್ರಚಾರಕರೆಂದೂ ಉಲ್ಲೇಖಿಸಲಾಗಿದೆ. ಅಂತಹ

ಸೂಫಿತತ್ವದ ಪ್ರಚಾರಕರು ಕಾಲವಾದ ನಂತರ ಅವರನ್ನು ದಫನ ಮಾಡಿದ ಸ್ಥಳದಲ್ಲಿ ಸುತ್ತಮುತ್ತ ಗೋಡೆ ಅಥವಾ ಕಟ್ಟಡ ನಿರ್ಮಿಸಿ ಎತ್ತರಿಸುವುದಕ್ಕೆ 'ದರ್ಗಾ' ಎಂದು ಕರೆಯುವರು. ಸಾರ್ವಜನಿಕ ಮತ್ತು ಖಾಸಗಿ ಸ್ಥಳಗಳಲ್ಲಿ ಸಜ್ಜನರ ಗೋರಿ ನಿರ್ಮಾಣ ಮತ್ತು ಗೋರಿ ಸಂದರ್ಶನ ಯಾ ಖಬ್‌ರ್ ಝಿಯಾರತ್ ಪುಣ್ಯಕಾರ್ಯವೆಂದು ಬಹುಸಂಖ್ಯಾತ ಸುನ್ನಿಗಳ ನಂಬಿಕೆ.

'ದರ್ಗಾ' ಎಂಬುದು ಮೂಲತಃ ಉರ್ದು ಪದವಾಗಿದ್ದು ಸಮಾಧಿಯೆಂದು ಅರ್ಥ. ಅರಬಿಯಲ್ಲಿ ಇದಕ್ಕೆ ಸಮನಾದ ಪದ 'ಮಖಾಂ' ಎಂದಾಗಿರುತ್ತದೆ. ಉರ್ದು ಮೂಲದಿಂದ ಬಂದ ಪದವಾದುದರಿಂದ ದರ್ಗಾ ಸಂಪ್ರದಾಯವು ಭಾರತ ಮತ್ತು ಪಾಕಿಸ್ತಾನಗಳಲ್ಲಿ ವಿಶೇಷವಾಗಿ ಆಚರಣೆಯಲ್ಲಿದೆ.

ಭಾರತದಲ್ಲಿ ಔಲಿಯಾಗಳು ಸೂಫಿ ಸಂತರೆಂದು ಜನಜನಿತರಾಗಿದ್ದರು. ಮಧ್ಯಯುಗೀನ ಕಾಲದಲ್ಲಿ ಲಾಹೋರ್ ಮತ್ತು ಮುಲ್ತಾನ್ ಅನೇಕ ಸೂಫಿ ಸಂತರ ನೆಲೆಬೀಡಾಗಿತ್ತು. ಅದೇ ರೀತಿ ಉತ್ತರ ಭಾರತದ ದೆಹಲಿ , ಫತೇಪುರಸಿಕ್ರಿ, ಆಗ್ರ, ಅಜ್ಮೀರ್, ಅಹಮ್ಮದಾಬಾದ್ ಮುಂತಾದ ಪ್ರದೇಶಗಳು ಸೂಫಿ ಸಂತರ ಕೇಂದ್ರಗಳಾಗಿದ್ದುವು.9

ಸೂಫಿ ತತ್ವ

ಸೂಫಿ ಪದವು ಮೂಲತಃ ಅರಬಿಕ್ ಪದವಾದ 'ತಸವ್ವುಫ್'ನಿಂದ ಬಂದುದಾಗಿದೆ. ಇದರ ಸಂಕ್ಷಿಪ್ತ ಅರ್ಥ "ಆತ್ಮಜ್ಞಾನ" ಎಂದಾಗಿದೆ. ಸೂಫಿ ತತ್ವವು ಒಂದು ಮನೋಸ್ಥಿತಿಯಾಗಿದ್ದು ಅದು ವಿವರಿಸುವುದಕ್ಕಿಂತ ಹೆಚ್ಚಾಗಿ ಅನುಭವಿಸಬಹುದಾದ ಮನೋಸ್ಥಿತಿ, ಅದೊಂದು ಶುದ್ದ ಭಾವನಾತ್ಮಕ ಅನುಭವ. ಭಗವಂತನ ಪ್ರೀತಿ ಮತ್ತು ಧ್ಯಾನದ ಮೂಲಕ ಭಕ್ತನು ಆತ್ಮಜ್ಞಾನವನ್ನು ಪಡೆಯುವ ದಾರಿ ಎಂದು ಡಾ। ತಾರಾಚಂದ್ ಎಂಬ ಇತಿಹಾಸಕಾರ ಅಭಿಪ್ರಾಯ ಪಟ್ಟಿರುವರು.10

ಅರ್ನಾಲ್ಡ್ಸ್ ಎಂಬ ಬರಹಗಾರರ ಅಭಿಪ್ರಾಯದಂತೆ ಸೂಫಿ ತತ್ವವು ಮುಸ್ಲಿಮರ ಜನಸಂಖ್ಯೆ ವೃದ್ಧಿಸಲು ಬಹಳಷ್ಟು ಪ್ರಭಾವವನ್ನು ಬೀರಿದೆ ಮತ್ತು ಇಸ್ಲಾಂನ ಪ್ರಚಾರದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ. ಕೆಲವು ಐತಿಹ್ಯಗಳಲ್ಲಿಯೂ ಕೂಡ ಸೂಫಿ ಸಂತರನ್ನು ಇಸ್ಲಾಂ ಧರ್ಮ ಪ್ರಚಾರದ ವೀರರು ಎಂಬುದಾಗಿ ಬಿಂಬಿಸಿದರೂ ಐತಿಹಾಸಿಕ ನೆಲೆಯಲ್ಲಿ ಈ ವಾದಕ್ಕೆ ಹೆಚ್ಚಿನ ಪುರಾವೆಗಳು ಸಿಗುತ್ತಿಲ್ಲ. ದರ್ಗಾ ಸಂಪ್ರದಾಯವು ಇಸ್ಲಾಮಿಕ್, ಸಾಂಸ್ಕೃತಿಕರಣಕ್ಕೆ ಕಾರಣವಾಯಿತು. ದರ್ಗಾ ಸಂಪ್ರದಾಯದಿಂದಾಗಿ ಹೊಸ ಸಾಂಸ್ಕೃತಿಕ ಲಕ್ಷಣಗಳ ಉಗಮ ಮತ್ತು ಪಸರಿಸುವಿಕೆಗೆ ನಾಂದಿಯಾಯಿತು.

ಇಂದಿನ ಇರಾಖ್ ದೇಶದ ಬಸ್ರಾ ನಗರದ ಮೆಹದಿ ರಾಬಿಯ ಎಂಬ ಸ್ತ್ರೀ ಸೂಫಿ ಪಂಥವನ್ನು ಪ್ರಾರಂಭಿಸಿದರು. ಈ ಪಂಥವನ್ನು ಪ್ರತಿಪಾದಿಸವರಲ್ಲಿ ಮತ್ತು ಪ್ರಚಾರ ಮಾಡಿದವರಲ್ಲಿ ಇಮಾಂ ಗಝ್ಝಾಲಿ ಪ್ರಮುಖರು. ಅವರ ಪ್ರಕಾರ ಆಂತರಿಕ ಪರಿವರ್ತನೆಯಾಗದೆ ಮುಕ್ತಿ ಹೊಂದಲು ಸಾಧ್ಯವಿಲ್ಲ. ಸೂಫಿ ತತ್ವದ ದಾರಿಯಲ್ಲಿ ಸಾಗಿದಾಗ ಮಾತ್ರ ಮನಪರಿವರ್ತನೆಯಾಗಿ ದಿವ್ಯಪ್ರಭೆಯನ್ನು ಹೊಂದಲು ಸಾಧ್ಯ. 11

ಭಾರತದಲ್ಲಿ ಸೂಫಿ ಚಳವಳಿ

ಭಾರತದಲ್ಲಿ ಸೂಫಿ ತತ್ವವನ್ನು ಜನಪ್ರಿಯಗೊಳಿಸಿದವರಲ್ಲಿ ಅಜ್ಮೀರಿನ ಖ್ವಾಜ ಮ್ಯೊನುದ್ದೀನ್ ಚಿಸ್ತಿಯವರು ಮೊದಲಿಗರು ಹಾಗೂ ಪ್ರಮುಖರು. ಅಫ್ಘಾನಿಸ್ತಾನದ ಗಜನಿ ಪ್ರದೇಶದಿಂದ ಕ್ರಿ ಶ 1161ರಲ್ಲಿ ಲಾಹೋರ್ ಮೂಲಕ ರಾಜಸ್ತಾನದ ಅಜ್ಮೀರಿನಲ್ಲಿ ನೆಲೆಸಿದರು. ತಮ್ಮ ಜೀವನ ಕಾಲದಲ್ಲಿ 4000ಕ್ಕೂ ಅಧಿಕ ಕರಾಮತ್ತನ್ನು ತೋರಿಸಿದ್ದಾರೆಂಬ ಅಭಿಪ್ರಾಯವಿದೆ. ಅಜ್ಮೀರಿನಲ್ಲಿದ್ದುಕೊಂಡೇ ಧಾರ್ಮಿಕ ಪ್ರಚಾರ ಮತ್ತು ಸೂಫಿ ಚಳುವಳಿಯನ್ನು ಆರಂಭಿಸಿದರು. ಕ್ರಿ.ಶ. 1235ರಲ್ಲಿ ಚಿಸ್ತಿಯವರು ಅಜ್ಮೀರ್‌ನಲ್ಲಿ ಕಾಲವಾದ ನಂತರ ಅವರ ಸಮಾಧಿಯ ದರ್ಗಾ ಭಾರತದ ಬಹುದೊಡ್ಡ ಯಾತ್ರಾಸ್ಥಳವಾಗಿ ಮೂಡಿಬಂತು. ಅಜ್ಮೀರ್ ಇಂದಿಗೂ ಜಾತಿ ಮತಭೇದವಿಲ್ಲದೆ ಎಲ್ಲರನ್ನೂ ಆಕರ್ಷಿಸುವ ದರ್ಗಾವಾಗಿದೆ. ಸಂತ ಮ್ಯೊನುದ್ದೀನ್ ಚಿಸ್ತಿಯವರು ಭಾರತದಲ್ಲಿ ಸೂಫಿತತ್ವದ ಚಿಸ್ತಿಯ ಪಂಥವನ್ನು ಆರಂಭಿಸಿದರು. 12

ಮಧ್ಯಯುಗೀನ ಕಾಲದ ದೆಹಲಿ ಸುಲ್ತಾನರ ಮತ್ತು ಮೊಘಲರ ಆಳ್ವಿಕೆಯ ಅವಧಿಯಲ್ಲಿ ಭಾರತದಲ್ಲಿ ನೂರಾರು ಸೂಫಿ ಬೋಧಕರು ತಮ್ಮ ತತ್ವಗಳನ್ನು ಪ್ರಚಾರ ಮಾಡಿ, ಲಕ್ಷಾಂತರ ಅನುಯಾಯಿಗಳನ್ನು ತಮ್ಮ ನಡೆನುಡಿ ಮತ್ತು ಸಚ್ಚಾರಿತ್ರ್ಯದಿಂದ ಗೆದ್ದುಕೊಂಡವರಾಗಿದ್ದರು. ಭಾರತದಲ್ಲಿ ಸೂಫಿ ತತ್ವವನ್ನು ಬೋಧಿಸಿದ ಹಲವಾರು ಪಂಗಡಗಳಲ್ಲಿ ಈ ಕೆಳಗಿನವುಗಳು ಪ್ರಮುಖವಾದವುಗಳು.

ಸೂಫಿ ಪಂಥ	ಸ್ಥಾಪಕರು	ಪ್ರವರ್ತಕರು
ಚಿಸ್ತಿಯಾ ಪಂಥ	ಖ್ವಾಜಾ ಮ್ಯೊನುದ್ದೀನ್ ಚಿಸ್ತಿ ಅಜ್ಮೀರ್	ಶೇಖ್ ಸಲೀಂ ಚಿಸ್ತಿ ನಿಝಾಮುದ್ದೀನ್ ಔಲಿಯಾ
ಖಾದ್ರಿಯಾ ಪಂಥ	ಶೇಖ್ ಅಬ್ದುಲ್ ಖಾದಿರ್ ಜೀಲಾನಿ, ಬಗ್ದಾದ್	ಶಾ ನಿಝಾಮುಲ್ಲಾ ಮಹಮ್ಮದ್ ಜೀಲಾನಿ
ಶುಹ್ರವರ್ದಿ ಪಂಥ	ಶೇಖ್ ಶಿಹಾಬುದ್ದೀನ್ ಶುಹ್ರವರ್ದಿ	ಶೇಖ್ ಶಿಹಾಬುದ್ದೀನ್

		ಶುಹ್ರವರ್ದಿ
ಬಾಖಿ ಬಿಲ್ಲಭ್	ನಕ್ಶಬಂದಿ ಪಂಥ	ಖ್ವಾಜಾ ಬಾಬಿ ಬಿಲ್ಲಭ್

13

ದಕ್ಷಿಣ ಭಾರತದಲ್ಲಿ ಸೂಫಿ ಸಂತರ ಪ್ರಭಾವ

ತಿರುಚಿನಾಪಳ್ಳಿಯ ಸೈಯ್ಯದ್ ನಾಥಾಡ್ ವಲೀ, ಏರ್‌ವಾಡಿಯ ಸೈಯ್ಯದ್ ಇಬ್ರಾಹಿಂ ಶಾಹಿದ್, ನಾಗೋರಿಯ ಸೈಯದ್ದ ಶಾಹುಲ್ ಹಮೀದ್, ಮುತ್ತು ಪೇಟೆಯ ಹಕೀಂ ದಾವೂದ್ ವಲೀ, ಪೆನುಕೊಂಡದ ಬಾಬಾ ಫಕ್ರುದ್ದೀನ್, ಗುಲ್ಬರ್ಗದ ಸೈಯದ್ ಮಹಮ್ಮದ್ ಜೀಸುದರಾಜ್, ಬಿಜಾಪುರದ ಫೀರ್ ಮಹಾವೀರ್ ಖಾಂಡಿಯಾತ್ , ಕಾಸರಗೋಡಿನ ಮಾಲಿಕ್-ಬಿನ್-ದೀನಾರ್ ಮೊದಲಾದವರು ದಕ್ಷಿಣ ಭಾರತದ ಪ್ರಭಾವಿ ಸೂಫಿ ಸಂತರು. 'ತುಹಫತುಲ್ ಮುಜಾಹಿದೀನ್' ನ ಲೇಖಕ ಜೈನುದ್ದೀನ್‌ರ ಪ್ರಕಾರ ಈ ಎಲ್ಲಾ ಸಂತರು ಪಶ್ಚಿಮ ಕರಾವಳಿಯಲ್ಲಿ ಇಸ್ಲಾಂ ಪ್ರಚಾರ ಕೈಗೊಂಡವರಲ್ಲಿ ಮೊದಲಿಗರಾಗಿದ್ದರು. ಪೊನ್ನಾಣಿಯ ಜೈನುದ್ದೀನ್-ಬಿನ್-ಅಲೀ ಹಾಗೂ ಕಣ್ಣೂರಿನ ಸೈಯ್ಯದ್ ಮೌಲಾ ಎಂಬವರ ಪ್ರಭಾವದಿಂದ ಹಲವಾರು ಪಟ್ಟಣಗಳು ಮುಸ್ಲಿಂ ಕೇಂದ್ರಗಳಾದವು. ಪೊನ್ನಾಣಿಯು ದ.ಭಾರತದಲ್ಲಿ ಮುಸ್ಲಿಂ ಅಧ್ಯಯನ ಹಾಗೂ ಮಲಬಾರ್‌ನಿಂದ ಉತ್ತರ ಕನ್ನಡದವರೆಗೂ ಧಾರ್ಮಿಕ ಮಾರ್ಗದರ್ಶನ ಕೇಂದ್ರವಾಯಿತು.

ತುಳುನಾಡಿನಲ್ಲಿ ಸೂಫಿ ಸಂತರು

ತುಳುನಾಡಿನಲ್ಲಿ ಸೂಫಿ ಪ್ರಭಾವವನ್ನು ಬೀರಿದ ಸಂತರಲ್ಲಿ ಪೆನುಕೊಂಡದ ಸೈಯ್ಯದ್ ಬಾಬಾ ಪಕ್ರುದ್ಧೀನ್ ಪ್ರಮುಖರು. ದಂತಕಥೆಯ ಪ್ರಕಾರ ರಾಜನಾಗಿದ್ದ ಇವರು ರಾಜ್ಯವನ್ನು ಬಿಟ್ಟು ಸಂತ ಬಿಕ್ಷುವಾಗಿ, ನಾಥಾಡ್‌ವಲೀ ಎಂಬವರ ಶಿಷ್ಯನಾಗಿ ಧರ್ಮ ಪ್ರಚಾರಕರಾಗಿ ಜೀವನ ನಡೆಸಿದರು. ತಮ್ಮ ಧರ್ಮ ಪ್ರಚಾರ ಕಾರ್ಯದಲ್ಲಿ ಪೆನುಕೊಂಡಕ್ಕೆ ಹೋಗುವ ಹಾದಿಯಲ್ಲಿ ಮಲಬಾರ್ ಹಾಗೂ ಕರಾವಳಿ ತೀರದ ಹಲವಾರು ಪ್ರದೇಶಗಳಿಗೆ ಭೇಟಿ ನೀಡಿ ಧರ್ಮ ಪ್ರಚಾರವನ್ನು ಮಾಡಿದರು. ಬಂಟ್ವಾಳ ತಾಲೂಕಿನ ಸರಪಾಡಿ ಗ್ರಾಮದ ಅಜಿಲ ಮೊಗ್ರು ಎಂಬಲ್ಲಿ ಬಾಬಾ ಪಕ್ರುದ್ಧೀನ್ 13ನೇ ಶತಮಾನದ ಕೊನೆ ಭಾಗದಲ್ಲಿ ವಾಸ್ತವ್ಯವಿದ್ದು ಸುತ್ತಮುತ್ತಲಿನ ಜನರಿಗೆ ಇಸ್ಲಾಂನ ಪ್ರಬೋದನೆ ನೀಡಿ ಅಜಿಲ ಮೊಗ್ರುವಿನಲ್ಲೇ ಮಸೀದಿ ಕಟ್ಟಿಸಿ ತಮ್ಮ ಶಿಷ್ಯರಾದ ಝುಕರಿಯ್ಯ ಎಂಬವರನ್ನು ಅದರ ಇಮಾಂ ಆಗಿ ನೇಮಕ ಮಾಡಿದರು. ತದನಂತರ ಪೆನುಕೊಂಡಕ್ಕೆ (ಆಂಧ್ರಪ್ರದೇಶ)ಹೋಗಿ ಅಲ್ಲೇ ಮರಣ ಹೊಂದಿದರು.

ಬಂಟ್ವಾಳದ ವಳಚ್ಚಿಲ್ ಎಂಬಲ್ಲಿನ ಮಸೀದಿ ಸಮಿತಿಯವರ ಪ್ರಕಾರ ಬಾಬಾ ಫಕ್ರುದ್ದೀನ್ ವಳಚ್ಚಿಲ್ ಹಾಗೂ ಸುತ್ತಮುತ್ತ ಇಸ್ಲಾಂ ಧರ್ಮ ಪ್ರಚಾರ ಮಾಡಿದ್ದಾರೆ. ಇದಕ್ಕೆ ಪೂರಕವಾಗಿ ವಳಚ್ಚಿಲ್ ಮತ್ತು ಅಜಿಲಮೊಗ್ರು ಮಸೀದಿಗಳ ಕಟ್ಟಡಗಳ ಶೈಲಿಯಲ್ಲಿ ಸಾಮ್ಯತೆ ಇರುವುದನ್ನು ಕಾಣಬಹುದು. ಸಂತ ಫಕ್ರುದ್ದೀನ್‌ರವರು ಕಾಸರಗೋಡುಮ ಕುಂಬ್ಳೆ, ಶಿರಿಯಾ, ಉದ್ಯಾವರ, ಮಂಜನಾಡಿ, ಉಳ್ಳಾಲ, ಮಂಗಳೂರು, ವಳಚ್ಚಿಲ್, ಅಜಿಲಮೊಗ್ರು ಇತ್ಯಾದಿ ಪ್ರದೇಶಗಳಿಗೆ ಭೇಟಿ ನೀಡಿ ಆಂಧ್ರಪ್ರದೇಶದ ಕಡೆಗೆ ಪ್ರಯಾಣ ಬೆಳೆಸಿದರು. ಅವರ ಧರ್ಮ ಪ್ರಚಾರದಿಂದಾಗಿ ಈ ಎಲ್ಲಾ ಪ್ರದೇಶಗಳು ಮುಸ್ಲಿಂ ಬಾಹುಳ್ಯದ ಕೇಂದ್ರಗಳಾಗಿ ಇಂದಿಗೂ ಇದೆ.

13ನೇ ಶತಮಾನದಲ್ಲಿ ಬಿಜಾಪುರದ ಸೂಫಿ ಶೇಕ್ ಫರೀದ್ ಮಸೂದ್ ಗಂಜ್ ಸರ್ಕಾರ್ ಎಂಬವರು ಮಂಗಳೂರಿಗೆ ಭೇಟಿಕೊಟ್ಟು ಕದ್ರಿ ಬೆಟ್ಟದಲ್ಲಿ ಧ್ಯಾನಾರಾಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅಲ್ಲಿಯೇ ನೆಲೆಸಿ ಇಸ್ಲಾಂ ಧರ್ಮ ಪ್ರಚಾರ ಮಾಡಿದರು. ಅವರು ತಂಗಿದ್ದ ಗಂಜ್‌ಸರ್ಕಾರ್ ಸ್ಥಳವು ಕದ್ರಿಯಲ್ಲಿ ಈಗಲೂ ಇದೆ.

ಅಡ್ಯಾರ್ ಕಣ್ಣೂರು, ಮಂಗಳೂರಿನ ಶೇಖ್ ಸಿದ್ದೀಕ್ ಯೂಸುಫ್ ವಲೀಯವರು 20ನೇ ಶತಮಾನದ ಆದಿಯಲ್ಲಿ ತಮ್ಮ ಪ್ರಭಾವವನ್ನು ಬೀರಿದ ಮತ್ತೋರ್ವ ಸೂಫಿಯಾಗಿದ್ದರು. ಅವರು ಅಂದ್ರೋಟ್ ಎಂಬ ದ್ವೀಪದಿಂದ ಬಂದು ಕೆನರಾ ಪ್ರದೇಶದಲ್ಲಿ ಸಂಚರಿಸಿ ಅಡ್ಯಾರನ್ನು ತಮ್ಮ ಧರ್ಮ ಪ್ರಚಾರ ಕಾರ್ಯಕ್ಷೇತ್ರವನ್ನಾಗಿಸಿದರು. ಸಮೀಪದ ಅರ್ಕುಳ, ವಳಚ್ಚಿಲ್ ಸುತ್ತಮುತ್ತ ತಮ್ಮ ಪ್ರಭಾವ ಬೀರಿದರು.

ಮಂಗಳೂರಿನ ಡೊಂಗರಕೇರಿಯ ಸೈಯ್ಯದ್ ಶಾಹ್‌ಮೀರ್‌ವಲೀ ಇನ್ನೊಬ್ಬ ಹೆಸರಾಂತ ಸೂಫಿ ಧರ್ಮಪ್ರಚಾರಕರಾಗಿದ್ದರು. ಕುದ್ರೋಳಿಯಲ್ಲಿ ಒಂದು ಮಸೀದಿಯನ್ನು ಕಟ್ಟಿಸಿದ ಇವರನ್ನು ಟಿಪ್ಪುಸುಲ್ತಾನ್ ಸಂದರ್ಶಿಸುತ್ತಿದ್ದರು. ಅವರ ಮರಣಾನಂತರ ಒಂದು ಗೋರಿಯನ್ನು ಕಟ್ಟಿಸಲು ಟಿಪ್ಪುಸುಲ್ತಾನ್ ಅದೇಶ ಹೊರಡಿಸಿದ್ದ. ಆದರೆ 1799ರಲ್ಲಿ ಟಿಪ್ಪುವಿನ ಆಕಸ್ಮಿಕ ಮರಣದಿಂದ ಈ ಕಾರ್ಯವು ಅರ್ಧದಲ್ಲೇ ಬಾಕಿಯಾಯಿತು. ಅದೇ ರೀತಿ ತುಳುನಾಡಿನಲ್ಲಿ ಅಪೂರ್ವವಾದ ಪ್ರಭೆಯನ್ನು ಬೀರಿದ ಮತ್ತೊಬ್ಬ ಸೂಫಿ ಸಂತರೆಂದರೆ ಉಳ್ಳಾಲದ ಸೈಯದ್ ಶರೀಫುಲ್ ಮದನಿಯವರು.

ಇದಲ್ಲದೆ ಇನ್ನೂ ಹಲವಾರು ಗೋರಿಗಳು ದ.ಕ.ಜಿಲ್ಲೆಯಲ್ಲಿ ಕಾಣಸಿಗುತ್ತದೆ. ಸಂತರ ಹೆಸರು, ಗುರುತು ಸ್ಪಷ್ಟವಾಗಿ ಸಿಗದ ಗೋರಿಗಳಲ್ಲಿಯೂ ಉರೂಸ್ ಆಚರಣೆ ಸಂಪ್ರದಾಯವಾಗಿ ಮಾರ್ಪಟ್ಟಿತು.

ಹಿಂದೂ ಭಕ್ತಿ ಚಳುವಳಿ ಹಾಗೂ ಸೂಫಿ ಆಂದೋಲನಗಳ ಮೂಲ ಚಿಂತನೆಗಳು ಒಂದೇ ಆದುದರಿಂದ ಹಾಗೂ ಅವುಗಳು ಭಾರತ ಉಪಖಂಡದ ಉದ್ದಗಲಗಳಲ್ಲಿ ಬೆಳೆದ ಕಾರಣ, ತಮ್ಮ ತಮ್ಮ ಜನರ ಮೇಲೆ ಸಾಕಷ್ಟು ಪ್ರಭಾವ ಬೀರಿದವು. ಎರಡು ಧಾರ್ಮಿಕ ಹಿನ್ನೆಲೆಗಳಿದ್ದರೂ, ಭಕ್ತಿ ಸೂಫಿ ತತ್ವಗಳಲ್ಲಿ ಪರಸ್ಪರ ಕೊಡು-ಕೊಳ್ಳುವಿಕೆಯನ್ನು ಕಾಣಬಹುದು. ಆದುದರಿಂದಲೇ ಈ ಚಳುವಳಿಗಳು ಹಿಂದೂ-ಮುಸ್ಲಿಂ ಅನುಯಾಯಿಗಳಿಂದ ಸಾಕಷ್ಟು ಬೆಂಬಲವನ್ನು ಪಡೆಯಿತು. ಈ ಬೆಳವಣಿಗೆಯು ಕ್ರಮೇಣ ದರ್ಗಾ ಸಂಪ್ರದಾಯದ ಮೂಲಕ ಪ್ರಾದೇಶಿಕ ಧರ್ಮ ಸಾಮರಸ್ಯಕ್ಕೆ ನಾಂದಿ ಹಾಡಿತು.14

ಉಳ್ಳಾಲದ ಸಂತ ಶರೀಫುಲ್ ಮದನಿ ದರ್ಗಾ ಸಂತರ ಜೀವನ ಚರಿತ್ರೆ

ಉಳ್ಳಾಲದಲ್ಲಿ ಇಸ್ಲಾಮೀ ಪರಂಪರೆಗೆ ಪ್ರಾಚೀನ ಇತಿಹಾಸವಿದೆ. ಕೇರಳಕ್ಕೆ ಇಸ್ಲಾಂ ತಲುಪಿದ ಸಂದರ್ಭದಲ್ಲೇ ಉಳ್ಳಾಲಕ್ಕೂ ಇಸ್ಲಾಮಿನ ಆಗಮನವಾಗಿತ್ತು. ಸಂತ ಮಲಿಕ್-ಬಿನ್-ದಿನಾರರ ಅನುಯಾಯಿಗಳಿಂದ ಉಳ್ಳಾಲ ಪರಿಸರದಲ್ಲಿ ಇಸ್ಲಾಂ ಧರ್ಮದ ಪ್ರಬೋಧನೆಯಾಯಿತು. ಬಾಬ ಫಕ್ರುದ್ದೀನ್‌ರವರು 13ನೇ ಶತಮಾನದಲ್ಲಿ ಉಳ್ಳಾಲಕ್ಕೆ ಭೇಟಿ ನೀಡಿ ಧರ್ಮ ಪ್ರಚಾರ ನಡೆಸಿದ್ದರು.

ಸಯ್ಯದ್ ಮಹಮ್ಮದ್ ಶರೀಫುಲ್ ಮದನಿ ಉಳ್ಳಾಲದಲ್ಲಿ ಅಂತ್ಯ ವಿಶ್ರಮಗೊಂಡಿರುವ ಸಂತ. ಇವರ ಆಗಮನ ಉಳ್ಳಾಲಕ್ಕೆ ಹಿಜರಿ 1000ದಲ್ಲಿ ಅಥವಾ ಕ್ರಿ. ಶ. 1569ರಲ್ಲಿ ಆಯಿತು. ಸೌದಿ ಅರೇಬಿಯಾದ ಮದೀನದಿಂದ ಬಂದುದರಿಂದ ಇವರನ್ನು 'ಮದನಿ' ಎಂದು ಪ್ರಚಾರದ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು, ಅದರ ಸಮೀಪದಲ್ಲೇ ವಾಸ್ತವ್ಯವನ್ನು ಹೂಡಿದರು. ಆದರೆ ಸಂತರ ಬಾಲ್ಯ, ತಂದೆ ತಾಯಿ ಹಾಗೂ ಕುಟುಂಬ ಮೂಲದ ಬಗ್ಗೆ ಯಾವುದೇ ಸ್ಪಷ್ಟವಾದ ಮಾಹಿತಿ ದೊರಕುವುದಿಲ್ಲ. ಉಳ್ಳಾಲಕ್ಕೆ ಅವರ ಆಗಮನದ ಬಗ್ಗೆ ಒಂದು ಐತಿಹ್ಯವು ಈ ರೀತಿ ಇದೆ. ಸಂತ ಮದನಿಯವರು ಬೋರ್ಗರೆಯುವ ಅರಬ್ಬಿ ಸಮುದ್ರದಲ್ಲಿ ಚದ್ದರ (ಬಟ್ಟೆ) ಹಾಸಿ ಅದರಲ್ಲಿ ಕುಳಿತು ಉಳ್ಳಾಲದ ತೀರಕ್ಕೆ ಬಂದು ಸೇರಿದರು.15

ಸಂತ ಮದನಿಯವರ ವ್ಯಕ್ತಿತ್ವ ಹಾಗೂ ಕಾರ್ಯಚಟುವಟಿಕೆಗಳು ಸಮಾಜದ ಶೋಷಿತ ವರ್ಗಗಳ ಆಕರ್ಷಣೆಗೆ ಕಾರಣವಾಯಿತು. ಜಾತಿ, ಮತ, ಭೇದವಿಲ್ಲದೆ ಜನರು ಅವರನ್ನು ಹಿಂಬಾಲಿಸಿದರು. ಸಂತ ಶರೀಫುಲ್ ಮದನಿಯವರು ವಾಸ್ತವ್ಯವಿದ್ದ ಮೇಲಂಗಡಿ ಮಸೀದಿ, ಮುನ್ನೂರು, ಪೆರ್ಮನ್ನೂರು, ಜಪ್ಪಿನಮೊಗರು ಹಾಗೂ ಸೋಮೇಶ್ವರದ ಮುಸ್ಲಿಮರ ಜುಮಾ ಮಸೀದಿಯಾಗಿತ್ತು. ಸಂತ ಶರೀಫುಲ್ ಮದನಿಯವರನ್ನು 'ಮದನಿ ತಂಜಳ್' ಎಂದೂ ಕರೆಯುತ್ತಾರೆ. ಪ್ರವಾದಿಯವರನ್ನು ಗೌರವ ಸೂಚಕವಾಗಿ 'ತಂಜಳ್' ಎಂದು ಈ ಭಾಗದ ಮುಸ್ಲಿಮರು ಕರೆಯುತ್ತಾರೆ. ಸಂತ ಮದನಿ

ಯವರು ಸೌದಿ ಅರೇಬಿಯಾದ ಮದೀನಾದವರಾದುದರಿಂದ, ಅವರನ್ನು ಗೌರವದಿಂದ ಕರೆಯುವ ಹೆಸರು 'ತಂಙಳ್' ಎಂದಾಗಿದೆ.16

ಸಯ್ಯದ್ ಮದನಿಯವರು ನೆಲೆಸಿದ್ದ 0.7 ಸೆಂಟ್ಸ್ ಜಾಗವು ಸಯ್ಯದ್ 'ಮದನಿ ಗುಡಿ' ಎಂದೂ ಆದಾಯ ಪುಸ್ತಕಗಳಲ್ಲಿ ದಾಖಲಾಗಿದೆ. ಕ್ರಿ.ಶ.1902ರಲ್ಲಿ ಮಸೀದಿ ಮತ್ತು ದರ್ಗಾ ಇರುವ ಭೂಮಿಯ ಸರ್ವೆಯು ಅಂದಿನ ಬ್ರಿಟಿಷ್ ಕಲೆಕ್ಟರ್ ಕೋಚ್‌ಮನ್‌ನ ಕಾಲದಲ್ಲಿ ಆಗಿದ್ದು, ಈ ಪ್ರದೇಶವನ್ನು ಅನುಭೋಗದ ಆಧಾರದಲ್ಲಿ ಮಸೀದಿಯ ಸ್ವಾಧೀನದಲ್ಲಿರುವವರಿಗೆ ಹಸ್ತಾಂತರಿಸಲಾಗಿದೆ.17

ಹರೇಕಳದ ಒಂದು ಬಡಕುಟುಂಬದ ಸ್ತ್ರೀಯೊಬ್ಬರನ್ನು ವಿವಾಹವಾದ ಸಂತರು, ಹರೇಕಳದಲ್ಲಿ ತಂಗುತ್ತಿದ್ದರು. ಸಂತ ಮದನಿಯವರಿಗೆ ಸಂತಾನವಿರಲಿಲ್ಲ. ಅವರು ಹರೇಕಳದಲ್ಲಿ ವಾಸ್ತವ್ಯವಿದ್ದ ಮನೆ ಕ್ರಮೇಣ ಅವರ ನಾದಿನಿಯವರಿಗೆ ಲಭಿಸಿತು. ಅವರ ಸಂತತಿಯವರ ಹಿಡಿತದಲ್ಲಿ ಆ ಮನೆ ಇಂದಿಗೂ ಹರೇಕಳದಲ್ಲಿದೆ. ಅದನ್ನು 'ಪಾಂಡೇಲ್‌ಪಕ್ಕ್' ಎಂದು ಕರೆಯುತ್ತಾರೆ. ಅದೇ ಮನೆಯಲ್ಲಿರುವ ಸಂತ ಮದನಿಯವರ ನಾದಿನಿಯ ಕುಟುಂಬಸ್ಥರಾದ ಮಹಮ್ಮದ್ ತಂಗಳ್ ಎಂಬವರು ಉಳ್ಳಾಲ ದರ್ಗಾದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕ್ರಮೇಣ ಅವರ ಆರೋಗ್ಯ ಕ್ಷೀಣಿಸುತ್ತಾ ಬಂದು, ಕೊನೆಗೆ ತಾವು ವಾಸ್ತವ್ಯವಿದ್ದಲ್ಲೇ ನಿಧನ ಹೊಂದಿದರು. ಆದರೆ ಅವರು ನಿಧನ ಹೊಂದಿದ ಕಾಲದ ಬಗ್ಗೆ ಯಾವುದೇ ಮಾಹಿತಿ ಲಭಿಸಿಲ್ಲ.18

ಸಂತ ಮದನಿಯವರು ತಮ್ಮ ಅನುಯಾಯಿಗಳಿಗೆ, 'ದೈವ ವಿಶ್ವಾಸ ಮತ್ತು ಧರ್ಮ ಪ್ರಜ್ಞೆಯನ್ನು ಧೃಡಗೊಳಿಸಿ, ಜೀವಿಸಬೇಕೆಂದೂ, ಐಹಿಕ ಜಗತ್ತು ನಶ್ವರವೆಂದೂ, ಈ ಜೀವಿತಕ್ಕೊಂದು ಅಂತ್ಯವಿದೆ, ಐಹಿಕ ಜಗತ್ತು ಒಂದು ಕೃಷಿಸ್ಥಳವಾಗಿದೆ, ಶಾಶ್ವತವಾದ ಪಾರತ್ರಿಕ ಲೋಕಕ್ಕೆ ಅಗತ್ಯವುಳ್ಳ ಸತ್ಫಲಗಳನ್ನು ಇಲ್ಲಿ ಬೆಳೆಸಿಕೊಳ್ಳಬೇಕಾಗಿದೆ, ಇಲ್ಲಿ ಮಾಡಿದ ಸತ್ಕರ್ಮಗಳು ನಾಳೆ ಪರಲೋಕದಲ್ಲಿ ಬೆಳಕು ನೀಡುವುದೆಂದೂ ಸಂಪತ್ತು ಹಾಗೂ ದಾರಿದ್ರ್ಯಗಳು ಔದಾರ್ಯವಲ್ಲ, ಅವುಗಳು ಅಲ್ಲಾಹನ ಪರೀಕ್ಷಾ ಮಾಧ್ಯಮಗಳು' ಎಂಬುದಾಗಿ ಉಪದೇಶಿಸುತ್ತಿದ್ದರು.19

ಸಂತರ ಸರಳ ಜೀವನ, ಜಾತಿ ಮತಭೇದವಿಲ್ಲದ ಸಮಾನತೆ, ಇಸ್ಲಾಂ ಧರ್ಮ ಬೋಧನೆಗಳಿಂದ ಅದೆಷ್ಟೋ ಮಂದಿ ಪ್ರಭಾವಿತರಾದರು. ಅದರಲ್ಲೂ ಕೆಳಜಾತಿಯ ಹಿಂದೂಗಳು ಇಸ್ಲಾಂ ಧರ್ಮಕ್ಕೆ ಸ್ವ ಇಚ್ಛೆಯಿಂದ ಮತಾಂತರಗೊಂಡರು ಎಂಬ ಐತಿಹ್ಯವಿದೆ. ಆದರೆ ಐತಿಹಾಸಿಕ ಪುರಾವೆಗಳಿಲ್ಲ.

ಸಯ್ಯದ್ ಮದನಿಯವರ ಪವಾಡಗಳ ಬಗ್ಗೆ ಇರುವ ಐತಿಹ್ಯಗಳು

1. ಸಂತ ಮದನಿಯವರು ಹರೇಕಳದ ಬಡಕುಟುಂಬದಿಂದ ವಿವಾಹವಾಗಿದ್ದರು. ಆ ಹೆಂಗಸು ಮತ್ತು ಅವರ ಕುಟುಂಬ ಹಿಂದೂ ಭೂಮಾಲಕರೊಬ್ಬರ ಒಕ್ಕಲಿನಲ್ಲಿದ್ದವರಾಗಿದ್ದರು. ಒಂದು ದಿನ ಮನೆಯೊಡೆಯ ಸಂತರ ಪತ್ನಿಯವರ ಮನೆಯಲ್ಲಿ ಗೇಣಿ ಕೇಳಿದಾಗ ಅವರಲ್ಲಿ ಗೇಣಿ ಕೊಡಲು ಏನೂ ಇರಲಿಲ್ಲ. ಭೂಮಾಲಿಕರು ಆ ವಿಷಯದಲ್ಲಿ ಮನೆಯವರನ್ನು ಗದರಿಸಿದರು. ನಂತರ ಮದನಿಯವರು ಮನೆಗೆ ಬಂದಾಗ ವಿಷಯವನ್ನು ಅವರಿಗೆ ತಿಳಿಸಲಾಯಿತು. ಅದೇ ರಾತ್ರಿ ಆ ಭೂಮಾಲಿಕನಿಗೆ ಸ್ವಪ್ನವೊಂದು ಬಿದ್ದು, ಮದನಿಯವರು ತನ್ನ ಮಡದಿ ಮತ್ತು ಅವರ ಮನೆಯವರಿಗೆ ಅವರು ಒಕ್ಕಲಿರುವ ಮನೆಯನ್ನು ಬಿಟ್ಟುಕೊಡಬೇಕೆಂದು ಹೇಳಿದರು. ಅದರಂತೆ ಮರುದಿವಸ ಮಾಲಿಕ ಆ ಜಾಗವನ್ನು ಒಕ್ಕಲಿದ್ದವರಿಗೆ ಬಿಟ್ಟುಕೊಟ್ಟರು.

2. ಮದನಿಯವರು ಹರೇಕಳ ಮಸೀದಿಯ ಕೊಳದಲ್ಲಿ ಒಮ್ಮೆ ಪ್ರಾರ್ಥನೆಗಾಗಿ "ವಝೂ" (ನಮಾಜಿಗಾಗಿ ಮುಖ, ಕೈಕಾಲು ಶುದ್ಧಿಗೊಳಿಸುವ ಕ್ರಿಯೆ) ಮಾಡುತ್ತಿರುವಾಗ ಅನಿರೀಕ್ಷಿತವಾಗಿ ಅವರು ಆಕಾಶದ ಕಡೆಗೆ ದೃಷ್ಟಿ ಬೀರಿ ನೀರನ್ನು ಮೇಲಕ್ಕೆ ಚೆಲ್ಲಲಾರಂಭಿಸಿದರು. ಈ ದೃಶ್ಯವನ್ನು ಕಂಡವರು ಅವರಲ್ಲಿ ಕಾರಣವನ್ನು ಕೇಳಿದಾಗ "ಮಕ್ಕಾದಲ್ಲಿ ಬೆಂಕಿ ಬಿದ್ದುದನ್ನು ನಂದಿಸಲು ನೀರನ್ನು ಚೆಲ್ಲಿರುವುದಾಗಿ" ಹೇಳಿದರು. ಆ ವರ್ಷ ಹಜ್ಜ್ ಯಾತ್ರೆಗೆ ಹೋಗಿದ್ದವರು ಮರಳಿದಾಗ ಮಕ್ಕಾ ಮಸೀದಿಯ ಒಂದು ಮೂಲೆಯಲ್ಲಿ ಆಕಸ್ಮಿಕವಾಗಿ ಬೆಂಕಿ ಉಂಟಾಯಿತೆಂದು ಎಲ್ಲಿಂದಲೋ ಅನಿರೀಕ್ಷಿತವಾಗಿ ನೀರು ಎರಚಲ್ಪಟ್ಟು ಅದು ನಂದಿತೆಂದು ತಿಳಿಸಿದರು.

3. ಹಿಂದಿನ ಕಾಲದಲ್ಲಿ ಪಾಶ್ಚಾತ್ಯ ದೇಶಗಳಿಂದ ವ್ಯಾಪಾರಕ್ಕಾಗಿ ಈ ವರ್ತಕರು ಪ್ರದೇಶಕ್ಕೆ ಬರುತ್ತಿದ್ದರು. ಹಾಗೆಯೇ ಬಂದಿಳಿದ ಹಾಯಿಹಡಗೊಂದರ ಸಾಮಾಗ್ರಿಗಳನ್ನು ಇಳಿಸುವಾಗ ಅಮೂಲ್ಯ ವಸ್ತುಗಳನ್ನೊಳಗೊಂಡ ಕೈಚೀಲವು ಸಮುದ್ರದಲ್ಲಿ ಬಿತ್ತು. ಹತಾಶರಾದ ವರ್ತಕರು ತಮ್ಮ ದುಗುಡವನ್ನು ಮಂಗಳೂರಿನ ನಿವಾಸಿಗಳಲ್ಲಿ ತಿಳಿಸಿದಾಗ, ನಿವಾಸಿಯೊಬ್ಬರು ಉಳ್ಳಾಲದ ಸಂತ ಮದನಿಯವರಲ್ಲಿ ತಿಳಿಸಿದರೆ ಪರಿಹಾರ ಸಿಗಬಹುದೆಂದು ಸೂಚಿಸಿದರು. ಅದರಂತೆ ಆ ವರ್ತಕರು ಉಳ್ಳಾಲಕ್ಕೆ ಬಂದು ಸಂತ ಮದನಿಯವರಲ್ಲಿ ತಮ್ಮ ಸಂಕಷ್ಟವನ್ನು ತೋಡಿಕೊಂಡಾಗ, ಸಂತರು ಅವರನ್ನು ಒಂದುದಿನ ಬಿಟ್ಟು ಬರುವಂತೆ ಸೂಚಿಸಿದರು. ಅದರಂತೆ ಆ ವರ್ತಕರು ಮರುದಿವಸ ಸಂತರನ್ನು ಭೇಟಿಯಾದಾಗ, ತಾವು ಕುಳಿತಿದ್ದ ಪೀಠದ ಹಿಂಭಾಗದಿಂದ ನೀರು ಹೊರಸೂಸುತ್ತಿದ್ದ ಚೀಲವನ್ನು ತೆಗೆದು ಆ ನಾವಿಕರಿಗೆ ನೀಡಿದರು. ಆ ವರ್ತಕರು ಚೀಲ ತಮ್ಮದೆಂದು ದೃಢಪಡಿಸಿ, ಸಂತರ ಆಶೀರ್ವಾದ ಪಡೆದು ಸಂತೋಷದಿಂದ ನಿರ್ಗಮಿಸಿದರು.

4. ಮದನಿಯವರ ವಾರ್ಧಕ್ಯ ಕಾಲದಲ್ಲಿ ಅವರ ಧರ್ಮಪತ್ನಿ ತಮ್ಮ ಮರಣಾ ನಂತರ, ತನ್ನ ಜೀವನ ನಿರ್ವಹಣೆಯ ಬಗ್ಗೆ ಕೇಳಿದಾಗ, ದಿನಾಲೂ ನನ್ನ ಸಮಾಧಿಯ ಬಳಿ ಬಂದರೆ ಅಲ್ಲಿ ನಿನಗೆ ದೈನಂದಿನ ವೆಚ್ಚದ ಹಣ ಸಿಗುವುದು ಎಂದು ಹೇಳಿದರು. ನಿಧನದ ಬಳಿಕ ಅವರ ಮಾತಿನಂತೆ ಸಮಾಧಿಯ ಬಳಿ ಅವರ ಧರ್ಮಪತ್ನಿ ಹೋದಾಗ ಅವರಿಗೆ ದೈನಂದಿನ ವೆಚ್ಚಕ್ಕೆ ತಗಲುವ ಒಂದು ನಾಣ್ಯ ಲಭಿಸುತ್ತಿತ್ತು. ನೆರೆಮನೆಯ ಹೆಂಗಸಿನ ಉಪದೇಶದಂತೆ, ಒಂದುದಿನ ಸಿಗುತ್ತಿದ್ದ ಒಂದು ನಾಣ್ಯದ ಅರ್ಧದಷ್ಟು ಖರ್ಚು ಮಾಡಿ ಉಳಿದ ಅರ್ಧವನ್ನು ಉಳಿತಾಯ ಮಾಡಿದರು. ಮರುದಿನದಿಂದ ಸಮಾಧಿ ಬಳಿ ಹೋದಾಗ ಅಲ್ಲಿ ಸಿಕ್ಕಿದ್ದು ಅರ್ಧ ನಾಣ್ಯ ಮಾತ್ರವಾಗಿತ್ತು. ಮುಂದೆ ಅದೇ ಹಣದಲ್ಲಿ ಅವರು ದಿನ ಖರ್ಚು ನೋಡಿಕೊಳ್ಳಬೇಕಾಯಿತು.20

ಹೀಗೆ ತಮ್ಮ ಜೀವನ ಕಾಲದಲ್ಲೇ ಹಲವಾರು ಅಭೌತಿಕ ಚಮತ್ಕಾರಗಳನ್ನು ತೋರಿಸಿದ ಬಗ್ಗೆ ಇರುವ ಹಲವಾರು ಐತಿಹ್ಯಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉಲ್ಲೇಖಿಸಲಾಗಿದೆ. ಐತಿಹಾಸಿಕವಾಗಿ ಇವುಗಳಿಗೆ ನಾವು ವಿಶೇಷ ಮಹತ್ವವನ್ನು ಕಲ್ಪಿಸಲು ಸಾಧ್ಯವಾಗುವುದಿಲ್ಲ. ಆದರೆ ಸಂದರ್ಶನ ಮಾಡಿದ ವೇಳೆ ಮಹಮ್ಮದ್ ತಂಗಳ್, ದರ್ಗಾದಲ್ಲಿ ಮುಅದ್ದಿನ್ ಆಗಿ 50 ವರ್ಷ ಕೆಲಸ ಮಾಡಿದ ಬಾವು ಮುಸ್ಲಿಯಾರ್, ಹರೇಕಳದ ಪಟ್ಟಾಂಬಿ ಮುಸ್ಲಿಯಾರ್, ದರ್ಗಾ ಕಮಿಟಿ ಮೇನೇಜರ್, ಕಮಿಟಿ ಸದಸ್ಯ ಹಮ್ಮಬ್ಬ ಹಾಜಿ ಮೊದಲಾದವರು ಮೇಲಿನ ಕರಾಮತ್ತುಗಳ ಬಗ್ಗೆ ತಮ್ಮ ಸಹಮತವನ್ನು ನೀಡಿರುವರು.

ಉಳ್ಳಾಲ ದರ್ಗಾ

ಸೈಯದ್ ಮದನಿಯವರ ದಫನ ಜಾಗದಲ್ಲಿ ಆರಂಬಿಕ ದಿನಗಳಲ್ಲಿ ವಾರ್ಷಿಕ ಪ್ರಾರ್ಥನೆ ಅಥವಾ 'ಆಂಡ್ ನೇರ್ಚೆ' ನಡೆಯುತ್ತಿತ್ತು. ಆ ಸಮಯದಲ್ಲಿ ಸಣ್ಣ ಮಟ್ಟಿನ ಪ್ರಾರ್ಥನೆ, ಹರಕೆಗಳನ್ನು ಸಲ್ಲಿಸಲಾಗುತ್ತಿತ್ತು. ಕ್ರಮೇಣ ಎರಡು ವರ್ಷಕ್ಕೊಮ್ಮೆ ಹಾಗೂ ಮೂರು ವರ್ಷಕ್ಕೊಮ್ಮೆ ಈ ಪ್ರಾರ್ಥನೆ ನೇರವೇರುತ್ತಿತ್ತು. ಆ ಸಂದರ್ಭದಲ್ಲೂ ಜನಸಾಮಾನ್ಯರೂ ತಮ್ಮ ಇಷ್ಟಾರ್ಥ ಸಿದ್ದಿಗಾಗಿ, ಆ ಸಮಾಧಿಗೆ ಕಾಣಿಕೆಗಳನ್ನು ಹರಕೆಯ ರೂಪದಲ್ಲಿ ಸಲ್ಲಿಸುತ್ತಿದ್ದರು.

ಆದರೆ 20ನೇ ಶತಮಾನದ ಆದಿ ಭಾಗದವರೆಗೂ ಈ ದರ್ಗಾವು ಅಷ್ಟು ಪ್ರಸಿದ್ದಿಯಲ್ಲಿರಲಿಲ್ಲ ಎಂಬುದು ಬಿ. ಎಂ. ಇಚ್ಲಂಗೋಡ್‌ರವರ ಅಭಿಪ್ರಾಯ. ಅದರಂತೆ ಹೈದರ್‌ಅಲಿ, ಟಿಪ್ಪು ಸುಲ್ತಾನ್ ಕರಾವಳಿ ಕರ್ನಾಟಕಕ್ಕೆ ಬಂದಾಗ ಅವರು ಉಳ್ಳಾಲದ ದರ್ಗಾಕ್ಕೆ ಭೇಟಿ ನೀಡಿದ ಮಾಹಿತಿ ಎಲ್ಲಿಯೂ ಸಿಗುವುದಿಲ್ಲ. 20ನೇ ಶತಮಾನದ ಆರಂಭದಲ್ಲಿ ಈ ದರ್ಗಾವು ಪ್ರಸಿಧ್ಧಿಗೆ ಬಂತು. ಕ್ರಿ. ಶ. 1920ರ ಎಪ್ರಿಲ್ ನಲ್ಲಿ ಮೊದಲ ಬಾರಿಗೆ ಉರೂಸ್ ಕಾರ್ಯಕ್ರಮವನ್ನು 5 ವರ್ಷಕ್ಕೊಮ್ಮೆ ನಡೆಸಲು ಅಂದಿನ

ಜಮಾಅತ್ ಮುಕ್ತೇಸರರು ಮತ್ತು ಸದಸ್ಯರು ತೀರ್ಮಾನಿಸಿದರು. ಆನಂತರ ಉಳ್ಳಾಲದಲ್ಲಿ 5 ವರ್ಷಕ್ಕೊಮ್ಮೆ ಉರೂಸ್ ಕಾರ್ಯಕ್ರಮ ನಿರಂತರವಾಗಿ ನಡೆಯುತ್ತಾ ಬಂದಿದೆ.21

ದರ್ಗಾ ಸಮೀಪದ ಮೇಲಂಗಡಿ ಕೇಂದ್ರ ಜುಮಾ ಮಸೀದಿಯನ್ನು ಕ್ರಿ ಶ 1958ರಲ್ಲಿ ಪುನರ್ನಿರ್ಮಾಣಗೊಳಿಸಲಾಯಿತು. ಇದರ ಸಮೀಪದಲ್ಲೇ ಶರೀಫುಲ್ ಮದನಿಯವರ ಅಂತ್ಯ ವಿಶ್ರಮಗೊಂಡ ಸ್ಥಳವಿದ್ದು, ದರ್ಗಾ ಶರೀಫ್ ಆಗಿ ಮೂಡಿ ಬಂತು. ಕ್ರಿ. ಶ. 1970ರಲ್ಲಿ ಈ ದರ್ಗಾ ಶರೀಫ್ ಕಟ್ಟಡವನ್ನು ಭವ್ಯವಾಗಿ ನಿರ್ಮಿಸಲಾಯಿತು. ಕ್ರಿ. ಶ. 2005ರ ಉರೂಸ್ ವೇಳೆಗೆ ಈ ದರ್ಗಾದ ಗುಮ್ಮಟವನ್ನು ಸುಂದರವಾಗಿ ಪುನರ್ನಿರ್ಮಿಸಲಾಯಿತು. ನಂತರ ರಾಜ್ಯ ಸರಕಾರದ ಅನುದಾನದಿಂದ ರಸ್ತೆ, ವಿದ್ಯುತ್ ಮತ್ತು ಇತರ ಸೌಕರ್ಯಗಳನ್ನು ಒದಗಿಸಲಾಗಿದೆ. ಈ ದರ್ಗಾದಲ್ಲಿ ಸುಮಾರು 100 ವರ್ಷಗಳ ಹಿಂದೆ ಬಹಿರಂಗವಾಗಿ ಪ್ರಾರ್ಥನೆಯನ್ನು ಸಲ್ಲಿಸಲು ಆರಂಭಿಸಿದವರು ಅಬೂಬಕ್ಕರ್ ಮುಸ್ಲಿಯಾರ್ ಎಂಬವರಾಗಿದ್ದರು.

ಇತ್ತೀಚಿನ ದಿನಗಳಲ್ಲಿ ಜಿಲ್ಲೆಯ ಮಾತ್ರವಲ್ಲದೇ ದಕ್ಷಿಣ ಭಾರತದಲ್ಲೇ ಪ್ರಮುಖ ಸಂದರ್ಶನ ಕೇಂದ್ರವಾದ ಸಯ್ಯದ್ ಮದನಿ ದರ್ಗಾ, ಲಕ್ಷಾಂತರ ಮಂದಿ ಆಸ್ತಿಕರ ಯಾತ್ರಾಸ್ಥಳವಾಗಿ ಪ್ರಸಿದ್ಧಿ ಪಡೆದಿದೆ. ಭಾರತದ 3ನೇ ಅತಿದೊಡ್ಡ ದರ್ಗಾ ಎಂಬ ಖ್ಯಾತಿ ಸಯ್ಯದ್ ಮದನಿ ದರ್ಗಾಕ್ಕಿದೆ (ಮೊದಲನೆಯದ್ದು ಅಜ್ಮೀರ್ ದರ್ಗಾ, 2ನೇಯದ್ದು ಆಂಧ್ರದ ನಾಗೂರ್ ಶಾಹುಲ್ ಹಮೀದ್ ವಲಿಯ್ಯ್ ದರ್ಗಾ). ಇಲ್ಲಿಗೆ ಬರುವ ಯಾತ್ರಾರ್ಥಿಗಳ ಗಣತಿಯನ್ನಾಧರಿಸಿ ಇದನ್ನು "ದಕ್ಷಿಣ ಭಾರತದ ಅಜ್ಮೀರ್" ಎಂದೂ ಕರೆಯುತ್ತಾರೆ. ಭಾರತದ ಬೇರೆ ಬೇರೆ ರಾಷ್ಟ್ರಪತಿಗಳು, ಪ್ರಧಾನಿಗಳು, ಕರ್ನಾಟಕ ರಾಜ್ಯದ ರಾಜ್ಯಪಾಲರುಗಳು, ಮುಖ್ಯಮಂತ್ರಿಗಳಿಂದ ಆರಂಭವಾಗಿ, ಉತ್ತರ ಭಾರತದ ಹಲವು ಪ್ರದೇಶಗಳಿಂದ, ಆಂಧ್ರ, ತಮಿಳ್ನಾಡು, ಕೇರಳ ಮತ್ತು ಕರ್ನಾಟಕದ ನಾನಾ ಮೂಲೆಗಳಿಂದ ಈ ದರ್ಗಾವನ್ನು ಸಂದರ್ಶಿಸಲು ಸಾವಿರಾರು ಯಾತ್ರಾರ್ಥಿಗಳು ಬರುವುದನ್ನು ನಾವು ಇಂದಿಗೂ ಕಾಣಬಹುದು.

ಸಂತರ ಮರಣಾನಂತರದ ಕರಾಮತ್ ಅಥವಾ ಅಭೌತಿಕ ಶಕ್ತಿಯ ಬಗ್ಗೆ ಇರುವ ಐತಿಹ್ಯಗಳು

ಈ ದರ್ಗಾಕ್ಕೆ ಭೇಟಿ ಕೊಡುವ ಬಹುತೇಕ ಮಂದಿ ಸಮಾಜದ ಕೆಳಸ್ತರಕ್ಕೆ ಸೇರಿದವರು. ದರ್ಗಾದ ಬಗೆಗಿರುವ ಅವರ ನಂಬಿಕೆಗಳು ಹೆಚ್ಚಾಗಿ, ಅಸಾಮಾನ್ಯ, ಅಲೌಕಿಕ ವಿಷಯಗಳಿಗೆ ಸಂಬಂಧಿಸಿದವುಗಳಾಗಿವೆ. ಇತರ ದೇವಸ್ಥಾನ ಹಾಗೂ ದರ್ಗಾಗಳಲ್ಲಿರುವಂತೆಯೇ ಇಲ್ಲಿಯೂ ಕಿವುಡನಿಗೆ ಕಿವಿ ಕೇಳುವುದು, ಕುರುಡನಿಗೆ ಕಣ್ಣು ಕಾಣುವುದು. ಕಳ್ಳತನ ಬಯಲಾಗುವುದು ಹಾಗೂ ಇನ್ನಿತರ ಪವಾಡಗಳು ಈ ವರ್ಗದ ಜನರಿಗೆ ಗೋಚರಿಸುತ್ತವೆ. ಸಾಮಾನ್ಯ ಜನರ ದೈನಂದಿನ ಸಂಕಷ್ಟಗಳಾದ ನೀರಿನ ಬವಣೆ, ಜಲಕ್ಷಾಮ, ಕಳ್ಳತನ, ರೋಗ ರುಜಿನಗಳು ಮುಂತಾದವುಗಳಿಗೆ ಪರಿಹಾರ ಸಂತರ

ದರ್ಗಾದ ಬಳಿ ಲಭಿಸುತ್ತದೆ ಎಂಬ ನಂಬಿಕೆಯೇ ಅವರಲ್ಲಿ ದರ್ಗಾದ ಬಗ್ಗೆ ವಿಶ್ವಾಸ ಮತ್ತು ನಂಬಿಕೆಯನ್ನು ಹುಟ್ಟಿಸುತ್ತದೆ. ಅವೇ ಕೆಲವೊಮ್ಮೆ ಧಾರ್ಮಿಕ ನಂಬಿಕೆಯ ಅಡಿಪಾಯಗಳಾಗುತ್ತವೆ.23

ಉಳ್ಳಾಲದಲ್ಲಿರುವ ಇತರ ದರ್ಗಾಗಳು

ಕಡಪ್ಪುರ ಜಾರ

ಬಹಳ ಹಿಂದಿನ ಕಾಲದಲ್ಲೆ ಸಂತರೊಬ್ಬರು ಕಡಲ ಕಿನಾರೆಯಲ್ಲಿ ವಾಸ್ತವ್ಯ ಹೂಡಿದ್ದರು. ಆರಾಧನೆಗಾಗಿ ಅವರು ಇಲ್ಲೊಂದು ಹುಲ್ಲುಛಾವಣಿಯ ಪುಟ್ಟ ಗುಡಿಸಲೊಂದನ್ನು ನಿರ್ಮಿಸಿ ಹಲವಾರು ವರ್ಷಗಳ ಕಾಲ ತಮ್ಮ ಶಿಷ್ಯರೊಂದಿಗೆ ಧ್ಯಾನಾರಾಧನೆಯಲ್ಲಿ ಕಾಲ ಕಳೆದರು. ಕೊನೆಗೆ ಅಲ್ಲೇ ಇಹಲೊಕ ತ್ಯಜಿಸಿದರು. ಅವರು ನಿರ್ಮಿಸಿದ ಅದೇ ಗುಡಿಸಲಿನ ಪಕ್ಕದಲ್ಲೆ ಆ ಸಂತರನ್ನೂ, ಅವರ ಶಿಷ್ಯಂದಿರನ್ನೂ ದಫನ ಮಾಡಲಾಯಿತು. ಈ ಸಂತರ ಮತ್ತು ಶಿಷ್ಯಂದಿರ ಮೂಲ ಹಾಗೂ ಹೆಸರುಗಳ ಬಗ್ಗೆ ಯಾವುದೇ ಮಾಹಿತಿ ಲಭಿಸುವುದಿಲ್ಲ. ಆದರೆ ಅವರು ಕಡಲ ಕಿನಾರೆಯಲ್ಲಿ ಅಥವಾ ಕಡಪುರದಲ್ಲಿ ಅಂತ್ಯವಿಶ್ರಮಗೊಳ್ಳುತ್ತಿರುವುದರಿಂದ 'ಕಡಪ್ಪುರ ಜಾರ' ಅಥವಾ ಗೋರಿ ಎಂದು ಜನಪ್ರಿಯವಾಗಿದೆ. ದೂರ ಸಾಗರದಲ್ಲಿ ಮೀನು ಹಿಡಿಯಲು ಹೋಗುವವರು ಇಂದಿಗೂ ಈ ದರ್ಗಾದಲ್ಲಿ ಝಿಯಾರತ್ (ಗೋರಿ ಸಂದರ್ಶನ) ಮಾಡಿ ಇಲ್ಲಿಂದ ಒಪ್ಪಿಗೆ ಪಡೆದು ಹೋಗುವ ಕ್ರಮವಿದೆ.

ಐತಿಹ್ಯವೊಂದರ ಪ್ರಕಾರ ಮದನಿ ಸಂತರು ಮರಣಾ ನಂತರ ತಮ್ಮ ಅಭೌತಿಕ ಶಕ್ತಿಯಿಂದ ಕಡಪ್ಪುರ ಗೋರಿಗೆ ಕುದುರೆಯಲ್ಲಿ ರಾತ್ರಿ ವೇಳೆಯಲ್ಲಿ ಹೋಗುತ್ತಿದ್ದರು. ಕಡಪ್ಪುರ ಸಂತ ನಿರ್ಮಿಸಿದ ಗುಡಿಸಲು ಇಂದು ಕಡಪ್ಪುರ ಮಸೀದಿಯಾಗಿ ಪುನರ್ನಿರ್ಮಾಣಗೊಂಡಿದೆ.24

ಅರೇಕಲ ದರ್ಗಾ

ಅರೇಕಲದಲ್ಲಿ ರಾಣಿ ಅಬ್ಬಕ್ಕನ ಕಾಲದಲ್ಲಿಯೇ ಮಸೀದಿ ನಿರ್ಮಿಸಲ್ಪಟ್ಟಿತ್ತು. ಮದನಿ ಸಂತರು ತಮ್ಮ ಆರಂಭದ ದಿನಗಳನ್ನು ಇಲ್ಲೇ ಕಳೆಯುತ್ತಿದ್ದರು. ಸಂತರು ಇಲ್ಲಿ ಈ ಮೊದಲೇ ಇದ್ದ ಸೂಫಿಕೂಟದ ಗೋರಿ ಸಂದರ್ಶನ ಮಾಡುವ ವಾಡಿಕೆಯನ್ನು ಇಟ್ಟುಕೊಂಡಿದ್ದರು. ಆ ಸೂಫಿಗಳಲ್ಲಿ ಪುತ್ತು ಕೋಯ ಅಥವಾ ಅಚ್ಚು ಸಾಹೇಬ್ ಎಂಬ ಹನಫಿ ಸೂಫಿಯವರು ಖ್ಯಾತರಾಗಿದ್ದರು. ಈ ಸಂತರಿಗೆ ಸಂಬಂಧಿಸಿದಂತೆ ಹಲವಾರು ಐತಿಹ್ಯಗಳಿವೆ.25

ಕೋಟೆಪುರ ಜಾರ

ಉಳ್ಳಾಲದ ಕೋಟೆಪುರದಲ್ಲೂ ಸೂಫಿ ಸಂತರೋರ್ವರು ನೆಲೆಸಿದ್ದರು. ಆದರೆ ಈ ಸೂಫಿ ಸಂತರ ಹೆಸರು, ಮೂಲ ಅಸ್ಪಷ್ಟವಾಗಿದೆ. ಮರಣಾನಂತರ ಅವರ ಸಮಾಧಿ ಸ್ಥಳವೇ ಜಾರ ಅಥವಾ ಮುಖಾಂ ಆಗಿ ಮಹತ್ವವನ್ನು ಪಡೆಯಿತು. ಅದಕ್ಕೆ "ಬೈಚರ ಅಥವಾ ವೈದ್ಯರ ಜಾರ" ಎಂದೂ ಹೆಸರಿದೆ.

ಮುಹಿಯುದ್ದೀನ್ ಬಾವ ವಲಿಯುಲ್ಲಾ ದರ್ಗಾ

ಉಳ್ಳಾಲದ ಸಂತ ಮದನಿ ದರ್ಗಾ ಶರೀಫ್ ಮತ್ತು ಮಸೀದಿಯ ಪಶ್ಚಿಮ ದಿಕ್ಕಿನಲ್ಲಿ ಸ್ವಲ್ಪವೇ ಅಂತರದಲ್ಲಿ ಮುಹಿಯುದ್ದೀನ್ ಬಾವ ಎಂಬ ಸೂಫಿ ವರ್ಯರ ದರ್ಗಾ ಇದೆ. 20ನೇ ಶತಮಾನದಲ್ಲಿ ಕೇರಳ, ಹಾಗೂ ಕರ್ನಾಟಕದ ಕರಾವಳಿಯಲ್ಲಿ ಸಕ್ರಿಯವಾಗಿದ್ದ ಈ ಸಂತರು ಕೊನೆಗೆ ಎಪ್ರಿಲ್ 23, 1973 ರಲ್ಲಿ ನಿಧನರಾದಾಗ ಉಳ್ಳಾಲದಲ್ಲೇ ದಫನ ಮಾಡಲಾಯಿತು.26

ಈ ಎಲ್ಲಾ ಮಾಹಿತಿಗಳಿಗೆ ಮೂಲವಾದ ಅರಬೀ, ಮಲೆಯಾಳ ಕಾವ್ಯಮಾಲೆಯನ್ನು ಅವಲೋಕಿಸುವಾಗಲೂ ಈ ಘಟನೆಗಳ ಬಗ್ಗೆ ಮಾಹಿತಿ ಸಿಗುತ್ತದೆ. 'ಸೈಯ್ಯದ್ ಮದನಿ' ಅರಬೀ, ಮಲೆಯಾಳ ಕಾವ್ಯಮಾಲೆಯನ್ನು ಶ್ರೇಷ್ಠ ಕವಿಯಾದ ತಲಪ್ಪಾಡಿ ಬಾಪಕುಂಞಿ ಮೌಲವಿ (1860 –1947) ರಚಿಸಿದ್ದಾರೆ. ಕೇರಳ ಮುಸ್ಲಿಮ್ ಮಿಶನರಿಯ ಸಲಹೆಗಾರರಾಗಿ ದುಡಿದ ಇವರ ಸಯ್ಯದ್ ಮದನಿ ಮಾಲೆಯಿಂದಲೇ ಸಂತ ಮದನಿಯವರ ಜೀವನ ಚರಿತ್ರೆ, ಪವಾಡಗಳನ್ನು ಕಾಲಕ್ರಮೇಣ ಕನ್ನಡ, ಇಂಗ್ಲೀಷ್ ಬಾಷೆಗಳಿಗೆ ತರ್ಜುಮೆಗೊಳಿಸಲಾಗಿದೆ. ಆದರೆ ಇವರ ಸೈಯ್ಯದ್ ಮದನಿ ಮಾಲೆಯಲ್ಲಿ ಐತಿಹ್ಯಗಳೇ ಹೆಚ್ಚಾಗಿ ನಮೂದಿಸಲ್ಪಟ್ಟಿದೆ.

ಉಳ್ಳಾಲ ಹಲವಾರು ಸೂಫಿ ಸಂತರು ಹುಟ್ಟಿ ಬೆಳೆದ ನಾಡಾಗಿದೆ. ಐತಿಹ್ಯಗಳಲ್ಲಿರುವ ಘಟನೆಗಳಿಗೆ ಐತಿಹಾಸಿಕವಾಗಿ ವಿಶೇಷ ಮಹತ್ವಗಳನ್ನು ಕಲ್ಪಿಸಲಾಗುವುದಿಲ್ಲ. ಮೇಲೆ ನಮೂದಿಸಿದ ಹೆಚ್ಚಿನ ಎಲ್ಲಾ ಐತಿಹ್ಯಗಳು ಉಳ್ಳಾಲದ ಹಿರಿಯರಲ್ಲಿ ಅಚ್ಚಳಿಯದೆ ಉಳಿದಿದೆ. ಭೇಟಿಯಾದ ಸುಮಾರು 20 ಮಂದಿ ಹಿರಿಯರಲ್ಲೂ ಹೆಚ್ಚು ಕಡಿಮೆ ಈ ಎಲ್ಲಾ ವಿಷಯಗಳು ನೆನಪಿನಲ್ಲಿವೆ ಮಾತ್ರವಲ್ಲದೆ, ದರ್ಗಾದ ವತಿಯಿಂದ ಬಿಡುಗಡೆಯಾಗುವ ಲೇಖನ ಮಾಲಿಕೆ, ಉರೂಸ್ ವಿಶೇಷಾಂಕ, ವಾರ್ಷಿಕ ವರದಿ ಇವುಗಳೆಲ್ಲಾ ಈ ಎಲ್ಲಾ ವಿಷಯಗಳ ಬಗ್ಗೆ ಮಾಹಿತಿಯನ್ನು ನೀಡುತ್ತವೆ.27



ಉಳ್ಳಾಲ ಸಯ್ಯದ್ ಮದನಿ ದರ್ಗಾ (ಹೊರನೋಟ)



ಉಳ್ಳಾಲ ಸಯ್ಯದ್ ಮದನಿ ದರ್ಗಾ (ಒಳನೋಟ)



ಸೈಯ್ಯದ್ ಮದನಿ ಸಂತರ ಘೋರಿ



ಬೇಸಿಗೆಯ ಸಮಯದಲ್ಲಿ ಉಳ್ಳಾಲಕ್ಕೆ ನೀರು ಸರಬರಾಗುವ ದರ್ಗಾದ ಸಮೀಪದ ಬಾವಿ.

(ಭಕ್ತರು ದರ್ಗಾದಲ್ಲಿ ಜಮಾಯಿಸಿ ನೀರಿಗಾಗಿ ಪ್ರಾರ್ಥಿಸಿದಾಗ ಬತ್ತದ ನೀರು ಒದಗಿ ಬಂದ ಬಾವಿ ಎಂಬ ಐತಿಹ್ಯ ಇದೆ.)







ಸಯ್ಯದ್ ಮದನಿ ಸಂತರ ಪತ್ನಿ ವಾಸವಿದ್ದ ಮನೆ (ಪಾಂಡೇಲ್‌ಪಕ್ಕ, ಉಳ್ಳಾಲ)

ಆಕರ ಸೂಚಿ

1 ಹಮ್ಮಬ್ಬ ಹಾಜಿ(70ವರ್ಷ) ಜಮಾಅತ್ ಸಮಿತಿ ಸದಸ್ಯರು, ಉಳ್ಳಾಲ, ಇವರ ಸಂದರ್ಶನದಲ್ಲಿ ದೊರಕಿದ ಮಾಹಿತಿ(26 ಜೂನ್ 2008)

2 ಡಾ। ವಹ್ಹಾಬ್ ದೊಡ್ಡಮನಿ, *'ತುಳುನಾಡ ಮುಸ್ಲಿಮರು'* ಗ್ರೀನ್ ವರ್ಡ್ಸ್ ಮಂಗಳೂರು 2008 ಪು. 30

3 ಡಾ। ಎಚ್. ಎಲ್. ನಾಗೇಗೌಡ, *ಪ್ರವಾಸಿ ಕಂಡ ಇಂಡಿಯಾದ ಆಯ್ದ ಭಾಗ, ಉಳ್ಳಾಲ ಇತಿಆದಿ (ಸಂ.)* ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಪುಟ 45–54

4. ಡಾ। ಅಮೃತ ಸೋಮೇಶ್ವರ ಅವರೊಂದಿಗೆ ನಡೆಸಿದ ಸಂದರ್ಶನದಲ್ಲಿ ದೊರಕಿದ ಮಾಹಿತಿ(23ಜೂನ್2008)

5. ಡಾ। ವಹ್ಹಾಬ್ ದೊಡ್ಡಮನಿ, *'ತುಳುನಾಡ ಮುಸ್ಲಿಮರು'* ಗ್ರೀನ್ ವರ್ಡ್ಸ್, ಮಂಗಳೂರು 2008 ಪು. 198

6. ಡಾ। ಅಮೃತ್ ಸೋಮೇಶ್ವರ, *ಉಳ್ಳಾಲ ಇತಿಆದಿ (ಸಂ),* ಉಳ್ಳಾಲ ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪು. 76

7. ಎಂ ಅಬ್ದುಲ್ ಹಮೀದ್ ಮುಸ್ಲಿಯಾರ್, *ಸಜ್ಜನ ಸರಣಿ, ಅಲ್ ಇರ್ಶಾದ್ ಪಬ್ಲಿಕೇಶನ್, ಮಾಣಿ, 2006 ಪುಟ 66–72*

8. ಎಂ. ಸುಲೈಮಾನ್ ಸಖಾಫಿ ಎಂ, ಸುನ್ನತ್ ಜಮಾಅತ್, ಕೆ.ಎಸ್.ಬಿ ಪ್ರಕಾಶನ ಕ್ಯಾಲಿಕಟ್ಟ್ ಕೇರಳ 2006, ಪುಟ 55–70

9. ಹಸೈನಾರ್ ಫೈಝಿ, ಖತೀಬ್ ಕೇಂದ್ರ ಜುಮಾ ಮಸೀದಿ ವಿಟ್ಲ, ಅವರೊಂದಿಗೆ ನಡೆಸಿದ ಸಂದರ್ಭನದಲ್ಲಿ ದೊರಕಿದ ಮಾಹಿತಿ (15ಸಪ್ಟಂಬರ್2008)

10 ಪ್ರೋ. ಬಿ. ಎಂ. ಇಚ್ಲಂಗೋಡು, ಸೂಫಿ ಸಂತರ ಪ್ರಭಾವ(ಅಪ್ರಕಟಿತ ಲೇಖನ) ಪುಟ 16

11 ಹಿಸ್ಟರಿ ಆಫ್ ಇಂಡಿಯಾ, ಸಿವಿಲ್ ಸರ್ವೀಸ್ ಪರೀಕ್ಷಾ ಪಠ್ಯ, ಮ್ಯಾಕ್ ಮಿಲನ್ ಪ್ರಕಾಶನ 1990 ಪು.175

12 ಅದೇ, ಪುಟ 177–178

13 ಅದೇ, ಪುಟ 179–180

14 ಪ್ರೋ. ಬಿ. ಎಂ. ಇಚ್ಲಂಗೋಡು, ಸೂಫಿ ಸಂತರ ಪ್ರಭಾವ(ಅಪ್ರಕಟಿತ ಲೇಖನ) ಪುಟ 17–18

15 ಅಲ್–ಮಿಸ್ಬಾಹ್ ಉರೂಸ್ ಸ್ಮರಣ ಸಂಚಿಕೆ–2000, ಸಿರಾಜುಲ್ ಉಲೇಮಾ ವಿದ್ಯಾರ್ಥಿ ಸಂಘ ಎಸ್.ಎಂ.ಎ. ಕಾಲೇಜು ಉಳ್ಳಾಲ, 2000 ಪುಟ 19

16 ಡಿ ಐ ಅಬೂಬಕ್ಕರ್ ಕೈರಂಗಳ, ಸಂತಶ್ರೇಷ್ಠ-ಸಯ್ಯದ್ ಮದನಿ, ಸಮರಸ ಪ್ರಕಾಶನ ಮಂಗಳೂರು, 2005 ಪುಟ 15-17

17 ಪ್ರೋ. ಬಿ. ಎಂ. ಇಚ್ಲಂಗೋಡು, ಸೂಫಿ ಸಂತರ ಪ್ರಭಾವ (ಅಪ್ರಕಟಿತ ಲೇಖನ) ಪುಟ 16-17

18 ಹಮ್ಮಬ್ಬ ಹಾಜಿ(70ವರ್ಷ) ಜಮಾಅತ್ ಸಮಿತಿ ಸದಸ್ಯರು, ಉಳ್ಳಾಲ, ಸಯ್ಯದ್ ಮಹಮ್ಮದ್ ತಂಗಳ್, ಪಾಂಡೇಲ್‌ಪಕ್ಕ ಅವರೊಂದಿಗೆ ನಡೆಸಿದ ಸಂದರ್ಶನದಲ್ಲಿ ದೊರಕಿದ ಮಾಹಿತಿ 21-06-08

19 ಡಿ ಐ ಅಬೂಬಕ್ಕರ್ ಕೈರಂಗಳ, ಸಂತಶ್ರೇಷ್ಠ-ಸಯ್ಯದ್ ಮದನಿ, ಸಮರಸ ಪ್ರಕಾಶನ ಮಂಗಳೂರು, 2005 ಪುಟ 16-17

20. ಬಾಪ ಕುಂಞ ಮುಸ್ಲಿಯಾರ್ ತಲಪಾಡಿ, ಸಯ್ಯದ್ ಮದನಿ ಅರಬಿ ಮಲಯಾಳ ಕಾವ್ಯಮಾಲೆ, ತಿರೂರಂಗಾಡಿ, 1947 ಪುಟ 1-13

21. ಹಮ್ಮಬ್ಬ ಹಾಜಿ(70ವರ್ಷ) ಜಮಾಅತ್ ಸಮಿತಿ ಸದಸ್ಯರು, ಉಳ್ಳಾಲ ಮತ್ತು ಬಿ.ಎಂ ಇಚ್ಲಂಗೋಡು ಅವರೊಂದಿಗೆ ನಡೆಸಿದ ಸಂದರ್ಶನದಲ್ಲಿ ದೊರಕಿದ ಮಾಹಿತಿ(21-06-08)

22. ಉಳ್ಳಾಲ ಜುಮ್ಮಾ ಮಸ್ಜಿದ್ ಮತ್ತು ಶರೀಫುಲ್ ಮದನಿ ದರ್ಗಾ- ಕಿರುಹೊತ್ತಗೆ, ಉಳ್ಳಾಲ ದರ್ಗಾ ಸಮಿತಿ 1985 ಪುಟ 18-19

23 ಹಜ್ರತ್ ಸೆಯ್ಯದ್ ಶರೀಫುಲ್ ಮದನಿ ದರ್ಗಾ- ಸಂಕ್ಷಿಪ್ತ ಪರಿಚಯ, ಉಳ್ಳಾಲ ದರ್ಗಾ ಸಮಿತಿ (1990) ಪುಟ 10-11

ಸಯ್ಯದ್ ಮದನಿ ಕನ್ನಡ ಸಾಹಿತ್ಯ ವೇದಿಕೆ, ಸಮಸ್ಯೆಯ ಸುಳಿಯಲ್ಲಿ ಮುಸ್ಲಿಮರು, ಮದನಿ ಸಾಹಿತ್ಯ ವೇದಿಕೆ, 1996 ಪುಟ 14-15.

24. ಪುತ್ತು ಬಾವು ಮುಕ್ರಿ(ಉಳ್ಳಾಲ ಮಸೀದಿ ಮತ್ತು ದರ್ಗಾದಲ್ಲಿ 50 ವರ್ಷ ಸೇವೆಯಲ್ಲಿದ್ದವರು) ಅವರೊಂದಿಗೆ ನಡೆಸಿದ ಸಂದರ್ಶನದಲ್ಲಿ ದೊರಕಿದ ಮಾಹಿತಿ, 15ಜುಲೈ2008.

25 ಪಟ್ಟಾಂಬಿ ಉಸ್ತಾದ್ ಅರೇಕಳ, ಅವರೊಂದಿಗೆ ನಡೆಸಿದ ಸಂದರ್ಶನದಲ್ಲಿ ದೊರಕಿದ ಮಾಹಿತಿ, 2ಆಗಸ್ಟ್2008.

26 ಅಲ್-ಮಿಸ್ಬಾಹ್ ಉರೂಸ್ ಸ್ಮರಣ ಸಂಚಿಕೆ-2000, ಸಿರಾಜುಲ್ ಉಲೇಮಾ ವಿದ್ಯಾರ್ಥಿ ಸಂಘ ಎಸ್.ಎಂ.ಎ. ಕಾಲೇಜು ಉಳ್ಳಾಲ, 2000 ಪುಟ 20

27 ಡಿ ಐ ಅಬೂಬಕ್ಕರ್ ಕೈರಂಗಳ, ಸಂತಶ್ರೇಷ್ಠ-ಸಯ್ಯದ್ ಮದನಿ, ಸಮರಸ ಪ್ರಕಾಶನ ಮಂಗಳೂರು, 2005 ಪುಟ 14

ಅಧ್ಯಾಯ 3

ಉರೂಸ್ ಆಚರಣೆ

ಉರೂಸಿನ ಹಿನ್ನೆಲೆ

ವಿವಿಧ ಆಚರಣೆಗಳು-ಹರಕೆಗಳು, ಮತ ಪ್ರವಚನ ಕಾರ್ಯಕ್ರಮ,

ಝಿಯಾರತ್, ಸಾಮೂಹಿಕ ಝಿಯಾರತ್,

ದರ್ಗಾ ಸುತ್ತಮುತ್ತಲಿನ ಅಲಂಕಾರ ಇತ್ಯಾದಿ

ಸಂದಲ್ ಮೆರವಣಿಗೆ

ಸಾರ್ವಜನಿಕ ಅನ್ನದಾನ

ಅಧ್ಯಾಯ 3

ಉರೂಸ್ ಆಚರಣೆ

ಹಿನ್ನೆಲೆ-ವಿವಿಧ ಆಚರಣೆಗಳು, ಹರಕೆಗಳು, ಸಂದಲ್ ಮೆರವಣಿಗೆ, ಸಾರ್ವಜನಿಕ ಅನ್ನದಾನ

ಉರೂಸಿನ ಹಿನ್ನಲೆ

ಉರೂಸ್ ಎಂದರೆ "ಸಜ್ಜನ ಸ್ಮರಣೆ ಸದಾ ಜನರಲ್ಲಿ ಹಸಿರಾಗಿ ಉಳಿಯಲು, ಸಜ್ಜನರು ನೀಡಿದ ಭೋಧನೆಗಳತ್ತ ಜನರನ್ನು ಆಮಂತ್ರಿಸುವುದು, ಅವರ ಪರವಾಗಿ ದಾನ ಧರ್ಮ ನೀಡಿ ಪುಣ್ಯ ಗಳಿಸುವುದು, ಧಾರ್ಮಿಕ ಪ್ರಚಾರವನ್ನು ಸಕ್ರಿಯ ಗೊಳಿಸುವುದು, ಸಂತರ ಝಿಯಾರತ್ (ಸಂದರ್ಶನ) ನಡೆಸಿ, ಅಧ್ಯಾತ್ಮ ಚೈತನ್ಯವನ್ನು ಪಡೆಯುವುದು ಹಾಗೂ ಇವೆಲ್ಲವುಗಳಲ್ಲಿ ಇಸ್ಲಾಮಿ ಚೌಕಟ್ಟಿನೊಳಗೆ ನಡೆಸುವ ಕಾರ್ಯಕ್ರಮಗಳ ಒಟ್ಟು ಸಂಗ್ರಹವಾಗಿದೆ".1

ಇನ್ನೊಂದು ವ್ಯಾಖ್ಯಾನದ ಪ್ರಕಾರ "ನಿಶ್ಚಿತವಾದ ಸಮಯದಲ್ಲಿ ಕೆಲವು ಪುಣ್ಯವುಳ್ಳ ಕಾರ್ಯಕ್ರಮ ಗಳೊಂದಿಗೆ ಸಾಮೂಹಿಕ ಝಿಯಾರತ್ (ಗೋರಿ ಸಂದರ್ಶನ) ನಡಸುವುದಕ್ಕೆ 'ಉರೂಸ್' ಎಂದು ಕರೆಯಲಾಗುವುದು. ಸುನ್ನಿ ಪಂಥದ ಉಲೇಮಾಗಳ ಅಭಿಪ್ರಾಯದ ಪ್ರಕಾರ ಪ್ರವಾದಿಯವರು ಕಲಿಸಿ ಕೊಟ್ಟ ಮೂರು ಮುಖ್ಯ ಕಾರ್ಯಗಳು ಪುಣ್ಯವುಳ್ಳ ಕರ್ಮಗಳಾಗಿವೆ.

ಅ) ಪ್ರವಾದಿಯವರು ಭೋಧಿಸಿದ ಧಾರ್ಮಿಕ ವಿದ್ಯೆಯ ಕಲಿಕೆ ಇಂದು ನವೀನ ಮಾದರಿ ಯಲ್ಲಿ ಕಲಿಸುವುದಕ್ಕೆ ಮದ್ರಸ ಶಿಕ್ಷಣಯೆನ್ನಲಾಗುತ್ತದೆ.

ಆ) ಪ್ರವಾದಿಯವರು ಅನಾಥ ಮಕ್ಕಳ ಪೋಷಣೆ ಮತ್ತು ಸಂರಕ್ಷಣೆ ಪುಣ್ಯವುಳ್ಳ ಕಾರ್ಯವೆಂದು ಸಾರಿದ್ದಾರೆ. ಇಂದು ಅಂತಹ ಕಾರ್ಯ ಯತೀಂಖಾನ(ಅನಾಥಾಲಯ)ಗಳ ಮೂಲಕ ನಡೆಯುತ್ತದೆ.

ಇ) ಅದೇ ರೀತಿ ಮೃತ ಮಹಾತ್ಮರ ಹೆಸರಲ್ಲಿ ನಡೆಸುವ ಕಾರ್ಯಗಳಾದ ಸಾಮೂಹಿಕ ಝಿಯಾರತ್, ಕುರ್‌ಆನ್ ಪಾರಾಯಣ, ದಾನಧರ್ಮ, ಧರ್ಮ ಪ್ರವಚನ ಹಾಗೂ ಅನ್ನದಾನ ಮುಂತಾದುವುಗಳನ್ನು ಒಂದೇ ಸಮಯದಲ್ಲಿ ನಡೆಸುವುದಕ್ಕೆ 'ಉರೂಸ್' ಎನ್ನುವರು.

'ಉರೂಸ್' ಈ ಪದವು ಮುಸ್ಲಿಂರಲ್ಲಿ ಪರಿಚಿತವಾಗಿದ್ದು ನಾನಾ ಕಡೆಗಳಲ್ಲಿ ಸಜ್ಜನರ ಸ್ಮರಣಾರ್ಥ ಅವರ ಗೋರಿಗಳ ಪರಿಸರದಲ್ಲಿ ವಾರ್ಷಿಕ ಹರಕೆ (ಆಂಡ್ ನೇರ್ಚೆ) ಸಂದರ್ಶನ ಯಾ ಝಿಯಾರತ್ ಮುಂತಾದ ಹೆಸರಿನಲ್ಲಿ ಹಲವು ಧಾರ್ಮಿಕ ಚಟುವಟಿಕೆಗಳು ಜರಗುತ್ತದೆ. ಉರೂಸ್ ಎಂಬುದು ಮೂಲತಃ ಅರಬೀ ಪದವಾಗಿದ್ದು 'ಮದುವೆ' ಎಂಬ ಅರ್ಥವಿದೆ. ಪ್ರವಾದಿ ವಚನದಲ್ಲಿ 'ನಮ್‌ಕ ನವ್‌ಮತಿಲ್ ಅರೂಸ್' ಅಥವಾ ಮದುಮಗನ ನಿದ್ದೆಯಂತೆ ನಿದ್ರೆ ಮಾಡು ಎಂಬ ವಾಕ್ಯದಿಂದ 'ಉರೂಸ್' ಎಂಬ ಪದ ಬಳಕೆಗೆ ಬಂದಿದೆ ಎಂದು ಸುನ್ನಿ ಪಂಡಿತರ ಅಭಿಪ್ರಾಯವಾಗಿದೆ.

ಗೋರಿಯಲ್ಲಿ ಅಂತ್ಯ ವಿಶ್ರಮದಲ್ಲಿರುವ ಸಂತರ ನಿದ್ರೆಯನ್ನು ಮದುಮಗನ ಸುಖ ನಿದ್ರೆಗೆ ಹೋಲಿಸಿದ್ದರಿಂದ ಅವರ ಸಂದರ್ಶನವನ್ನೊಳಗೊಂಡ ಸಮಾರಂಭವನ್ನು 'ಮದುವೆ' ಎಂಬರ್ಥ ಬರುವ 'ಉರೂಸ್' ಎಂಬುದಾಗಿ ಕರೆದಿರಬಹುದು. ಇನ್ನೊಂದು ಅರ್ಥದಲ್ಲಿ ಉರೂಸ್ ಎಂದರೆ ಝಿಯಾರತ್ ಯಾ ಸಂದರ್ಶನವೆಂದೂ ಬಳಕೆಯಲ್ಲಿದೆ. ಆದುದರಿಂದಲೇ 'ಉರೂಸ್ ಯಾನೆ ಝಿಯಾರತ್' ಎಂಬ ಪ್ರತ್ಯೇಕ ಸೂಚನೆಯನ್ನು ಎಲ್ಲಾ ಉರೂಸ್ ಕಾರ್ಯಕ್ರಮಗಳ ಬಗ್ಗೆ ತಿಳಿಸಲಾಗುತ್ತದೆ. ಇಲ್ಲಿ ಯಾನೆ ಎಂಬುದು ಅರಬೀ ಮೂಲದ 'ಯಅ್‌ನೀ' ಎಂಬ ಪದದಿಂದ ಬಂದಿದ್ದು, ಅದರ ಅರ್ಥ 'ಇದರ ಉದ್ದೇಶ' ಎಂದಾಗಿದೆ. ಆದುದರಿಂದ 'ಉರೂಸ್ ಯಾನೆ ಝಿಯಾರತ್' ಎನ್ನುವಾಗ ಉರೂಸ್ ಇದರ ಉದ್ದೇಶ ಝಿಯಾರತ್ (ಸಂದರ್ಶನ) ಎಂದಾಗಿರುತ್ತದೆ. 2

ಭಾರತದ ಸುನ್ನಿಗಳಲ್ಲಿ ಇರುವ ಒಂದು ಪ್ರಮುಖ ಆಚರಣೆಯೆಂದರೆ 'ಉರೂಸ್' ಎಂಬುದಾಗಿ ಲೇಖಕ ಬಿ. ಎಂ. ಇಚ್ಲಂಗೋಡು ಅಭಿಪ್ರಾಯ ಪಡುತ್ತಾರೆ. ಈ ಆಚರಣೆಯು ಉತ್ತರ ಭಾರತದಲ್ಲಿ ಸೂಫಿ ಸಂತರ ಪ್ರಭಾವದಿಂದ ದೆಹಲಿ ಸುಲ್ತಾನರ ಹಾಗೂ ಮೊಘಲರ ಕಾಲದಲ್ಲಿ ಬೆಳವಣಿಗೆ ಆಯಿತು. ದಕ್ಷಿಣ ಭಾರತದಲ್ಲಿ ಉರೂಸ್ ಸಮಾರಂಭವು ಅದರಲ್ಲೂ ವಿಶೇಷವಾಗಿ ಕರಾವಳಿ ಪ್ರದೇಶದಲ್ಲಿ ಜನಪ್ರಿಯ ಆಚರಣೆಯಾಗಿ ರೂಢಿಯಲ್ಲಿತ್ತು. 19ನೇ ಹಾಗೂ 20ನೇ ಶತಮಾನದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉರೂಸ್ ಸಮಾರಂಭವು ಜನಮೆಚ್ಚುಗೆಯ ಆಕರ್ಷಣೆಯ ಆಚರಣೆಯಾಗಿ ಮೂಡಿ ಬಂತು. ಮೊಹರಂ ಹಬ್ಬದ ಆಚರಣೆ ಮಾಯವಾದಾಗ, ಉರೂಸ್ ಸಮಾರಂಭ ದಕ್ಷಿಣ ಕನ್ನಡ ಜಿಲ್ಲೆಯ ಮುಸ್ಲಿಮರ ಪ್ರಮುಖ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮವಾಗಿ ಮಾರ್ಪಟ್ಟಿತು.

ಉರೂಸ್ ಸಮಾರಂಭದಲ್ಲಿ ಸಂಗೀತ, ಸಿಡಿಮದ್ದು, ಹೂವಿನಿಂದ ಮಾಡಿದ ಅಲಂಕಾರ, ಮೆರವಣಿಗೆ ಮುಂತಾದವುಗಳನ್ನು ಗಮನಿಸಿದಾಗ ಅದು ಒಂದು ನಾಡ ಹಬ್ಬಕ್ಕೆ ಸಾಮ್ಯತೆ ಇದೆ. ಮಾತ್ರವಲ್ಲದೆ ಈ ಸಮಾರಂಭದಲ್ಲಿ ವ್ಯಾಪಾರ ವಹಿವಾಟುಗಳು, ಮನರಂಜನೆ, ಕ್ರೀಡೆಗಳು ಮತ್ತು

ಇವೆಲ್ಲವುಗಳನ್ನು ಆಸ್ವಾದಿಸಲು ಸೇರುವ ಜನ ಸಮೂಹವನ್ನು ಕಾಣಬಹುದು. ಆದುದರಿಂದ ಉರೂಸ್ ಸಮಾರಂಭವನ್ನು ಮುಸ್ಲಿಮರ 'ನಾಡ ಹಬ್ಬ'ವೆಂದೂ ಕರೆಯುವುದಿದೆ.

ಹಿಂದೂ ಧರ್ಮೀಯರಲ್ಲಿರುವ ನಾಡ ಹಬ್ಬಗಳಂತೆ ಜಿಲ್ಲೆಯಲ್ಲಿ ಉರೂಸ್ ಕಾರ್ಯಕ್ರಮವು ಬೇರೆ ಬೇರೆ ಕಡೆಗಳಲ್ಲಿ ಸಮಾರಂಭದ ರೂಪದಲ್ಲಿ 20ನೇ ಶತಮಾನದ ಆದಿಯಲ್ಲಿ ಜನಜನಿತವಾಯಿತು. ಕಾಸರಗೋಡಿನ ಮಾಲಿಕ್ ದೀನಾರ್ ವಲಿಯ ದರ್ಗಾದಲ್ಲಿ ನಡೆಯುವ ಉರೂಸ್, ಅಜಿಲಮೊಗರಿನಲ್ಲಿ ನಡೆಯುವ ಉರೂಸ್, ಸೆಯ್ಯದ್ ಮದನಿ ದರ್ಗಾ ಉಳ್ಳಾಲದಲ್ಲಿ ನಡೆಯುವ ಉರೂಸ್ ಮುಂತಾದುವುಗಳು ಇವುಗಳಲ್ಲಿ ಪ್ರಮುಖವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಇತರ ಪ್ರದೇಶಗಳಲ್ಲೂ ಪ್ರಾದೇಶಿಕ ಸಮಾರಂಭದ ರೂಪದಲ್ಲಿ ಉರೂಸ್ ಕರ್ಯಕ್ರಮ ಇಂದಿಗೂ ವಾಡಿಕೆಯಲ್ಲಿದೆ. 3

ವಿವಿಧ ಆಚರಣೆಗಳು

ನೇರ್ಚೆ ಅಥವಾ ಹರಕೆ

ಬಹು ಸಂಖ್ಯೆಯಲ್ಲಿರುವ ಸುನ್ನಿ ಪಂಥದ ಮುಸ್ಲಿಮರು ಸೂಫಿಸಂತರ ಸಮಾಧಿಯನ್ನು ಗೌರವಾದರಗಳಿಂದ ಕಾಣುವುದು, ಅವರನ್ನು ಮಧ್ಯವರ್ತಿಗಳನ್ನಾಗಿಸಿ ಅಲ್ಲಾಹನಲ್ಲಿ ಸಹಾಯವನ್ನು ಯಾಚಿಸುವುದನ್ನು ಸಾಧಾರಣವಾಗಿ ಕಾಣಬಹುದು. ಇಂತಹ ಉರೂಸ್ ಸಮಾರಂಭದಲ್ಲಿ ಹಾಗೂ ಇತರ ಸಂದರ್ಭದಲ್ಲಿ ಸಂತರ ದರ್ಗಾಕ್ಕೆ ನೇರ್ಚೆ ಅಥವಾ ಹರಕೆ ಸಲ್ಲಿಸುವುದು ವಾಡಿಕೆ. ಆ ಮೂಲಕ ಸಂತರ ಪ್ರೀತಿಗೆ ಪಾತ್ರರಾಗುವುದು ಹಾಗೂ ಅವರ ಆಶೀರ್ವಾದ ಪಡೆಯುವುದು ಸಾಮಾನ್ಯ ನಂಬಿಕೆಯಾಗಿದೆ. ಸಂತರ ಅಭೌತಿಕ ಸಿದ್ದಿಗಳಲ್ಲಿ (ಕರಾಮತ್ತಿನಲ್ಲಿ) ವಿಶ್ವಾಸವಿಟ್ಟು ಗೋರಿ ಸಂದರ್ಶನ ಮಾಡುವ ಪರಿಪಾಠ ಇಂದಿಗೂ ಹೆಚ್ಚಿನ ಮುಸ್ಲಿಮರಲ್ಲಿ ಇರುವಂತಹ ಒಂದು ಪದ್ದತಿ.

ಕೆಲವು ಸಂದರ್ಭಗಳಲ್ಲಿ ಮಾರಕ ರೋಗ ರುಜಿನಗಳಿಂದ ಪಾರಾಗಲು, ಅಪಘಾತ ಅಥವಾ ಇನ್ನಿತರ ವಿಪತ್ತುಗಳಿಂದ ರಕ್ಷೆ ಸಿಗಲು, "ಶರತ್ತಾಧರಿತ ನೇರ್ಚೆ" (Conditional Nerchas)ಯನ್ನು ದರ್ಗಾಕ್ಕೆ ಒಪ್ಪಿಸುವ ಪದ್ಧತಿಯೂ ಇದೆ. ಯಾವುದಾದರೊಂದು ರೋಗ ಯಾ ಆಪತ್ತು ಸಂಭವಿಸಿದಾಗ 'ಅದರಿಂದ ರಕ್ಷೆ ಸಿಕ್ಕಿದರೆ ದರ್ಗಾಕ್ಕೆ ಇಂತಿಂತಹ ಹರಕೆ ಹಣದ ರೂಪದಲ್ಲಿ ಯಾ ವಸ್ತುರೂಪದಲ್ಲಿ ಸಲ್ಲಿಸುತ್ತೇನೆ ಎಂದು ನಿಶ್ಚಯಿಸುವುದು ಹಾಗೂ ರಕ್ಷೆ ಸಿಕ್ಕಿದ ನಂತರ ಅಂತಹ ಹರಕೆಯನ್ನು ಒಪ್ಪಿಸುವುದು. ಇಲ್ಲಿ ವ್ಯಕ್ತಿಯು ದರ್ಗಾಕ್ಕೆ ಹರಕೆ ಹೇಳುವುದು ಮತ್ತು ಅದರಿಂದ ಅವನಿಗೆ ರಕ್ಷೆ ಸಿಗುವಂತಹ ನಂಬಿಕೆ ಬಲವಾಗಿರುವ ಅಂಶವನ್ನು ಕಾಣಬಹುದು. ಇದೇ ರೀತಿಯ ನಂಬಿಕೆ ಹಿಂದೂಗಳಲ್ಲಿಯೂ, ಕ್ರೈಸ್ತರಲ್ಲಿಯೂ ಕಂಡುಬರುತ್ತದೆ. 4

ಮುಂಗಡ ನೇರ್ಚೆ ಯಾ ಹರಕೆ

ಕೆಲವು ಸಂದರ್ಭದಲ್ಲಿ ಘಟನೆಗೆ ಮೊದಲೇ ದರ್ಗಾವನ್ನು ಭೇಟಿ ಮಾಡುವ ಸಂಪ್ರದಾಯವಿದೆ. ಅದರಂತೆ ಯಾವುದಾದರೊಂದು ಒಳ್ಳೆ ಕೆಲಸವನ್ನು ಆರಂಭಿಸುವ ಮೊದಲು, ವ್ಯಾಪಾರ, ಕೆಲಸವಾದರೆ ಅದರಲ್ಲಿ ಒಳ್ಳೆಯ ಲಾಭ, ಸಂಬಳಕ್ಕೋಸ್ಕರ, ಯಾವುದಾದರೂ ಕಳೆದು ಹೋದ ಬೆಲೆ ಬಾಳುವ ವಸ್ತು ಮರಳಿ ಸಿಗಲು, ಒಳ್ಳೆಯ ಬೀಗ ಸಂಬಂಧ ಮೂಡಿ ಬರಲು, ಕುಟುಂಬ ಜೀವನ ಸರಾಗವಾಗಿ ನೆಮ್ಮದಿಯಿಂದ ನಡೆಯಲು, ಅಥವಾ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶದೊಂದಿಗೆ ತೇರ್ಗಡೆಯಾಗಲು ಇತ್ಯಾದಿ ಉದ್ದೇಶಗಳ ಈಡೇರಿಕೆಗೆ ಮುಂಗಡವಾಗಿ ಹರಕೆ ಯಾ ನೇರ್ಚೆಯನ್ನು ಸಲ್ಲಿಸಿ, ದರ್ಗಾದ ಆಶೀರ್ವಾದ ಪಡೆಯುವುದು ಪ್ರತೀತಿಯಾಗಿದೆ.

ವಸ್ತುರೂಪದ ಅಥವಾ ಇತರ ನೇರ್ಚೆಗಳನ್ನು ಉಳ್ಳಾಲ ಮತ್ತು ದಕ್ಷಿಣ ಕನ್ನಡದ ಇತರ ದರ್ಗಾಗಳಿಗೆ ಕೊಡುವುದನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಅ) ಬೆಳ್ಳಿಯ ರೂಪದ ನೇರ್ಚೆ

ಮನುಷ್ಯನ ಪ್ರತೀ ಅಂಗಕ್ಕೆ ಅದರದೇ ಆದ ಬೆಳ್ಳಿಯ ರೂಪದಲ್ಲಿ (ನರ, ನಾಡಿ, ಕೈ, ಕಾಲು ಮುಂತಾದವುಗಳನ್ನು) ಹರಕೆಯ ರೂಪದಲ್ಲಿ ದರ್ಗಾಕ್ಕೆ ಒಪ್ಪಿಸುವುದು. ಇದನ್ನು ಕೊಡುವ ಉದ್ದೇಶ ಆಯಾ ಅಂಗಗಳಿಗೆ ರೋಗಗಳಿಂದ ಮತ್ತು ವಿಪತ್ತುಗಳಿಂದ ರಕ್ಷಣೆ ಸಿಗಲಿ ಎಂದಾಗಿದೆ. ಈ ಆಚರಣೆ 19ನೇ 20ನೇ ಶತಮಾನದಲ್ಲೇ ರೂಢಿಯಲ್ಲಿದೆ. ಸ್ಥಳೀಯ ಚಿನಿವಾರರಿಂದ ಆಯಾ ಅಂಗಗಳನ್ನು ತಯಾರಿಸಿ ದರ್ಗಾಕ್ಕೆ ಒಪ್ಪಿಸುವುದು ಕಾಲ ಕ್ರಮೇಣ ಬೆಳ್ಳಿಯ ಪ್ರತಿರೂಪಗಳು ದರ್ಗಾಗಳ ಪಕ್ಕದಲ್ಲೇ ಸಿದ್ದಪಡಿಸಿ ನಿಗದಿಪಡಿಸಿದ ಬೆಲೆಗೆ ಮಾರಲಾಗುತ್ತದೆ. ಹರಕೆ ಹೇಳಿದವರು ಅವುಗಳನ್ನು ಒಪ್ಪಿಸುವುದು ಅಥವಾ ರೂಪಗಳು ಸಿಗದಿದ್ದಲ್ಲಿ ಅವುಗಳ ಕ್ರಯದಷ್ಟು ಹಣವನ್ನು ದರ್ಗಾಕ್ಕೆ ಸಲ್ಲಿಸುವುದು ಸಂಪ್ರದಾಯವಾಗಿದೆ. ಇತ್ತೀಚೆಗೆ ಈ ನೇರ್ಚೆ ಕಡಿಮೆಯಾಗುತ್ತಾ ಬಂದರೂ ಉಳ್ಳಾಲ, ಅಜಿಲಮೊಗ್ರು ಮುಂತಾದ ಕಡೆ ಜಾರಿಯಲ್ಲಿದೆ. ಇಂತಹ ಹರಕೆ ಸಲ್ಲಿಸುವುದು ದೇವಸ್ಥಾನ, ಚರ್ಚುಗಳಲ್ಲಿಯೂ ಕಾಣ ಸಿಗುತ್ತದೆ.

ಆ) ಬೆಳಕು

ದರ್ಗಾಕ್ಕೆ ಎಣ್ಣೆಯನ್ನು ಹೊತ್ತಿಸಿ ನಿರಂತರವಾಗಿ ಬೆಳಕು ಹೊತ್ತಿಕೊಂಡು ಇರುವಂತೆ ಮಾಡುವುದು. ಹಿಂದಿನ ಕಾಲದಲ್ಲಿ ವಿದ್ಯುತ್ ದೀಪಗಳಿಲ್ಲದ ಸಮಯದಲ್ಲಿ ಈ ಬೆಳಕು ಹೊತ್ತಿಸಿ ಇಡುವಂತಹ ವಾಡಿಕೆ

ಇತ್ತು. ಅದಕ್ಕೆ ಬೇಕಾದ ಬತ್ತಿ, ಎಣ್ಣೆ ಹಾಗೂ ಬೆಳಕಿಡುವ ದೀಪವನ್ನುದರ್ಗಾಕ್ಕೆ ಒಪ್ಪಿಸುವುದು. ಅದರಿಂದಲೂ ತಮ್ಮ ಉದ್ದೇಶ ಪೂರ್ತಿಯಾಗುವ ಇರಾದೆ ಇತ್ತು.

ಇ) ಬೆಲ್ಲದ ಗಂಜಿ (ಚಕ್ಕರೆ ಕಂಞ್ಞಿ) ನೇರ್ಚೆ

ಬೆಳ್ತಿಗೆ ಅಕ್ಕಿ, ತೆಂಗಿನ ಕಾಯಿಯ ಹಾಲು ಮತ್ತು ಅಚ್ಚು ಬೆಲ್ಲವನ್ನು ಹಾಕಿ ತಯಾರಿಸುವ ಒಂದು ವಿಶಿಷ್ಟ ಸೀರಣಿಯಾಗಿ (ಪ್ರಸಾದ) ದರ್ಗಾಗಳಿಗೆ ಹರಕೆಯಾಗಿ ಒಪ್ಪಿಸುವುದು. ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ರೋಗ ರುಜಿನ, ಆಪತ್ತುಗಳಿಂದ ಮುಕ್ತಿ ಪಡೆಯಲು ದರ್ಗಾಕ್ಕೆ ಒಪ್ಪಿಸುವ ಈ ಹರಕೆಯನ್ನು ದರ್ಗಾದ ಬಳಿ ಇರುವ ಬಡವರು, ಫಕೀರರು, ಮದ್ರಸ, ಆಸುಪಾಸಿನ ಮಕ್ಕಳು ಹಾಗೂ ಮಸೀದಿಯಲ್ಲಿರುವವರಿಗೆ ಬಡಿಸಲಾಗುತ್ತದೆ. ಇದನ್ನು ದರ್ಗಾದ ವತಿಯಿಂದ ತಯಾರಿಸಿ ಕೊಡುವ ವ್ಯವಸ್ಥೆಯೂ ಇದೆ.

ಈ) ಆಡು ನೇರ್ಚೆ

ಉಳ್ಳಾಲಕ್ಕೆ ಹರಕೆ ಸಲ್ಲಿಸುವದರಲ್ಲಿ ಆಡನ್ನು ಒಪ್ಪಿಸುವುದು ವಿಶಿಷ್ಠ ಹರಕೆಯಾಗಿದೆ. ಉಳ್ಳಾಲಕ್ಕೆ ನೇರ್ಚೆ ಬಿಟ್ಟ ಆಡುಗಳಿಗೆ ವಿಶೇಷ ಗೌರವವನ್ನು ಜನರು ನೀಡುತ್ತಿದ್ದರು. ಅಂತಹ ಆಡುಗಳಿಗೆ ಮುಕ್ತವಾಗಿ ಸಂಚರಿಸುವ ಅವಕಾಶ ಮತ್ತು ಅಲ್ಲಲ್ಲಿ ತಿಂಡಿ ತಿನಿಸುಗಳನ್ನು ನೀಡುವ ಪರಿಪಾಠವಿತ್ತು. ಒಂದೆರಡು ವರ್ಷ ಬೇರೆ ಬೇರೆ ಊರುಗಳಲ್ಲಿ ದಷ್ಟಪುಷ್ಟವಾಗಿ ಬೆಳೆದು ಉಳ್ಳಾಲದ ಉರೂಸಿನ ಸಂದರ್ಭದಲ್ಲಿ ಅಲ್ಲಿಗೆ ತುಲುಪುತ್ತಿತ್ತು. ಇಂತಹ ಆಡಿನ ದೊಡ್ಡ ಮಂದೆಯನ್ನು ಉರೂಸಿನ ವೇಳೆ ನೋಡುವುದು ಒಂದು ವಿಶೇಷ ಆಕರ್ಷಣೆ ಆಗಿತ್ತು. ಹರಕೆ ಬಿಟ್ಟ ಆಡುಗಳು ಸ್ವತಃ ತಾವಾಗಿಯೇ ಉಳ್ಳಾಲಕ್ಕೆ ಹೋಗಿ ಸೇರುವುದೆಂಬ ನಂಬಿಕೆಯೂ ಜನಮಾನಸದಲ್ಲಿದೆ. ಆಡುಕುರಿ ಹರಕೆಯ ಬಗ್ಗೆ ಬಿ. ಎಮ್. ಇಚ್ಲಂಗೋಡುರವರು 'ಹಜ್‌ಕರ್ಮದ ನಂತರ ಕೊಡುವ ಆಡು ಕುರಿಗಳ ಬಲಿಯ ಪ್ರೇರಣೆಯಿಂದ ಈ ರೀತಿ ಹರಕೆ ಸಲ್ಲಿಸುವುದು ಜಾರಿಗೆ ಬಂದಿದೆ' ಎನ್ನುತ್ತಾರೆ.

ಹೀಗೆ ಹರಕೆಯ ಆಡುಗಳನ್ನು ಉಳ್ಳಾಲ ಉರೂಸಿನ ಕೊನೆಯ ದಿನದ ಸಾರ್ವತ್ರಿಕ ಅನ್ನದಾನದ ಸಂದರ್ಭದಲ್ಲಿ ಬಳಸಿಕೊಳ್ಳುವುದು ವಾಡಿಕೆಯಾಗಿದೆ. ಆದರೆ ಇತ್ತೀಚೆಗೆ ಆಡು ನೇರ್ಚೆ ಬಿಡುವುದು, ದೂರದ ಊರಿನಿಂದ ಉಳ್ಳಾಲಕ್ಕೆ ಬಂದು ಸೇರುವುದು ಕಡಿಮೆ ಆಗಿದೆ. ಬಹುಶಃ ಮುಸ್ಲಿಮರು ಆಡು ಸಾಕಣೆಯನ್ನು ಕಡಿಮೆ ಮಾಡಿರುವುದು ಇದಕ್ಕೆ ಒಂದು ಪ್ರಬಲ ಕಾರಣವಾಗಿರಬಹುದು. ಇದೇ ರಿತಿ ಹಿಂದು ಧರ್ಮದಲ್ಲಿ ಆಡು, ಕುರಿ, ಕೋಳಿ ಹರಕೆ ಕೊಡುವ ವಾಡಿಕೆ ಇದೆ.

ಉ) ಅಜಿಲ ಮೊಗರಿನ 'ಮಾಲಿದ' ಹರಕೆ ಮತ್ತು ಮಾಲಿದಾ ಉರೂಸ್

ಉರೂಸ್ ಸಮಾರಂಭ ಕೆಲವು ಸಲ ಸಂತರು ತಂಗಿದ ಸ್ಥಳ ಅಥವಾ ವಿಶ್ರಾಂತಿ ಪಡೆಯುತ್ತಿದ್ದ ಆಸನ ಮುಂತಾದವುಗಳ ಹೆಸರಿನಲ್ಲಿಯೂ ನಡೆಯುತ್ತಿರುವುದನ್ನು ಕಾಣಬಹುದು ಮಹಾತ್ಮರು ತಂಗುತ್ತಿದ್ದ ಸ್ಥಳ, ವಿಶ್ರಾಂತರಾಗುತಿದ್ದ ಆಸನಗಳಿಗೆ ವಿಶೇಷತೆ ಕಲ್ಪಿಸಿ ಕಾಲಕ್ರಮೇಣ ಉರೂಸ್ ಸಮಾರಂಭವು ಆರಂಭವಾದುದನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಣುತ್ತೇವೆ. ಉದಾ: ಬಂಟ್ವಾಳದ ಸರಪಾಡಿ ಗ್ರಾಮದ ಅಜಿಲಮೊಗ್ರುವಿನ ಮಾಲಿದಾ ಉರೂಸು ಎಂಬುದು ಆಂಧ್ರಪ್ರದೇಶದ ಪೆನುಕೊಂಡದ ಸಂತ ಬಾಬಾ ಫಕ್ರುದ್ದೀನ್ ಅವರ ಸವಿನೆನಪಿಗೋಸ್ಕರ ನಡೆಯುತ್ತಿರುವ ಸಮಾರಂಭ. ಪೆನುಕೊಂಡದ ಈ ಸಂತ ತಮ್ಮ ಜೀವಿತ ಕಾಲದಲ್ಲಿ ಅಜಿಲ ಮುಗೇರುವಿನಲ್ಲಿ ಧಾರ್ಮಿಕ ಪ್ರಚಾರ ಕೈಗೊಂಡಿದ್ದರು ಹಾಗೂ ಅವರ ಸಮಾಧಿ ಪೆನುಕೊಂಡದಲ್ಲಿದೆ.

'ಮಾಲಿದ' ಎಂಬುದು ಅಜಿಲ ಮೊಗ್ರುವಿಗೆ ಒಪ್ಪಿಸುವ ಒಂದು ವಿಶಿಷ್ಠ ಸೀರಣಿ (ಪ್ರಸಾದ) ಹರಕೆ. ಮಾಲಿದವನ್ನು ಅಕ್ಕಿ ಕುಟ್ಟಿ ಹುಡಿ ಮಾಡಿ, ಆ ಹುಡಿಯಿಂದ ರೊಟ್ಟಿಯನ್ನು ತಯಾರಿಸಿ ನಂತರ ರೊಟ್ಟಿಯನ್ನು ತುಪ್ಪ, ಅಚ್ಚು ಬೆಲ್ಲದೊಂದಿಗೆ ಪುನಃ ಸಬಳದಲ್ಲಿ ಕುಟ್ಟಿ ತಯಾರಿಸುವ ಒಂದು ಸೀರಣಿ(ಪ್ರಸಾದ)ವಾಗಿದೆ. ಇದನ್ನು ಬಂಟ್ವಾಳ, ಬೆಳ್ತಂಗಡಿ, ಪುತ್ತೂರು, ಮಂಗಳೂರು, ಉಳ್ಳಾಲ, ವಿಟ್ಲ, ಉಪ್ಪಿನಂಗಡಿ, ಕಡಬ ಹಾಗೂ ಇನ್ನಿತರ ಪ್ರದೇಶಗಳಲ್ಲಿ ಹಿಂದಿನ ಕಾಲದಿಂದಲೂ ತಯಾರಿಸುತ್ತಾ ಬಂದಿದ್ದಾರೆ. ಅಜಿಲಮೊಗ್ರುವಿಗೆ ಹರಕೆಯಾಗಿ ತಲುಪಿಸುವ ಈ ಸೀರಣಿ ಯಾ ತಿಂಡಿ ರೂಪದ ಬೇರೆಲ್ಲೂ ತಯಾರಿಸುವುದಿಲ್ಲ. ವರ್ಷಂಪ್ರತಿ ಮುಸ್ಲಿಂ ಕ್ಯಾಲೆಂಡರ್‌ನ ಜಮಾದಿಲ್ ಆಖರ್ ತಿಂಗಳ 14ನೇ ರಾತ್ರಿಯಂದು ಅಜಿಲಮೊಗ್ರುನಲ್ಲಿ ಮಾಲಿದ ಉರೂಸ್ ನಡೆಯುತ್ತದೆ. ಆ ಸಂದರ್ಭದಲ್ಲಿ ಮಾಲಿದಾವನ್ನು ತಯಾರಿಸಿ ಕೊಡಲಾಗುವುದು. ವರ್ಷದ ಇತರ ಯಾವುದೇ ಸಮಯದಲ್ಲೂ ಇದನ್ನು ತಯಾರಿಸುವುದಿಲ್ಲ.

ಮಾಲಿದಾವನ್ನು ತಯಾರಿಸುವಾಗ ಸ್ವಚ್ಛತೆಗೆ ವಿಶೇಷ ಕಾಳಜಿ ಕೊಡಲಾಗುವುದು. ಅದನ್ನು ತಯಾರಿಸಿ ಅಜಿಲಮೊಗ್ರುವಿಗೆ ಒಪ್ಪಿಸಿ ಅಲ್ಲಿ ಪ್ರಾರ್ಥನೆ ಮಾಡಿ ಸೀರಣಿ ವಿತರಣೆಯಾಗುವವರೆಗೂ ಯಾರೂ ಅದನ್ನು ತಿನ್ನಬಾರದೆಂಬ ನಂಬಿಕೆ ಇದೆ. ಮಕ್ಕಳು ಕೈ ಹಾಕಿ ತಿನ್ನುವರು ಎಂಬ ಭಯದಿಂದ ಅವರು ನಿದ್ದೆ ಹೋದ ಮೇಲೆ ಇದನ್ನು ತಯಾರಿಸುವುದು ವಾಡಿಕೆ. ಮಾಲಿದಾ ತಯಾರಿಸುವಾಗ ಪರಸ್ಪರ ಮಾತನಾಡಿಕೊಳ್ಳುವುದಿಲ್ಲ. ದರ್ಗಾಕ್ಕೆ ಒಪ್ಪಿಸುವ ಮೊದಲು ತಿಂದ ಕಾರಣದಿಂದ ಅಪಾಯಗಳು ಸಂಭವಿಸುವ ಘಟನೆಗಳು ಜನಪದವಾಗಿ ಚಾಲ್ತಿಯಲ್ಲಿವೆ. ಆದುದರಿಂದ ಈ ಎಚ್ಚರವನ್ನು ವಹಿಸುತ್ತಾರೆ. ಈ ಹರಕೆ ಸಲ್ಲಿಸುವುದರಿಂದ ರೋಗರುಜಿನಗಳು ವಾಸಿಯಾಗುವುದು, ವಿಪತ್ತುಗಳಿಂದ ಪಾರಾಗುವುದು,

ಇಷ್ಟಾರ್ಥ ಸಿದ್ಧಿ ಪೂರ್ತಿಯಾಗುವುದು ಎಂಬ ನಂಬಿಕೆ ಜನಜನಿತವಾಗಿದೆ. ಸೈಯ್ಯದ್ ಬಾಬಾ ಫಕ್ರುದ್ದೀನ್ ಅಜಿಲಮೊಗ್ರುವಿನಲ್ಲಿ ಸ್ವಲ್ಪ ಕಾಲ ತಂಗಿ ಧರ್ಮ ಪ್ರಚಾರ ಮಾಡುತ್ತಿದ್ದಾಗ ಅವರು ಈ ಆಹಾರವನ್ನು ಸೇವಿಸುತ್ತಿದ್ದರು ಎಂಬುದು ಪ್ರತೀತಿ. ಅಂದಿನಿಂದ ಇಂದಿನವರೆಗೂ ಈ ಹರಕೆ ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚಿನೆಲ್ಲಾ ಕಡೆಯಲ್ಲೂ ಜಾರಿಯಲ್ಲಿದೆ. 5

ಮತ ಪ್ರವಚನ ಕಾರ್ಯಕ್ರಮ

ಉರೂಸ್ ಸಮಾರಂಭದ ಸಂದರ್ಭದಲ್ಲಿ ನಡೆಸುವ ಇನ್ನೊಂದು ಪ್ರಮುಖ ಕಾರ್ಯವೆಂದರೆ ಧಾರ್ಮಿಕ ಪ್ರವಚನಗಳು. ಉರೂಸ್ ಸಮಾರಂಭದ ದಿನಗಳನ್ನು ಮುಂಗಡವಾಗಿ ನಿರ್ಣಯಿಸಿದ ಕಾರ್ಯವನ್ನು ಸಂಬಂಧಿಸಿದ ಮಸೀದಿ ಕಮಿಟಿ ಅಥವಾ ದರ್ಗಾ ಕಮಿಟಿ ನೋಡಿಕೊಳ್ಳುತ್ತದೆ. ಒಮ್ಮೆ ದಿನ ನಿರ್ಣಯಿಸಿದ ನಂತರ ಅದರ ಬಗ್ಗೆ ತಯಾರಿ ದರ್ಗಾ ಹಾಗೂ ಸುತ್ತು ಮುತ್ತಲೂ ನಡೆಯುವುದು. ಅದನ್ನು ನಡೆಸಲು ಸ್ಥಳೀಯರು ಪೋಲೀಸ್ ಇಲಾಖೆಯಿಂದ ಅನುಮತಿಯನ್ನು ಪಡೆದುಕೊಳ್ಳುವರು. ನಂತರ ಪ್ರಚಾರ ಕಾರ್ಯ ಭರದಿಂದ ಸಾಗುತ್ತದೆ. ಉರೂಸ್ ಸಮಾರಂಭದ ಅಂಗವಾಗಿ ಬೇರೆ ಬೇರೆ ದರ್ಗಾಗಳಲ್ಲಿ ಸ್ಥಳೀಯ ಸಮಿತಿಯವರ ತೀರ್ಮಾನಕ್ಕನುಗುಣವಾಗಿ ಮತ ಪ್ರವಚನದ ಬಗ್ಗೆ ಭಿತ್ತಿಪತ್ರಗಳನ್ನು ಅಚ್ಚು ಹಾಕಿ, ಅದನ್ನು ದೂರದ ಊರುಗಳಿಗೆ ರವಾನಿಸುವುದು, 50ರಿಂದ 100 ಕಿ. ಮೀ. ಒಳಗೆ ವಾಹನದಲ್ಲಿ ಸಂಚರಿಸಿ ಪ್ರಚಾರ ಮಾಡುವುದು ಹಾಗೂ ಬೇರೆ ಬೇರೆ ಜುಮಾ ಮಸೀದಿಗಳಲ್ಲಿ ಶುಕ್ರವಾರದಂದು ಭಿತ್ತಿಪತ್ರ ವಿತರಣೆಯ ಮೂಲಕ ಈ ಪ್ರಚಾರ ಕಾರ್ಯಕ್ರಮ ನಡೆಯುವುದು.

ಮತ ಪ್ರವಚನ ಕಾರ್ಯಕ್ರಮ ಕೆಲವು ಹೆಸರಾಂತ ದರ್ಗಾಗಳಲ್ಲಿ 30ರಿಂದ 40 ದಿವಸದವರೆಗೂ, ಕೆಲವು ಕಡೆ 15, 10, 8 ದಿವಸ ಈ ರೀತಿಯಾಗಿ ನಡೆಯುವುದು ರೂಢಿಯಲ್ಲಿದೆ. ಇಂತಹ ಧಾರ್ಮಿಕ ಪ್ರವಚನ ಅಥವಾ ವಾಝ್ ಕಾರ್ಯಕ್ರಮ ಸಾಮಾನ್ಯವಾಗಿ ರಾತ್ರಿ ವೇಳೆಯಲ್ಲಿ ನಡೆಯುತ್ತದೆ. ಧಾರ್ಮಿಕ ಹಾಗೂ ಸಾಮಾಜಿಕ ವಿಷಯಗಳ ಬಗ್ಗೆ ಕೇರಳ ಮತ್ತು ಕರ್ನಾಟಕದ ಕರಾವಳಿ ಭಾಗದಿಂದ ಆಮಂತ್ರಿತರಾದ ಧಾರ್ಮಿಕ ಪಂಡಿತರು ಹಿಂದಿನ ಕಾಲದಲ್ಲಿ ಮತಪ್ರವಚನ ರಾತ್ರಿ 9.30ರಿಂದ 2.30ರ ವರೆಗೆ ನೀಡುವರು. ಇತ್ತೀಚೆಗೆ ಮತ ಪ್ರವಚನದ ಸಮಯದಲ್ಲಿ ಬದಲಾವಣೆ ಉಂಟಾಗಿ ರಾತ್ರಿ ಗಂಟೆ 8-00ರಿಂದ 11-00ರ ವರೆಗೆ ನಡೆಯುವುದು.

ಮತ ಪ್ರವಚನದ ಕಾರ್ಯಕ್ರಮದಲ್ಲಿ ಅಗಾಧ ಪಾಂಡಿತ್ಯ ಮತ್ತು ವಾಕ್ಚಾತುರ್ಯವಿರುವ ಉಲೇಮಾಗಳ ಪ್ರವಚನವು ಇಲ್ಲಿ ಉಲ್ಲೇಖನೀಯವಾಗಿದೆ. ಅಂತಹ ವಾಗ್ಮಿಗಳನ್ನು ಹೆಚ್ಚಾಗಿ ಆಮಂತ್ರಿಸುವುದರಿಂದ ಹೆಚ್ಚಿನ ಜನರು ಸೇರುವರು ಹಾಗೂ ಆ ಮೂಲಕ ಒಳ್ಳೆ ಆದಾಯವನ್ನು

ಗಳಿಸಬಹುದೆಂಬ ಉದ್ದೇಶವೂ ಮಸೀದಿಯ, ದರ್ಗಾ ಕಮಿಟಿಗಳಿಗಿರುತ್ತದೆ. ಉತ್ತಮ ವಾಗ್ಮಿಗಳು ನೆರೆದಿರುವ ಜನರಲ್ಲಿ, ಸ್ವರ್ಗ, ನರಕ, ದಯೆ ಮತ್ತು ಧರ್ಮ ಕಾಳಜಿಯ ಬಗ್ಗೆ ಪ್ರೇರೇಪಣೆ ನೀಡುತ್ತಾರೆ. ಕೆಲವು ಸಲ ಇಸ್ಲಾಮ್ ಧರ್ಮದ ಗತಕಾಲದ ಘಟನೆಗಳ ಬಗ್ಗೆ ತಮ್ಮ ಅದ್ಭುತ ಮಾತುಗಾರಿಕೆಯಿಂದ ನೆರೆದಿರುವವರನ್ನು ಮೂಕವಿಸ್ಮಿತರನ್ನಾಗಿಸುತ್ತಾರೆ, ಮಾತ್ರವಲ್ಲದೆ ಮನಕರಗಿ ಕಂಬನಿ ಮಿಡಿಯುವಂತೆಯೂ ಮಾಡುತ್ತಾರೆ. ಪ್ರವಚನದ ಕೊನೆಯಲ್ಲಿ ಮಸೀದಿ ಯಾ ದರ್ಗಾದ ಉರೂಸ್ ಸಮಾರಂಭಕ್ಕೆ ಆರ್ಥಿಕ ಸಹಾಯವನ್ನು ಒಟ್ಟುಗೂಡಿಸುವ ಕಾರ್ಯವಾಗುತ್ತದೆ. ಕೌಶ್ಯಲ ಭರಿತ ಉಲೇಮಾಗಳು ದೊಡ್ಡ ಮೊತ್ತದ ಹಣ, ಚಿನ್ನದ ಬಳೆ, ಕಿವಿ ಬೆಂಡೋಲೆ, ಉಂಗುರ ಮುಂತಾದವುಗಳನ್ನು ಜನರಿಂದ ದಾನದ ರೂಪದಲ್ಲಿ ಪಡೆಯುವುದು ರೂಢಿಯಲ್ಲಿತ್ತು. ಮಾತ್ರವಲ್ಲದೆ ವಸ್ತುರೂಪದಲ್ಲಿ ನೀಡಿದ ದಾನವನ್ನು ಕಾರ್ಯಕ್ರಮದ ಕೊನೆಯಲ್ಲಿ ಏಲಂ ಮಾಡುತ್ತಾರೆ. ಈ ರೀತಿ ಸಂಭಾವನೆಯಾದ ಹಣ ಉರೂಸ್ ಕಮಿಟಿಗೆ ಯಾ ದರ್ಗಾ ಕಮಿಟಿಯವರ ಅಧೀನದಲ್ಲಿರುತ್ತದೆ.

ಈ ಪ್ರವಚನ ಕಾರ್ಯಕ್ರಮವನ್ನು ಆಲಿಸಲು ಸ್ತ್ರೀಯರಿಗೆ ಪ್ರತ್ಯೇಕ ಸ್ಥಳಗಳನ್ನು ಏರ್ಪಡಿಸಲಾಗುವುದು. ದಾನಧರ್ಮಗಳನ್ನು ಹೆಂಗಸರಿಂದ ಕಲೆತು ಹಾಕಲು ಸಣ್ಣ ಮಕ್ಕಳನ್ನೂ ಅವರಲ್ಲಿಗೆ ಬಕೆಟ್‌ಗಳ ಮೂಲಕ ಕಳುಹಿಸುತ್ತಾರೆ. ಕೆಲವರು ತಮ್ಮ ಉದ್ದೇಶಗಳ ಈಡೇರಿಕೆಗೆ ಪ್ರಾರ್ಥಿಸುವಂತೆ ಹೇಳಿ ಹಣ, ವಸ್ತು ರೂಪದ ಸಾಧನಗಳು, ಬೆಲೆ ಬಾಳುವ ಸಾಧನಗಳನ್ನು ಕೊಡುತ್ತಾರೆ. ಹಣ ಸಂಭಾವನೆಯ ನಂತರ ಆಯಾಯ ದಿನದ ಪ್ರವಚನ ಪಂಡಿತರು ಎಲ್ಲರಿಗೂ ಪ್ರಾರ್ಥನೆಯನ್ನು ಮಾಡುತ್ತಾರೆ. ನೆರೆದಿರುವವರು ಅದಕ್ಕೆ "ಅಮೀನ್" ಅಥವಾ "ಅಲ್ಲಾಹವೇ ನಮ್ಮ ಪ್ರಾರ್ಥನೆಗೆ ಉತ್ತರಿಸು" ಎಂಬುವುದಾಗಿ ಪ್ರತಿಸ್ಪಂದಿಸುತ್ತಾರೆ. ಸಮಾರಂಭದ ಕೊನೆಯ ದಿನ ಈ ಪ್ರಾರ್ಥನೆ ಸುದೀರ್ಘವಾಗಿ ಬೃಹತ್ ಜನಸ್ತೋಮದಿಂದೊಡಗೂಡಿ ನಡೆಯುತ್ತದೆ. ಈ ರೀತಿಯ ಮತಪ್ರವಚನ ಕಾರ್ಯಕ್ರಮ ಈ ಕೆಳಗಿನ ರೀತಿಯಲ್ಲಿ ಪ್ರಯೋಜನಕಾರಿಯಾಗಿದೆ.

ಅ) ಇಸ್ಲಾಂ ಧರ್ಮದ ಬಗ್ಗೆ ಅರಿಯಲು ಇದೊಂದು ಅವಕಾಶ ಹಾಗೂ ವೇದಿಕೆಯಾಗಿರುತ್ತದೆ. ಆ ಮೂಲಕ ಸನ್ಮಾರ್ಗದಲ್ಲಿ ನಡೆಯಲು ಮಾರ್ಗ ದರ್ಶನ ಲಭಿಸುವ ವೇದಿಕೆಯಾಗಿದೆ.

ಆ) ಮುಸ್ಲಿಮರಿಗೆ ಸಾಮಾಜಿಕ ಜೀವನದಲ್ಲಿ ತಾವು ಪಾಲಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ತಿಳಿಹೇಳುವ ವೇದಿಕೆಯಾಗಿದೆ.

ಇ) ಇಂತಹ ಮತಪ್ರವಚನಗಳು, 'ದುವಾ' ಅಥವಾ ಪ್ರಾರ್ಥನೆಯ ಪ್ರಾಮುಖ್ಯತೆಯನ್ನು ತಿಳಿಸುತ್ತದೆ. ಸಂತರ ಸನ್ನಿಧಿಯಲ್ಲಿ ಅವರ ಮುಖಾಂತರ ಅಲ್ಲಾಹನಲ್ಲಿ ಸಹಾಯವನ್ನು ಬೇಡುವ ಅರಿವನ್ನು

ನೀಡುವುದು. ಆದರೆ ಈ ಮತಪ್ರವಚನ ಕಾರ್ಯಕ್ರಮ ದರ್ಗಾದ ಬಳಿ ಇರುವ ಮಸೀದಿಯು ನಿಗದಿ ಪಡಿಸಿದ ಸ್ಥಳದಲ್ಲಿ ನಡೆಯುವುದು ಹಾಗೂ ಇದು ಮುಸ್ಲಿಮರಿಗೆ ಮಾತ್ರ ಸೀಮಿತವಾಗಿರುವುದು. 6

ಸಾಮೂಹಿಕ ಝಿಯಾರತ್

ಉರೂಸ್‌ನ ವೇಳೆ ನಡೆಯುವ ಸಾಮೂಹಿಕ ಝಿಯಾರತ್ ಅಥವಾ ಸಂದರ್ಶನದಲ್ಲಿ ದರ್ಗಾದಲ್ಲಿ ಪ್ರಾರ್ಥನೆ ಯಾ ದುವಾ ಒಂದು ವಿಶೇಷ ಕಾರ್ಯಕ್ರಮವಾಗಿರುತ್ತದೆ. ಉರೂಸ್‌ನ ಆರಂಭದಿಂದ ಹಿಡಿದು ಅಂತ್ಯದವರೆಗೆ ಸಾಮೂಹಿಕ ಝಿಯಾರತ್ ನಡೆಯುತ್ತದೆ.

ಝಿಯಾರತ್

ದರ್ಗಾವು ಉರೂಸ್ ಸಮಾರಂಭದಲ್ಲಿ ಮಾತ್ರವಲ್ಲದೆ ಇತರ ದಿನಗಳಲ್ಲೂ ಸಾರ್ವಜನಿಕರಿಗೆ ಸಂದರ್ಶನಕ್ಕೆ ಮುಕ್ತವಾಗಿರುತ್ತದೆ. ಇಂತಹ ಸಂದರ್ಶನ ಮತ್ತು ಪ್ರಾರ್ಥನೆ ನಡೆಸುವುದನ್ನು ಝಿಯಾರತ್ ಎನ್ನುವರು. ಸಂತರ ಸಮಾಧಿಯನ್ನು ಒಬ್ಬ ಮುಸ್ಲಿಮ್ ಭೇಟಿಮಾಡಿ, ಕುರ್‌ಆನಿನ ಮೊದಲ ಅಧ್ಯಾಯವಾದ ಫಾತಿಹಾ, ಇತರ ಅಧ್ಯಾಯಗಳಾದ ಯಾಸೀನ್, ಇಕ್‌ಲಾಸ್ ಮುಂತಾದುವುಗಳನ್ನು ಪಠಣ ಮಾಡಿ ಪ್ರಾರ್ಥನೆ ಮಾಡುವುದನ್ನು ಝಿಯಾರತ್ ಎನ್ನುವರು. ಕೆಲವು ಸಂದರ್ಭಗಳಲ್ಲಿ ಸಂದರ್ಶಕನ ಪರವಾಗಿ ದರ್ಗಾದಲ್ಲಿರುವ ಮೌಲವಿ ಯಾ ಮುಅದ್ದೀನ್ (ಮುಕ್ರಿ) ಕುರ್‌ಆನ್ ಪಠಿಸಿ ಪ್ರಾರ್ಥನೆ ಮಾಡುವರು. ತದನಂತರ ಸಂದರ್ಶಕ ಕಾಣಿಕೆಯನ್ನು ದರ್ಗಾದ ಲೆಕ್ಕಿಗನಲ್ಲಿ ಅಥವಾ ದರ್ಗಾದ ಹರಕೆ ಡಬ್ಬಿಗೆ ಹಾಕುವುದು ವಾಡಿಕೆಯಲ್ಲಿದೆ.

ಈ ರೀತಿಯ ಆಚರಣೆಗಳು ದಕ್ಷಿಣ ಕನ್ನಡದ ನಾನಾ ಭಾಗಗಳಲ್ಲಿರುವ ದರ್ಗಾಗಳೆಲ್ಲಾ ಜನಪ್ರಿಯವಾಗಿವೆ. ಸಂತರ ಗೋರಿಗಳನ್ನು ಸಂದರ್ಶಿಸಲು ಸ್ತ್ರೀಯರಿಗೂ, ಮಕ್ಕಳಿಗೂ ಅವಕಾಶವಿದೆ. ಅನ್ಯ ಧರ್ಮೀಯರು ದರ್ಗಾ ಭೇಟಿ ಮಾಡುವುದಕ್ಕೆ ಯಾವುದೇ ವಿರೋಧವಿಲ್ಲ. ದರ್ಗಾದ ಮುಂದೆ ಸಾಷ್ಟಾಂಗ ಪ್ರಣಾಮ ಮಾಡುವುದು, ಹರಕೆ ಸಲ್ಲಿಸುವುದು, ಸೀರಣಿ ಸ್ವೀಕರಿಸುವುದು ಇತ್ಯಾದಿ 19ನೇ ಮತ್ತು 20ನೇ ಶತಮಾನದಲ್ಲಿ ಹಿಂದೂಗಳಲ್ಲೂ ಇರುವ ಒಂದು ಜನಪ್ರಿಯ ಆಚರಣೆಯಾಗಿದೆ. ಒಟ್ಟಿನಲ್ಲಿ ಉರೂಸ್ ಎಂಬುದು ದ.ಕ ಜಿಲ್ಲೆಯಲ್ಲಿ ಒಂದು ಜನಸಾಮಾನ್ಯ ಆಚರಣೆಯಾಗಿ, ಮುಸ್ಲಿಮರಲ್ಲಿ, ಮಾತ್ರವಲ್ಲದೆ ಹಿಂದೂ ಕ್ರಿಶ್ಚಿಯನ್‌ರಲ್ಲೂ ಜನಜನಿತವಾಗಿತ್ತು. ಇದು ಧಾರ್ಮಿಕವಾಗಿ ಆಚರಿಸಲ್ಪಡುವ ಸಮಾರಂಭವಾದರೂ ಇದರ ಸಾಮಾಜಿಕ ಆಯಾಮ ಇದನ್ನು ಒಂದು ಸಂಭ್ರಮದ ನಾಡಹಬ್ಬದ ರೂಪದಲ್ಲೂ ಕಾಣಲಾಗುತ್ತದೆ. ತಮ್ಮ ಕುಟುಂಬ ಮತ್ತು ವ್ಯಾಪಾರ, ಕೆಲಸ ಕಾರ್ಯಗಳಲ್ಲಿ ಸಮೃದ್ಧಿ ಸಿಗಲು. ನಿತ್ಯವೂ ನೇರ್ಚೆಯನ್ನು ಸಲ್ಲಿಸುತ್ತಿರುತ್ತಾರೆ. ಹಿಂದುಗಳು ಮತ್ತು ಕ್ರೈಸ್ತರೂ ದರ್ಗಾಕ್ಕೆ ಹರಕೆಗಳನ್ನು ಧಾರಾಳವಾಗಿ ಸಲ್ಲಿಸುತ್ತಾರೆ. ಈ ರೀತಿಯ ಹರಕೆ ಯಾ ನೇರ್ಚೆಗಳನ್ನು ಒಪ್ಪಿಸಿ ಸಂತರಲ್ಲಿ ಸಹಾಯ

ಬೇಡುವುದು ದ.ಕನ್ನಡದ ಹೆಚ್ಚಿನ ಮುಸ್ಲಿಮರಲ್ಲಿ ಒಂದು ಸಾಮಾನ್ಯ ಆಚರಣೆಯಾಗಿದೆ. ಈ ರೀತಿಯಾಗಿ ನೇರ್ಚೆ ಯಾ ಹರಕೆಯಿಂದ ದರ್ಗಾ ಮತ್ತು ಮಸೀದಿಗಳಿಗೆ ಉತ್ತಮ ಆದಾಯಗಳು ದೊರಕಲಾರಂಭ ವಾಯಿತು. ಆದ್ದರಿಂದ 1947ರಿಂದೀಚೆಗೆ ಅಧಿಕ ಸಂಖ್ಯೆಯಲ್ಲಿ ಉರೂಸ್ ಸಮಾರಂಭವು ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಜರಗಲಾರಂಭವಾಯಿತು.

ದರ್ಗಾ ಮತ್ತು ಸುತ್ತ ಮುತ್ತಲಿನ ಅಲಂಕಾರ

ಉರೂಸ್ ಮತ್ತು ವಾಝ್(ಮತ ಪ್ರವಚನ) ಆರಂಭಗೊಂಡು ಅಂತ್ಯದವರೆಗೂ ಮಸೀದಿ, ದರ್ಗಾ ಹಾಗೂ ಸುತ್ತುಮುತ್ತಲಿನ ಪ್ರದೇಶಗಳನ್ನು ಅಲಂಕರಿಸುವುದು ಸಂಪ್ರದಾಯವಾಗಿದೆ. ದರ್ಗಾವನ್ನು ವಿದ್ಯುತ್ ಬಲ್ಬುಗಳಿಂದ ಅಲಂಕೃತಗೊಳಿಸಲಾಗುವುದು. ಗೋರಿಯ ಮೇಲೆ ಹಸಿರು ಬಟ್ಟೆಯನ್ನು ಹೊದಿಸ ಲಾಗುವುದು. ಇಡೀ ಪ್ರದೇಶವನ್ನು ಹಸಿರು ಬಾವುಟಗಳಿಂದ ಮತ್ತು ವಿದ್ಯುತ್ ಟ್ಯೂಬ್ ಲೈಟ್‌ಗಳಿಂದ ಅಲಂಕೃತಗೊಳಿಸುವರು. ಊರಿನಲ್ಲೆಲ್ಲಾ ಆ ಸಮಯದಲ್ಲಿ ಹಬ್ಬದ ವಾತಾವರಣವಿರುವುದು. 7

ಸಂದಲ್ ಮೆರವಣಿಗೆ

ಕೆಲವು ಕಡೆ ಉರೂಸ್‌ನ ಕೊನೆಯ ದಿನದಲ್ಲಿ "ಸಂದಲ್" ಎಂಬ ಮೆರವಣಿಗೆ ನಡೆಯುತ್ತದೆ. ದರ್ಗಾಕ್ಕೆ ಸಂಬಂಧ ಪಟ್ಟ ಯಾವುದೇ ಪಳೆಯುಳಿಕೆ ಅಥವಾ ಮರದ ಮುಚ್ಚಳ ಅಥವಾ ಹಾಸಿದ ಬಟ್ಟೆ ಮುಂತಾದುವುಗಳನ್ನು ಹೊತ್ತುಕೊಂಡು ಊರಿನ ಪ್ರಮುಖ ಬೀದಿಯಲ್ಲಿ ಮೆರವಣಿಗೆ ನಡೆಸಲಾಗುತ್ತದೆ. ಇದು ಉರೂಸ್ ಸಮಾರಂಭದ ಸಾಂಕೇತಿಕ ಆಚರಣೆಯಾಗಿರುತ್ತದೆ. "ಸಂದಲ್" ಎಂಬುದು ಅರಬೀ ಪದವಾಗಿದ್ದು ಕನ್ನಡದಲ್ಲಿ ಚಂದನ ಎಂದು ಅರ್ಥವಿದೆ. ಗಂಧವನ್ನು ಅರೆದು ಕೊಡದಲ್ಲಿ ಹಾಕುವುದಕ್ಕೆ 'ಸಂದಲ್' ಎಂಬ ಹೆಸರು ಬಂದಿದೆ. ಉರೂಸ್ ಸಮಾರಂಭದ ಸಂಭ್ರಮವನ್ನು ಊರಿನಲ್ಲಿಡೀ ಹಬ್ಬುವುದು ಇದರ ಉದ್ದೇಶ. ಹಿಂದಿನ ಕಾಲದಲ್ಲಿ ಇಂತಹ ಸಂದಲ್ ಮೆರವಣಿಗೆಗಳಿಂದಲೇ ಉರೂಸ್ ಕಾರ್ಯಕ್ರಮ ನಡೆಯುತ್ತಿದೆ ಎಂಬ ಅರಿವು ಜನರಲ್ಲಿ ಉಂಟಾಗುತಿತ್ತು. ಸಂದಲ್ ಮೆರವಣಿಗೆ ಇಲ್ಲಿ ಪ್ರಚಾರ ಮಾಧ್ಯಮವಾಗಿ ಮೂಡಿ ಬಂದಿರುವುದು ಗಮನೀಯ ಅಂಶವಾಗಿದೆ.

ಉಳ್ಳಾಲದಲ್ಲಿ ನಡೆಯುವ ಉರೂಸ್ ಸಮಾರಂಭದಲ್ಲಿ ಸಂದಲ್ ವಿಶೇಷ ಆಕರ್ಷಣೆಯಾಗಿದೆ. ಉರೂಸ್‌ನ ಕೊನೆಯ ದಿನದಂದು ನಡೆಯುವ ಈ ಸಂದಲ್‌ನಲ್ಲಿ ಮರದ ಮುಚ್ಚಳ ಯಾ ದರ್ಗಾಕ್ಕೆ ಹಾಸಿದ ಬಟ್ಟೆಯನ್ನು ಊರಿನ ಸುತ್ತಲೂ ಪುಣ್ಯ ಪ್ರಾಪ್ತಿಗೋಸ್ಕರ ಮೆರವಣಿಗೆ ನಡೆಸಲಾಗುವುದು ಎಂಬ ನಂಬಿಕೆ ಇದೆ. ಪರಿಮಳ ವಸ್ತುಗಳನ್ನು ಹೊತ್ತಿಸಿ (ಅಗರ್‌ಬತ್ತಿ, ಲೋಬಾನ ಇತ್ಯಾದಿ)ದಫ್(ಜನಪದ ಪದ್ಯ) ಹಾಡಿಕೊಂಡು ನಂತರ ದರ್ಗಾ ಸಂತರ ಬಗ್ಗೆ ವಿಶೇಷತೆಯ ಗೀತೆಗಳನ್ನು ಹಾಡಿಕೊಂಡು ಮೆರವಣಿಗೆ ಸಾಗುವುದು. ಇದರಲ್ಲಿ ಊರಿನ ಹಿರಿಯ ಕಿರಿಯರು, ಹಿಂದೂ-ಮುಸ್ಲಿಮರು

ಭಾಗವಹಿಸುತ್ತಿದ್ದರು. ಹಿಂದಿನ ಕಾಲದಲ್ಲಿ ಇದು ಕೋಮು ಸೌಹಾರ್ದದ ಒಂದು ಸಂಕೇತವು ಆಗಿತ್ತು. ಈ ಮೆರವಣಿಗೆ ಉಳ್ಳಾಲ ದರ್ಗಾದಿಂದ ಹೊರಟು ಕೋಟೆಪುರವಾಗಿ ಮುಕ್ಕಚೇರಿ, ಅಝಾದ್‌ನಗರ, ತೊಕ್ಕೊಟ್ಟು, ಹರೇಕಳವಾಗಿ ಪುನಃ ದರ್ಗಾಕ್ಕೆ ಹಿಂತಿರುಗುವುದು ವಾಡಿಕೆ. ಇದರ ಪುಣ್ಯ ಊರಲ್ಲೆಲ್ಲಾ ಹರಡಿ ಶಾಂತಿ ಸುಭಿಕ್ಷೆ ಲಭಿಸುವ ಆಕಾಂಕ್ಷೆಯೂ ಇಲ್ಲಿದೆ.

20ನೇ ಶತಮಾನದ ಆದಿ ಭಾಗದಲ್ಲಿ ನಡೆಯುತ್ತಿದ್ದ ಉರೂಸ್‌ಗಳಲ್ಲಿ ಇಂತಹ ಮೆರವಣಿಗೆಯನ್ನು ದಫ್ ಎಂಬ ಮುಸ್ಲಿಮ್ ಸಂಗೀತ ಉಪಕರಣದಿಂದ ಶಬ್ದವನ್ನುಂಟುಮಾಡಿ ಹಾಡುವುದು ಮತ್ತು ಅದರೊಂದಿಗೆ ದಫ್ ಆಟವನ್ನು ಆಡುವುದು (ಕುಣಿತಕ್ಕೆ ಹೋಲಿಕೆ ಇರುವ ಆಟ), ಮುಸ್ಲಿಮ್ ಹಾಡು ಯಾ ಬೈತ್, ಕೋಲ್ ಕಳಿ ಯಾ ಕೋಲಾಟವನ್ನು ಹೋಲುವ ಆಟ ಮತ್ತು ಲಾಝಿಮ್ ಅಥವಾ ಸಣ್ಣ ಲೊಹದ ಪ್ಲೇಟ್ ಮತ್ತು ಚೈನ್‌ನಿಂದ ಉಂಟು ಮಾಡುವ ಸಂಗೀತ ಮುಂತಾದುವುಗಳು ಜನಪ್ರಿಯವಾಗಿತ್ತು. ಕತ್ತಿವರಸೆ, ಭರ್ಚಿವರಸೆ, ಬೆಂಕಿಯುಂಡೆಯೊಂದಿಗೆ ಕಸರತ್ತನ್ನು ತಾಲೀಮು ತಂಡದಿಂದ ಪ್ರದರ್ಶಿಸಲ್ಪಡುತ್ತಿತ್ತು. ಊರಿನಲ್ಲೆಲ್ಲಾ ಒಂದು ಹಬ್ಬದ ವಾತಾವರಣವಿರುತ್ತದೆ. ಮೆರವಣಿಗೆಯಲ್ಲಿ ಭಾಗವಹಿಸುವ ಜನಸ್ತೋಮ ಅಲ್ಲಾಹನ, ಪ್ರವಾದಿಯವರ ಮತ್ತು ಸಂತರ ಹೆಸರನ್ನು ಜೋರಾಗಿ ಉಚ್ಚರಿಸುತ್ತಾರೆ. 8

ಅನ್ನದಾನ

ಸಮಾರಂಭದ ಕೊನೆಯಲ್ಲಿ ರಾತೀಬ್ ಅಥವಾ ಮೌಲೂದ್ ಪಾರಾಯಣ (ಧಾರ್ಮಿಕ ಪಠಣ) ಮತ್ತು ಕುರ್‌ಆನ್ ಪಠಣವನ್ನು ಮಾಡಿ ದುವಾ ಯಾ ಪ್ರಾರ್ಥನೆ ಮಾಡಲಾಗುವುದು. ಆ ನಂತರ ಸಂತರ ಹೆಸರಿನಲ್ಲಿ ಅನ್ನ ಸಂತರ್ಪಣೆ ಅಥವಾ ಸೀರಣಿ ವಿತರಣೆ ಮಾಡುವರು.

ಅನ್ನ ಸಂತರ್ಪಣೆಯನ್ನು ಕಂದೂರಿ ಊಟ ಅಥವಾ ತುಪ್ಪ ಮತ್ತು ಬೆಳ್ತಿಗೆ ಅಕ್ಕಿಯಿಂದ ಮಾಡಿದ ನೈಚೋರು ಎನ್ನುವರು. ಸಂತರ ಸಂತೃಪ್ತಿಗೋಸ್ಕರ ನಡೆಸುವ ಅನ್ನದಾನವು ಧಾರ್ಮಿಕ ಪ್ರಾಮುಖ್ಯತೆಯುಳ್ಳ ಆಚರಣೆಯಾಗಿದೆ. ಇದು ಹಿಂದೂ ಧರ್ಮದಲ್ಲಿರುವ ಸಾರ್ವಜನಿಕ ಊಟ ಮತ್ತು ಪ್ರಸಾದ ವಿತರಣೆ ಎಂಬ ಆಚರಣೆಯೊಂದಿಗೆ ಸಾಮ್ಯತೆಯನ್ನು ಹೊಂದಿದೆ ಮಾತ್ರವಲ್ಲದೆ ಧಾರ್ಮಿಕ ಸಾಮರಸ್ಯದ ಸಂಕೇತವಾಗಿ ಪರಸ್ಪರ ಕೊಡು–ಕೊಳ್ಳುವಿಕೆಯ ಭಾಗವಾಗಿ ಇಂದಿಗೂ ನೆಲೆನಿಂತಿದೆ.

ಉಳ್ಳಾಲದಲ್ಲಿ 5 ವರ್ಷಕ್ಕೊಮ್ಮೆ ನಡೆಯುವ ಉರೂಸ್ ಸಮಾರಂಭದಲ್ಲಿ ಈಗಾಗಲೇ ವಿವರಿಸಿದ ಎಲ್ಲಾ ಆಚರಣೆಗಳು ವಿಜೃಂಭಣೆಯಲ್ಲಿ ನಡೆಯುತ್ತದೆ. ಉರೂಸ್ ಕಾರ್ಯಕ್ರಮ ಇಲ್ಲಿ 40 ದಿವಸಗಳ ಧಾರ್ಮಿಕ ಪ್ರವಚನ (ವಾಝ್) ಕಾರ್ಯಕ್ರಮದೊಂದಿಗೆ ಜರುಗುತ್ತಿದೆ. ಭಾರತದ ಬೇರೆ ಬೇರೆ

ಕಡೆಗಳಿಂದ ಜಾತಿ ಮತ ಭೇದವಿಲ್ಲದೆ ಭಕ್ತಾದಿಗಳು ತಮ್ಮ ಅಹವಾಲುಗಳ ಈಡೇರಿಕೆಗೆ ಇಲ್ಲಿನ ಸಂತರ ಸಂದರ್ಶನಕ್ಕೆ ಬರುತ್ತಾರೆ. ಮಾರ್ಚ್, ಎಪ್ರಿಲ್ ತಿಂಗಳಲ್ಲಿ ಈ ಸಮಾರಂಭ ಸಾಧಾರಣವಾಗಿ ನಡೆಯುತ್ತದೆ. ಉರೂಸ್ ಆಚರಣೆ ಮಾಡುವಾಗ ಮಂಗಳೂರು, ಕಾಸರಗೋಡು ಮತ್ತು ಜಿಲ್ಲೆಯ ಎಲ್ಲಾ ಮಸೀದಿಗಳಿಗೆ ಆಮಂತ್ರಣ ನೀಡಲಾಗುವುದು. ಕ್ರಿ.ಶ. 1978ರ ವರೆಗೆ ಈ ಉರೂಸಿಗೆ ಕಾಸರಗೋಡು ಖಾಝಿಯವರು ನೇತೃತ್ವ ವಹಿಸುತ್ತಿದ್ದರು. 1978ರ ನಂತರ ಉಳ್ಳಾಲದ ಅರೇಬಿಕ್ ಕಾಲೇಜು ಪ್ರಿನ್ಸಿಪಾಲ್ ಮತ್ತು ಉಳ್ಳಾಲ ಖಾಝಿಯಗಿರುವ ಸಯ್ಯದ್ ಅಬ್ದುಲ್ ರಹಿಮಾನ್ ಕುಂಞ್ಞಕೋಯ ತಂಗಳ್‌ರ ನೇತೃತ್ವದಲ್ಲಿ ಇದು ನಡೆಯುತ್ತದೆ.

ಧಾರ್ಮಿಕ ಪ್ರಜ್ಞೆಯನ್ನು ಮತ್ತು ಸಾಮಾಜಿಕ ಸಾಮರಸ್ಯವನ್ನು ಉಳ್ಳಾಲದ ಉರೂಸ್ ಗತಕಾಲದಿಂದಲೂ ಕಾಪಾಡಿಕೊಂಡು ಬಂದಿದೆ. ಭಾರೀ ಸಂಖ್ಯೆಯ ಜನಾಗಮನದೊಂದಿಗೆ ನಡೆಸಲಾಗುವ ಈ ಉರೂಸ್ ಕಾರ್ಯಕ್ರಮಕ್ಕೆ, ಉಳ್ಳಾಲ ಪರಿಸರದ ವಿಶಾಲವಾದ ಮರಳ ಮೈದಾನದಲ್ಲಿ ಆಶ್ರಯವಿದೆ. ಕಳೆದ 2005ರಲ್ಲಿ ನಡೆದ ಉರೂಸ್‌ನಲ್ಲಿ 10 ಲಕ್ಷಕ್ಕೂ ಹೆಚ್ಚು ಮಂದಿಗೆ ಅನ್ನದಾನ ಮಾಡಿದ ದಾಖಲೆ ಇದೆ. ಉರೂಸ್ ಸಮಾರಂಭವು ಕೇವಲ ಮುಸ್ಲಿಮರ ಆಚರಣೆಯಾಗಿರದೆ ಸ್ಥಳೀಯ ಮುಸ್ಲಿಮೇತರರನ್ನು ಆಕರ್ಷಿಸುತ್ತಾ ಬಂದಿದೆ. ಹಿಂದುಗಳು, ಕ್ರೈಸ್ತರು ಸಾಕಷ್ಟು ಸಂಖ್ಯೆಯಲ್ಲಿ ಉರೂಸ್ ಸಮಾರಂಭದಲ್ಲಿ ಭಾಗವಹಿಸುವುದನ್ನು ಇಂದಿಗೂ ಕಾಣಬಹುದು. ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ದರ್ಗಾಕ್ಕೆ ಹರಕೆ ಸಲ್ಲಿಸುವ ಸಂಪ್ರದಾಯವೂ ಬೇರೆ ಬೇರೆ ಸಮುದಾಯದ ಜನರಲ್ಲಿ ಕಂಡು ಬಂದಿದೆ. ಈ ದೃಷ್ಟಿಯಿಂದ ಉರೂಸ್ ಕೋಮು ಸೌಹಾರ್ದಕ್ಕೆ ಒಂದು ಜೀವಂತ ನಿದರ್ಶನವೇ ಹೊರತು ಕೋಮು ವೈಷಮ್ಯಕ್ಕೆ ಕಾರಣವಾದ ಪುರಾವೆಗಳು ಗಮನಕ್ಕೆ ಬರಲಿಲ್ಲ. 9

ಉರೂಸ್ ಸಮಿತಿ ಮತ್ತು ನಿಯೋಜಿತ ಕಾರ್ಯ

ಉಳ್ಳಾಲದಲ್ಲಿ ಉರೂಸು ಸಮಾರಂಭಕ್ಕೆ ಪ್ರತೀ ಬಾರಿಯೂ ಉರೂಸ್ ಸಮಿತಿಯನ್ನು ಆರಿಸಲಾಗುವುದು. ಉಳ್ಳಾಲದ ಕೇಂದ್ರ ಜುಮಾ ಮಸೀದಿ ಮತ್ತು ದರ್ಗಾ ಸಮಿತಿಯ 40 ಮಂದಿ ಸದಸ್ಯರನ್ನೊಳಗೊಂಡ, ಜಮಾಅತ್‌ನ ಇತರ ಪ್ರದೇಶಗಳಿಂದ ಒಟ್ಟು 120 ಮಂದಿಯ ಉರೂಸ್ ಸಮಿತಿ ಸದಸ್ಯರನ್ನು ಆರಿಸಲಾಗುವುದು. ಇವರಲ್ಲಿ 20 ಮಂದಿಯ ಉರೂಸ್ ಮೇಲ್ವಿಚಾರಣಾ ಸಮಿತಿಯನ್ನು ಆಯ್ಕೆಮಾಡಲಾಗುವುದು. ಅವರ ಕೈ ಕೆಳಗೆ ಈ ರೀತಿಯ ವಿವಿಧ ಉಪಸಮಿತಿಗಳನ್ನು ರಚಿಸಲಾಗುತ್ತದೆ.

1) ಶಿಸ್ತು ಪರಿಪಾಲನಾ ಸಮಿತಿ.
2) ಆಹಾರ ಸಮಿತಿ.

3) ವಿದ್ಯುತ್ ಸಾಧನಗಳ ನಿರ್ವಹಣಾ ಸಮಿತಿ

(ಮೈಕು, ಟ್ಯೂಬು, ಬಲ್ಬು, ಮಿನಿಯೇಚರ್- ಮುಂತಾದುವುಗಳು)

4) ವೇದಿಕೆ ಸಮಿತಿ.

5) ನೀರು ಪೂರೈಕೆ ಸಮಿತಿ – ಮುಂತಾದುವುಗಳು.

ಈ ಎಲ್ಲಾ ಉಪಸಮಿತಿಗಳು ತಮ್ಮ ಮೇಲ್ವಿಚಾರಕರ ಮಾರ್ಗದರ್ಶನದೊಂದಿಗೆ ನಿರಂತರ ಸೇವೆಯಲ್ಲಿ ತೊಡಗಿಸಿಕೊಂಡು ಉರೂಸಿನ ಯಶಸ್ಸಿಗೆ ಪ್ರತಿ ಬಾರಿಯೂ ಶ್ರಮಿಸುತ್ತಾರೆ. ಇವರ ಅನುಪಮ ಸೇವೆಯಿಂದ ಉರೂಸ್ ಸಂದರ್ಭದಲ್ಲಿ ಯಾತ್ರಾರ್ಥಿಗಳು ದಿನವಹಿ ಹೆಚ್ಚಾದರೂ, ಕಾರ್ಯಕ್ರಮ ಯಾವುದೇ ಅಡ್ಡಿ ಅತಂಕಗಳಿಲ್ಲದೇ ನಡೆಯುವುದು ಶ್ಲಾಘನೀಯ ಅಂಶವಾಗಿದೆ. 10

ಆಕರ ಸೂಚಿ

1. ಅಲ್-ಮಿಸ್ಬಾಹ್ ಉರೂಸ್ ಸ್ಮರಣ ಸಂಚಿಕೆ-2000, ಸಿರಾಜುಲ್ ಉಲೇಮಾ ವಿದ್ಯಾರ್ಥಿ ಸಂಘ ಎಸ್.ಎಂ.ಎ. ಕಾಲೇಜು ಉಳ್ಳಾಲ, 2000 ಪುಟ 24
2. ಅದೇ ಪುಟ 25
3. ಪ್ರೋ. ಬಿ. ಎಂ. ಇಚ್ಲಂಗೋಡು, ಸೂಫಿ ಸಂತರ ಪ್ರಭಾವ(ಅಪ್ರಕಟಿತ ಲೇಖನ) ಪುಟ 17
4. ಅದೇ ಪುಟ 18
5. ಸಾಲೆತ್ತೂರು ಅಬೂಬಕ್ಕರ್ ಫೈಝಿ, ಸಂಪಾದಕರು, 'ಮದರಂಗಿ ಮಾಸಿಕ' ದೇರಳಕಟ್ಟೆ, ಅವರೊಂದಿಗೆ ನಡೆಸಿದ ಸಂದರ್ಶನದಲ್ಲಿ ದೊರಕಿದ ಮಾಹಿತಿ (1ಜೂನ್2008)
6. ನಿಸಾರ್ ಅಹಮ್ಮದ್, ಮ್ಯಾನೇಜರ್, ನೂರಾನಿ ಯತೀಂಖಾನ ಕುಂಪಳ, ಅವರೊಂದಿಗೆ ನಡೆಸಿದ ಸಂದರ್ಶನದಲ್ಲಿ ದೊರಕಿದ ಮಾಹಿತಿ (21ಜೂನ್2008)
7. ಮುಹಿಯುದ್ದೀನ್ ಸಖಾಫಿ ಟಿ.ಎಂ, ಉರೂಸ್ ಆಚರಣೆ ಇಸ್ಲಾಂನಲ್ಲಿ, ತರ್ಬಿಯತ್ ಉಲೇಬಾ ಸಾಹಿತ್ಯ ವೇದಿಕೆ, ಕಣ್ಣೂರ್ ಮಂಗಳೂರು-2005 ಪುಟ 6-8
8. ಸಾಲೆತ್ತೂರು ಅಬೂಬಕ್ಕರ್ ಫೈಝಿ, ಸಂಪಾದಕರು, 'ಮದರಂಗಿ ಮಾಸಿಕ' ದೇರಳಕಟ್ಟೆ, ಅವರೊಂದಿಗೆ ನಡೆಸಿದ ಸಂದರ್ಶನದಲ್ಲಿ ದೊರಕಿದ ಮಾಹಿತಿ (1ಜೂನ್2008)
9. ಪ್ರೋ. ಬಿ. ಎಂ. ಇಚ್ಲಂಗೋಡು, ಸೂಫಿ ಸಂತರ ಪ್ರಭಾವ(ಅಪ್ರಕಟಿತ ಲೇಖನ) ಪುಟ 19.
10. ಹಸಿರು ಭೂಮಿ-2000, ಉರೂಸ್ ವಿಶೇಷಾಂಕ, ಅಯ್ಯೂಬ್ ಉಳ್ಳಾಲ(ಪ್ರಕಾಶಕರು)-2000 ಪುಟ 19.

ಅಧ್ಯಾಯ 4

ಧಾರ್ಮಿಕ ಸಾಮರಸ್ಯದ ಕೇಂದ್ರವಾಗಿ
ಸೈಯ್ಯದ್ ಮದನಿ ದರ್ಗಾ

ತುಳುನಾಡಿನ ಇತಿಹಾಸದಲ್ಲಿ ಧಾರ್ಮಿಕ ಸಾಮರಸ್ಯ
ರಾಣಿ ಅಬ್ಬಕ್ಕನ ಕಾಲದಲ್ಲಿ ಧಾರ್ಮಿಕ ಸಾಮರಸ್ಯ
ಆಧುನಿಕ ಕಾಲದಲ್ಲಿ ತುಳುನಾಡಿನಲ್ಲಿ ಧಾರ್ಮಿಕ ಸಾಮರಸ್ಯ
ಧಾರ್ಮಿಕ ಸಾಮರಸ್ಯಕ್ಕೆ ಉಳ್ಳಾಲ ದರ್ಗಾದ ಕೊಡುಗೆ

ಅಧ್ಯಾಯ 4

ಧಾರ್ಮಿಕ ಸಾಮರಸ್ಯದ ಕೇಂದ್ರವಾಗಿ ಸಯ್ಯದ್ ಮದನಿ ದರ್ಗಾ

ಧಾರ್ಮಿಕ ಸಾಮರಸ್ಯ ತುಳುನಾಡಿನ ಇತಿಹಾಸದಲ್ಲಿ

ತುಳುನಾಡು ಧಾರ್ಮಿಕ ಸಾಮರಸ್ಯಕ್ಕೆ ಹೆಸರಾದ ಜಿಲ್ಲೆ. ಧಾರ್ಮಿಕ ಅಸಹನೆ ಈ ಪ್ರದೇಶದಲ್ಲಿ ಇರಲಿಲ್ಲವೆನ್ನಬಹುದು. ಇಲ್ಲಿಯ ಮೂಲಭೂತ ಪೂಜಾ ಪದ್ದತಿ ಭೂತಾರಾಧನೆ ಮತ್ತು ನಾಗಾರಾಧನೆ. ವೈದಿಕ ಹಿಂದೂ ಧರ್ಮ ಸುಮಾರು 2ನೇ ಶತಮಾನದಲ್ಲೂ, ಇಸ್ಲಾಮ್ 7ನೇ ಶತಮಾನದಲ್ಲೂ ಇಲ್ಲಿಗೆ ಆಗಮಿಸಿತು. ಇಸ್ಲಾಂನ್ನು ಈ ಪ್ರದೇಶ ಶಾಂತಿಯುತವಾಗಿ ಸ್ವಾಗತಿಸಿತು. 'ಬ್ಯಾರಿಗಳು' ಎಂಬ ತುಳು ಪಂಗಡ, ಈ ನಾಡಿನ ಒಂದು ಭಾಗವಾಗಿ ಇಸ್ಲಾಮನ್ನು ಇಲ್ಲಿ ಹರಡಿದರು. ಪೋರ್ಚುಗೀಸರ ಆಗಮನದೊಂದಿಗೆ ಕ್ರೈಸ್ತರೂ ತಮ್ಮ ಮತ ಪ್ರಚಾರದೊಂದಿಗೆ ತುಳು ನಾಡಿನಲ್ಲಿ ಬಾಳಿ ಬೆಳೆದರು. ಇದರೊಂದಿಗೆ ಜೈನರು ಈ ಜಿಲ್ಲೆಯಲ್ಲಿದ್ದು, ಧಾರ್ಮಿಕ ಸಾಮರಸ್ಯದ ಪರಂಪರೆಗೆ ಈ ಎಲ್ಲಾ ಮತಧರ್ಮೀಯರ ಸಹಬಾಳ್ವೆ ನಾಂದಿ ಹಾಡಿತು.

ಸುಮಾರು 10 ರಿಂದ 12ನೇ ಶತಮಾನದಲ್ಲಿ ರಚಿತವಾದ ತುಳು ಜನಪದ ಕಾವ್ಯಗಳು ಯಾ ಪಾಡ್ದನಗಳು ಇಲ್ಲಿನ ಸಾಂಸ್ಕೃತಿಕ ಬದುಕು ಮತ್ತು ಸಾಮರಸ್ಯವನ್ನು ಸಾರುತ್ತವೆ. ತುಳು ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಅವಲೋಕಿಸಿದರೆ ಕುಂಬ್ಳೆಯ ಆಲಿ ಎಂಬವನನ್ನು ಪಾಡ್ದನಗಳಲ್ಲಿ ದೈವ ಯಾ ದೈವಿಕ ಪುರುಷನೆಂದು ವರ್ಣಿಸಲಾಗಿದೆ. ಕುಂಬ್ಳೆಯ ಆಲಿ ಚಾಮುಂಡಿ ಕ್ಷೇತ್ರದಲ್ಲಿ ದಿ। ಮೊಗ್ರಾಲ್ ಸಾಹುಕಾರ್ ಕುಂಞಿ ಪಕ್ಕಿಯವರಿಗೆ ಅವರ ಧಾರ್ಮಿಕ ಸಾಮರಸ್ಯಕ್ಕಾಗಿ ವಿಶೇಷ ಮರ್ಯಾದೆ ಮತ್ತು ಪ್ರಸಾದ ನೀಡಲಾಗುತ್ತಿತ್ತು. ಗೋಪಾಲಕೃಷ್ಣ ದೇವಸ್ಥಾನ, ಪಾರೆ ಆಲಿ ಚಾಮುಂಡಿ ಕ್ಷೇತ್ರಗಳು ಅವರನ್ನು ತುಂಬಾ ಗೌರವಿಸುತ್ತಿತ್ತು. ಈ ಆಲಿ ಚಾಮುಂಡಿ ದೈವದ ವಸ್ತ್ರಾಲಂಕಾರವೂ ಮುಸಲ್ಮಾನರದ್ದಾಗಿದೆ. ಈಗಲೂ ಆಲಿ ಚಾಮುಂಡಿ ಉತ್ಸವದಲ್ಲಿ ಹಲವಾರು ಮುಸ್ಲಿಮರು ಭಾಗವಹಿಸುತ್ತಾರೆ. ಆಲಿಯು, ಆಲಿಭೂತವಾಗಿ ತುಳುನಾಡಿನಲ್ಲಿ ಆರಾಧ್ಯ ದೈವವಾಗಿ ಮೆರೆದಿದ್ದಾನೆ.

ಉದ್ಯಾವರ ಮಾಡದಲ್ಲಿ ಪ್ರತೀ ವರ್ಷ ಮುಸ್ಲಿಮ್ ವೀರನ ಸಮಾಧಿಯೊಂದಕ್ಕೆ ಹಿಂದೂ ದೇವಾಲಯದ ಮೆರವಣಿಗೆ ಹೋಗಿ ಆತನನ್ನು ಹೊಗಳಿ ನೆನಪಿಸುವುದು ಸಾಮಾನ್ಯ ನಡವಳಿಕೆ. ಇಲ್ಲಿನ ದೇವಾಲಯದ ಉತ್ಸವದ ವಿಧಿ ವಿಧಾನಗಳ ಮೊದಲ ಹಂತಗಳಲ್ಲಿ ಪ್ರದಾನ ಪಾತ್ರವನ್ನು ಮುಸ್ಲಿಮರು

ವಹಿಸುತ್ತಾರೆ. ಉದ್ಯಾವರದ ಮಾಡ ದೇವಳದ ಉತ್ಸವ ವ್ಯಾಪಾರಿಯೊಬ್ಬನಿಂದ ವೀಳ್ಯ ಕೊಳ್ಳುವುದರಿಂದ ಆರಂಭವಾಗುತ್ತದೆ. 1

ಸುಮಾರು 11–12 ನೇ ಶತಮಾನದಲ್ಲಿ ರಚಿತವಾದ ಬಬ್ಬರ್ಯ ಪಾಡ್ದನದಲ್ಲಿ ಒಬ್ಬ ಮುಸ್ಲಿಮನನ್ನು ದೈವಿಕ ಪುರುಷನಾಗಿ ಇಲ್ಲವೇ ಮೀನುಗಾರರ ಆರಾಧ್ಯ ದೈವನಾಗಿ ಆರಾಧಿಸಲ್ಪಡುವುದು ಉಲ್ಲೇಖನೀಯ. ಬಬ್ಬರ್ಯನ ತಾಯಿ ದುಗ್ಗು ಸೆಟ್ಟಿದಿ ಎಂಬಾಕೆ ಮೊದಲು ಜೈನ ಹೆಣ್ಣಾಗಿದ್ದಳೆಂದೂ ಅವಳಿಗೆ ಸಂಬಂಧಪಟ್ಟ ಆಪತ್ತೊಂದನ್ನು ಪರಿಹರಿಸಿದ ಸುಲಿಕಲ್ಲ ಮದವ ಬ್ಯಾರಿ ಎಂಬಾತನಿಗೆ ಆಕೆಯನ್ನು ಆಕೆಯ ಸೋದರರು ತಮ್ಮ ವಾಗ್ದಾನದಂತೆ ಮದುವೆ ಮಾಡಿಕೊಟ್ಟರೆಂದು ವಿವರವಿದೆ.

ದುಗ್ಗು ಸೆಟ್ಟಿದಿಯನ್ನು ಮದವ ಬ್ಯಾರಿ ಉಳ್ಳಾಲದ ಮಸೀದಿಗೆ ಕರೆದೊಯ್ದ ವಿಚಾರ ಪಾಡ್ದನದಲ್ಲಿ ಈ ರೀತಿ ಉಕ್ತವಾಗಿದೆ "ಉಳ್ಳಾಲದ ಊರುಗು ಲೆತ್ತೊಂಡು ಪೋಯೆ ಮದವ ಬ್ಯಾರಿ. ಮನದಾನಿ ಪಳ್ಳಿಗ್ ಲೆತ್ತೊಂದು ಪೋಯೆ, ಜಮಾತ್‌ಡ ಪಂಡೊಂಡೆ, ಬೆಲಿಯ ಬೀಬಿ ಪಾತುಮ್ಮಂದ್ ಪುದರ್ ಲೆತ್ತೆರ್, ಕುಪ್ಪಾಯ ಪಾಡ್ಪಾಯೆರ್" (ಉಳ್ಳಾಲಕ್ಕೆ ಮದವ ಬ್ಯಾರಿ ಕರೆದುಕೊಂಡು ಹೋದ. ಮರುದಿವಸ ಮಸೀದಿಗೆ ಕರೆದುಕೊಂಡು ಹೋದ. ಮಸೀದಿಯ ಜಮಾಅತ್‌ನಲ್ಲಿ ವಿಷಯ ತಿಳಿಸಿದ ದೊಡ್ಡ ಬೀಬಿ ಫಾತಿಮ ಎಂದು ಹೆಸರಿಟ್ಟರು. ಕುಪ್ಪಸ ತೊಡಿಸಿದರು). ದುಗ್ಗು ಸೆಟ್ಟಿದಿಯ ಮಗನಾದ ಒಬ್ಬರ್ಯ ಯಾನೆ ಬಾವು ಬ್ಯಾರಿಯನ್ನು ಕರಾವಳಿಯ ಈ ಪ್ರದೇಶದ ಜನರು ವಿಶೇಷವಾಗಿ ಮೀನುಗಾರರು ಸಮುದ್ರದ ಭೀಭತ್ಸತೆಯಿಂದ ರಕ್ಷಣೆಕೊಡುವ ಒಬ್ಬ ದೈವಿಕ ಪುರುಷನಾಗಿ ಆರಾಧಿಸಲ್ಪಡುತ್ತಾನೆ. 2

ಪಾಡ್ದನವೊಂದರಲ್ಲಿ ಬ್ಯಾರಿಗಳು ದೇವಸ್ಥಾನದ ಹತ್ತಿರ ಬಂದಾಗ, ಹಳ್ಳಿಗರು ಅವರಲ್ಲಿ 'ನೀವು ಜಾತಿ ಬ್ಯಾರಿಗಳಾಗಿದ್ದರೆ ದೇವಸ್ಥಾನದ ಮೊಗಸಾಲೆಗೆ ಪ್ರವೇಶಿಸಿ ಬಾಗಿಲನ್ನು ಮುಟ್ಟಿ ನಿಮಗೆ ಏನು ಬೇಕಾಗಿದೆ ಎಂದು ಕೇಳಿ' ಎಂಬುದು ಮುಸ್ಲಿಮರು ಮತ್ತು ಹಿಂದೂ ಸಹೋದರರಿಂದ ಪಡೆದ ಗೌರವವೆಂದು ಬಿ.ಎ. ಸಾಲೆತ್ತೂರು ಅಭಿಪ್ರಾಯ ಪಡುತ್ತಾರೆ. 3

16 ನೇ ಶತಮಾನದ ಅತ್ತಾವರ ದೈವಂಗಳು ಎಂಬ ಪಾಡ್ದನದಲ್ಲಿ, ಉದ್ಯಾವರದ ಹಿಂದೂ ಸಹೋದರರು, ಮುಸ್ಲಿಮರ ಬಗ್ಗೆ ಗೌರವಾದರಗಳನ್ನು ತೋರ್ಪಡಿಸುತ್ತಿದ್ದರು. ಉದ್ಯಾವರ ರಥೋತ್ಸವದ ಸಮಯದಲ್ಲಿ ಅತ್ತಾವರ ದೈವಂಗಳು ಎನ್ನುವ ಭೂತ ಉದ್ಯಾವರ ಮಸೀದಿಯ ಮುಂಭಾಗದಲ್ಲಿ ನಿಂತು ಪ್ರಾಚೀನ ಮುಸ್ಲಿಮ್ ಸೇನಾಧಿಪತಿ ಮತ್ತು ಆತ ಭೂತಾರಾಧನೆಗೆ ನೀಡಿದ ಭೂಮಿಯ ಬಗ್ಗೆ ಕೃತಜ್ಞತೆ ಸಲ್ಲಿಸಿ, ಆತನನ್ನು ಹೊಗಳುವುದು ವಾಡಿಕೆ. ಇನ್ನಿತರ ಪಾಡ್ದನಗಳಾದ ಬಲೀಂದ್ರ ಪಾಡ್ದನ, ಜುಮಾದಿ ದೈವ ಪಾಡ್ದನ, ಸಿರಿ ಪಾಡ್ದನಗಳಲ್ಲಿ ತುಳು ನಾಡಿನ ಮುಸ್ಲಿಮರ ಬಗ್ಗೆ ಉಲ್ಲೇಖಗಳಿವೆ.

ಮುಲ್ಕಿಯ ಬಪ್ಪನಾಡು ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ, ಬಪ್ಪ ಬ್ಯಾರಿ ಎನ್ನುವ ವ್ಯಾಪಾರಿ ಸುಮಾರು 18 ನೇ ಶತಮಾನದ ಕೊನೆಗೆ ಜೀರ್ಣೋದ್ಧಾರ ಮಾಡಿಸಿದ್ದು ಐತಿಹ್ಯ. ದೇವಾಲಯದ ವಾರ್ಷಿಕ ಉತ್ಸವದ ವೇಳೆ ಮುಲ್ಕಿಯಲ್ಲಿರುವ ಬಪ್ಪ ಬ್ಯಾರಿಯ ಹಳೆಯ ಮನೆ ಮುಂದೆ ದುರ್ಗಾ ಪರಮೇಶ್ವರಿಯ ಮೂರ್ತಿ ನಿಲ್ಲಿಸಿ ಪ್ರಸಾದ ಅರ್ಪಿಸುವುದು ಇಂದಿಗೂ ರೂಢಿಯಲ್ಲಿದೆ.

ತುಳುನಾಡಿನ ಬಾರ್ಕೂರಿನ ಭೂತಾಳ ಪಾಂಡ್ಯನ ಕಟ್ಟು ಕಟ್ಟಳೆಯಲ್ಲಿ ಮುಸ್ಲಿಮರು ಭೂತಾಳ ಪಾಂಡ್ಯನ ಮಾನ ಮರ್ಯಾದೆಯ ಒಂದು ಅಂಗವಾಗಿದ್ದು, ಸ್ಥಳೀಯ ಫಕೀರ್ ಸಾಹೇಬರ ಕುಟುಂಬಸ್ಥರು ಇಂದಿಗೂ ಸ್ಥಳೀಯ ದೇವಸ್ಥಾನದಿಂದ ಮಾನ ಮರ್ಯಾದೆ ಸ್ವೀಕರಿಸುತ್ತಾರೆ. ಜಿಲ್ಲೆಯ ಬಸರೂರು ಎಂಬಲ್ಲಿಯೂ ಈ ರೀತಿಯ ಮಾನ ಮರ್ಯಾದೆ ಸ್ವೀಕರಿಸುವ ಕಟ್ಟು ಕಟ್ಟಳೆ ಇದೆ.

ತುಳುನಾಡಿನ ಪ್ರತಿ ಹಳ್ಳಿಯ ದೈವಸ್ಥಾನ, ಮಸೀದಿ, ದರ್ಗಾಗಳು ಹಿಂದೂ ಮುಸ್ಲಿಂ ಸಾಮರಸ್ಯದ ಕತೆಗಳನ್ನು ಸಾರುತ್ತದೆ. ಬಾರಕೂರಿನ ಮಹಾಲಿಂಗೇಶ್ವರ ದೇವಸ್ಥಾನ, ಭಾವೈಕ್ಯತೆಯ ಕೇಂದ್ರವಾಗಿತ್ತು. ಮಂಜೇಶ್ವರದ ಮಾಡ ದೇವಸ್ಥಾನ, ಪೋಕುಚ್ಚು ಬ್ಯಾರಿಯನ್ನು ನೆನಪಿಸುತ್ತದೆ. ಪುಳಿಚೊತ್ತು ಪಳ್ಳಿಯ ಎರಡು ಶೇಖರ ಸಮಾದಿಗಳಿಗೆ ಮಳೆ ಭರಿಸಲು ಮತ್ತು ಅತಿವೃಷ್ಠಿ ನಿಲ್ಲಿಸಲು ಹಿಂದುಗಳು ಮುಸ್ಲಿಮರು ಜೊತೆಯಾಗಿ ಪಂಚಕಜ್ಜಾಯದ ಹರಕೆ ಹೇಳುತ್ತಿದ್ದರು. ಪುಳಿಚೊತ್ತು ಎರಡು ಭೂತಗಳನ್ನು ಮಾಪಿಳ್ಳೆ ಚಾಮುಂಡಿ ಎಂದು ಆರಾಧಿಸಲಾಗುತ್ತದೆ. ಕಾಸರಗೋಡಿನ ಪುತ್ತಿಗೆ ಜುಮ್ಮಾ ಮಸೀದಿ ಮತ್ತು ಕಿನ್ನಿಮಾನಿ ದೇವಾಲಯವು ಅಕ್ಕಪಕ್ಕದಲ್ಲಿದ್ದು ವರ್ಷಂಪ್ರತಿ ಜರಗುವ ರಥೋತ್ಸವಕ್ಕೆ ಮಸೀದಿಯಿಂದ ಬಟ್ಟೆ ಹಾಗೂ ಅದಕ್ಕೆ ಬದಲಾಗಿ ದೇವಾಲಯದಿಂದ ಎಣ್ಣೆ ವಿನಿಮಯ ಮಾಡುತ್ತಾರೆ. 4

ಉಡುಪಿ ಕಡೆಯಾಚೆ ಕೋಟಿ ಚೆನ್ನಯರ ಗರಡಿಗಳಲ್ಲಿರುವ ಪಾಪೆಗಳನ್ನು ಮುಸ್ಲಿಂ ಮಕ್ಕಳು ಎಂದು ಕರೆಯುವ ಪ್ರತೀತಿ ಇದೆ. ಹಿಂದಿನಿಂದ ದೇವಸ್ಥಾನದ ಕೆಲಸಗಳನ್ನು ಮಾಡುವ ಮುಸ್ಲಿಮರು ಧಾರಾಳ ಸಂಖ್ಯೆಯಲ್ಲಿ ದ. ಕ. ಜಿಲ್ಲೆಯಲ್ಲಿದ್ದಾರೆ. ರಥ ಕಟ್ಟುವ ಕೆಲಸ, ದೇವರ ಪ್ರಭಾವಳಿ ಮಾಡುವುದು, ಕೆತ್ತನೆ ಕೆಲಸ, ಚಿನ್ನ ಬೆಳ್ಳಿಯ ಕೆಲಸ, ವಾದ್ಯವಾದಕರು, ದೈವಕ್ಕೆ ನುಡಿಗಟ್ಟು ಹೇಳುವವರು, ಮಂತ್ರವಾದಿಗಳೂ ಮುಸ್ಲಿಮರಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಉದಾ: ಉಡುಪಿ ಮಠಗಳ ಪರ್ಯಾಯ ಉತ್ಸವದಲ್ಲಿ ಮುಸ್ಲಿಂ ಕುಟುಂಬ ಒಂದು ಪ್ರಭಾವಳಿ ರಚಿಸುವುದು, ರಥ ಅಲಂಕರಿಸುವುದು, ಸುಡು ಮದ್ದುಗಳನ್ನು ಬಿಡುವುದು ಶತಮಾನಗಳಿಂದ ನಡೆದು ಕೊಂಡು ಬಂದ ಸಂಪ್ರದಾಯಗಳಾಗಿವೆ. ಇದೇ ರೀತಿ ಜಿಲ್ಲೆಯ ಹಲವೆಡೆ ಮುಸ್ಲಿಮರು ತಮ್ಮ ಹಿಂದೂ ಬಾಂಧವರ ಉತ್ಸವಗಳಲ್ಲಿ ಸಹಾಯ ಮಾಡುವುದು, ಭಾಗವಹಿಸುವುದು, ಈ ಮಣ್ಣಿನಲ್ಲಿ ಬೆರೆತು ಬಂದ ಸಮನ್ವಯ ಸಂಪ್ರದಾಯವಾಗಿದೆ.

ಕೆಲವು ಪ್ರಧಾನ ಭೂತಗಳು ಅಣಿಗಳನ್ನು ಕಳಚುವಾಗ ಹಾಡುವ ಒಂದು ಪದ್ಯದಲ್ಲಿ "ಮಕ್ಕಾದಿಂದ ಬರುವ ಕಪ್ಪಲ್ ಯಾ ಹಡಗಿಗೂ ಕ್ಷೇಮವಾಗಲಿ" ಎನ್ನುವ ನುಡಿ ಭಾವೈಕ್ಯವನ್ನೂ ಬಯಸುವವರಿಗೆ ಪ್ರೋತ್ಸಾಹದಾಯಕವಾಗಿದೆ. 5

ದಕ್ಷಿಣ ಕನ್ನಡದಲ್ಲಿ ಲಭ್ಯವಿರುವ ಹಲವಾರು ಶಾಸನಗಳು, ದಾಖಲೆಗಳು, ಧಾರ್ಮಿಕ ಸಾಮರಸ್ಯದ ಘಟನೆಗಳನ್ನು ಸಾರುತ್ತಿವೆ. ಧರ್ಮ ಸಾಮರಸ್ಯವನ್ನು ಕಲಕಬಲ್ಲ ಸಣ್ಣಪುಟ್ಟ ಘಟನೆಗಳು ಅಪರೂಪಕ್ಕೊಮ್ಮೆ ತುಳುನಾಡಿನಲ್ಲಿ ನಡೆದ ಉದಾಹರಣೆಗಳಿವೆ. ಆದರೆ ಅಂತಹ ಸಂದರ್ಭದಲ್ಲಿ ಅವು ಅತಿರೇಕಕ್ಕೆ ಹೋಗದಂತೆ ತಡೆದು, ಧರ್ಮ ಸಾಮರಸ್ಯವನ್ನು ಕಾಯ್ದು ಕೊಳ್ಳುವ ದಿಶೆಯಲ್ಲಿ ಆಳರಸರು ಹಾಗೂ ಇತರರು ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುತ್ತಿದ್ದರು.

ಮಂಗಳೂರಿನ ಕೋಡಿಯಾಲ್‌ನಲ್ಲಿ ದೊರೆತ ಕ್ರಿ. ಶ. 1418 ರ ಶಾಸನದ ಪ್ರಕಾರ ಮಂಗಳೂರು ರಾಜ್ಯವನ್ನಾಳುತ್ತಿದ್ದ ವಿಜಯ ನಗರದ ರಾಜ್ಯಪಾಲ ತಿಮ್ಮಣ್ಣ ಒಡೆಯನು ವಿನಾ ಕಾರಣವಾಗಿ ಮಂಗಳೂರಿನ "ಹಂಜಮಾನ ವರ್ತಕ ಸಂಘದವರ ನೆಲೆಗಳ ಮೇಲೆ ದಾಳಿ ನಡೆಸಿ, ನಾಲ್ಕೈದು ಪಳ್ಳಿ ಯಾ ಮಸೀದಿಗಳನ್ನು ಸುಟ್ಟು ನಾಶಮಾಡುತ್ತಾನೆ. ಈ ಬಗ್ಗೆ ಹಂಜಮಾನದವರು ವಿಜಯನಗರ ಅರಸನ ಮೊರೆ ಹೋದಾಗ, ಅರಸ ಒಂದನೇ ದೇವರಾಯ ತನ್ನ ಸೇನಾಧಿಪತಿ, ಸಾಮಂತರು ಮತ್ತು ಸಮಸ್ತ ಕಟ್ಟಳೆಯವರು ಕೂಡಿ, ತಿಮ್ಮಣ್ಣ ಒಡೆಯನ ದರ್ಪಕ್ಕೆ ಮುನಿಸುಗೊಂಡು, ಹಂಜಮಾನದವರಿಗೆ ಪರಿಹಾರವನ್ನೊದಗಿಸುತ್ತಾನೆ. ಜಮಾತ್ ಪಳ್ಳಿಗೆ ಎಣ್ಣೆ ಮತ್ತು ಭೂಮಿ ಕಾಣಿಕೆ ಪರಿಹಾರ ನೀಡಿ "ಮುಂದೆ ಈ ಮಸೀದಿಯನ್ನು ಯಾರಾದರೂ ಕಬಳಿಸಿದರೆ, ಆತನಿಗೆ ಕಾಶಿಗೆ ಹೋಗಿ 1000 ದನಗಳನ್ನು ಕಡಿದ ಪಾಪ ತಗಲುವುದೆಂದು" ಶಾಸನ ಬರೆಸಿದನು. ಇಲ್ಲಿ ಭೂಮಿಯ ರಕ್ಷಣೆಗೆ ಕೊಟ್ಟ ಶರ್ತ, ವಿಜಯ ನಗರದ ದೊರೆಗೆ ಇಸ್ಲಾಂ ಧರ್ಮೀಯರಲ್ಲಿದ್ದ ಗೌರವ ಭಾವನೆ ಮತ್ತು ರಾಜನ ಧರ್ಮ ಸಮನ್ವಯವನ್ನು ಎತ್ತಿ ಹಿಡಿದ ರೀತಿ ಪ್ರಭುತ್ವಕ್ಕೊಂದು ಸಾರ್ವಕಾಲಿಕ ಮಾದರಿಯಾಗಿದೆ.

ಕ್ರಿ. ಶ. 1551 ಎಪ್ರಿಲ್ 11 ನೇ ದಿನಾಂಕದಂದು ಉಲ್ಲೇಖಿಸಿದ ಕೋಟೇಶ್ವರ ಶಾಸನದಲ್ಲಿ ಜಿಲ್ಲೆಯ ಧಾರ್ಮಿಕ ಸಾಮರಸ್ಯಕ್ಕೆ ಇನ್ನೊಂದು ಉದಾಹರಣೆ ಇದೆ. ಆ ಸಮಯದಲ್ಲಿ ಬಾರಕೂರ್ ರಾಜ್ಯವನ್ನು ಏಕದಳಖಾನ್ ಅಥವಾ ಇಕ್‌ಬಾಲ್‌ಖಾನ್ ಎನ್ನುವವನು, ವಿಜಯನಗರದ ರಾಜ್ಯಪಾಲನಾಗಿ ಆಳುತ್ತಿದ್ದ. ಕೋಟೇಶ್ವರದಲ್ಲಿ ಅಂದು ನಡೆದ 'ತುಡಿಯ ಹಬ್ಬಕ್ಕೆ' ಕೋಟೇಶ್ವರ ದೇವಸ್ಥಾನದಲ್ಲಿ ಇಡೀ ತುಳುನಾಡು ಸೇರಿದ್ದು, ನೆರೆದವರ ನಡುವೆ ಉಗ್ರ ಜಾತಿಯ ಕಲಹ ನಡೆದು ಹಲವಾರು ಬ್ರಾಹ್ಮಣರು, ಶೂದ್ರರು, ದನಗಳು ಕೊಲ್ಲಲ್ಪಟ್ಟು, ದೇವಾಲಯ ಅಶುದ್ಧಿಯಾಯಿತು. ಸ್ಥಳೀಯ ಗವರ್ನರ್ ಇಕ್ಬಾಲ್ ಖಾನ್ ಒಡೆಯನು ಪೂಜಾ ಮಂದಿರದ ಶುದ್ದಿಗೆ ಕೂಡಲೇ ಕ್ರಮ ಕೈಗೊಂಡು ದೇವಾಲಯವನ್ನು ಆರಾಧನೆಗೆ

ಅರ್ಹವಾಗುವಂತೆ ಮಾಡಿದ ಘಟನೆ, ಹಿಂದೂ ದೇವಾಲಯವನ್ನು ಸುಸ್ಥಿತಿಗೆ ತರುವಲ್ಲಿ ಮುಸ್ಲಿಂ ಆಡಳಿತಗಾರನೊಬ್ಬನ ಮುತುವರ್ಜಿಯನ್ನು ವಿವರಿಸುತ್ತದೆ. 6

ಕೆಳದಿ ರಾಜ್ಯದ ಚೆನ್ನಮ್ಮಾಜಿ ದಕ್ಷಿಣ ಕನ್ನಡ ಜಿಲ್ಲೆಯ ಕಿನ್ನಿ ಕಂಬಳ ಮತ್ತು ಗಂಜೀಮಠ ಎನ್ನುವಲ್ಲಿ ಮುಸ್ಲಿಂ ಪೀರ್‌ಗಳಿಗೆ (ಸಂತರಿಗೆ) 101 ಎಕ್ರೆ ಜಮೀನು ದಾನ ನೀಡಿದ ಉಲ್ಲೇಖವಿದೆ. ದ. ಕ. ಜಿಲ್ಲೆಯ ಅಜಿಲಮೊಗೆರು ಎನ್ನುವಲ್ಲಿ ಮುಸ್ಲಿಮ್ ಸಂತರು ತಂಗಿದ್ದ ಪ್ರದೇಶದಲ್ಲಿ ಮಸೀದಿ ಕಟ್ಟಿಸಲು ವೇಣೂರಿನ ಸಾಮಂತ ಅಜಿಲರಾಜ ಭೂಮಿ ದಾನ ನೀಡಿದ್ದರು ಎಂಬುದು ಮಸೀದಿಯ ಪದಾಧಿಕಾರಿಗಳ ಅಭಿಪ್ರಾಯ.

ಕ್ರಿ. ಶ. 1342 ರಲ್ಲಿ ಮಂಜನೂರು ಯಾ ಮಂಗಳೂರಿಗೆ ಆಗಮಿಸಿದ ವಿದೇಶಿ ಪ್ರವಾಸಿಗ ಇಬ್ನು ಬತೂತ ಇಲ್ಲಿಯ ಹಿಂದೂ ಅರಸ ರಾಮ ದೈವ ಎಂಬವ ಒಬ್ಬ ಸಮರ್ಥ ಆಡಳಿತಗಾರನೆಂದೂ, ಹಿಂದೂ ಮುಸ್ಲಿಮರು ಪರಸ್ಪರ ಸಹೋದರರಂತೆ ಬಾಳುತ್ತಿದ್ದರೆಂದು ಇಲ್ಲಿಯ ಮುಸ್ಲಿಮರು ಆಡಳಿತಗಾರರಾಗಿ ಅರಸರ ಕೈಕೆಳಗೆ ಸೇವೆಗೈಯ್ಯುತ್ತಿದ್ದಾರೆಂದೂ ಉಲ್ಲೇಖಿಸಿದ್ದಾನೆ.

ಕ್ರಿ. ಶ. 1442 ರಲ್ಲಿ ಬಂದ ಪರ್ಶಿಯಾದ ರಾಯಭಾರಿ ಅಬ್ದುಲ್ ರಝಾಕ್, ಮಂಗಳೂರಿನ ಪೊಳಲಿ ರಾಜ ರಾಜೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಿ, ಪೊಳಲಿಯ ಶಿಲ್ಪಕಲೆ, ಕಲಾ ವೈಭವವನ್ನು ಶ್ಲಾಘಿಸಿದ್ದಾನೆ. ಪೋರ್ಚುಗೀಸ್ ಪ್ರವಾಸಿಗ ದುವಾರ್ತೆ ಬಾರ್ಬೊಸ ಮುಸ್ಲಿಮರ ಪೂಜಾ ಸ್ಥಳಗಳ ಬಗ್ಗೆ, ಅವರ ಗಣ್ಯ ಸ್ಥಾನಮಾನಗಳ ಬಗ್ಗೆ ಉಲ್ಲೇಖಿಸುತ್ತಾನೆ. ಪಿಯಾತ್ರೊ ಡೇಲ್ಲಾ ವೆಲ್ಲೆ ಎನ್ನುವ ಇಟಲಿಯ ಪ್ರಾವಾಸಿಗನ ಬರಹದಲ್ಲಿ ವಿಶೇಷವಾಗಿ ಉಳ್ಳಾಲದ ರಾಣಿ ಅಬ್ಬಕ್ಕನ ಕಾಲದಲ್ಲಿ ಮುಸ್ಲಿಮರ ಬಗ್ಗೆ, ಮಸೀದಿಗಳ ಬಗ್ಗೆ, ಸೇನೆಯಲ್ಲಿರುವ ಮುಸ್ಲಿಮರ ಬಗ್ಗೇಯೂ ಮಾಹಿತಿ ಇದೆ. ಕೆಳದಿ ರಾಜನ ಸೇನಾಧಿಕಾರಿ ಮೂಸಬಾಯಿ ಎಂದು ಉಲ್ಲೇಖಿಸುತ್ತಾನೆ. ಅದೇ ರೀತಿ ಚೌಟ ಬಂಗ ಅರಸರ ಸೇನೆಯಲ್ಲಿ ಮುಸ್ಲಿಮರಿದ್ದು, ಕ್ರೈಸ್ತ ಪ್ರವಾಸಿಗಳನ್ನು ಬಹಳ ಆದರದಿಂದ ಬರಮಾಡಿಕೊಳ್ಳುವ ಸೌಹಾರ್ದ ಸನ್ನಿವೇಶವನ್ನು ವಿವರಿಸುತ್ತಾನೆ. 7

ಈ ಕಾಲದಲ್ಲಿ ತುಳುನಾಡಿನ ಮುಸ್ಲಿಮರು ಅರ್ಥಿಕವಾಗಿ ಬಲಿಷ್ಟವಾಗಿದ್ದು ಗೌರವ ಮತ್ತು ಶಾಂತಿಯುತ ಜೀವ ನಡೆಸುತ್ತಿದ್ದರು. ತಮ್ಮ ಪ್ರಭಾವದಿಂದ ತುಳುವ ಅರಸರ ಕಡೆಯಿಂದ ಜಾಮಿನು ನಿಲ್ಲುವುದು, ಬಂಗ, ಇಕ್ಕೇರಿ ಅರಸರಿಗೆ ಕಪ್ಪ ಸಂದಾಯ ಮಾಡುವುದು, ಅವರ ಸೈನ್ಯದಲ್ಲಿ ಪ್ರಧಾನ ಪಾತ್ರದಲ್ಲಿದ್ದುದು, ಇವರಿಗೆ ಸಮಾಜದಲ್ಲಿದ್ದ ಉನ್ನತ ಸ್ಥಾನಮಾನವನ್ನು ಸಾರುತ್ತದೆ ಮಾತ್ರವಲ್ಲದೆ ಧರ್ಮ ಸಹಿಷ್ಣುತೆಯ ಪ್ರತೀಕವಾಗಿಯೂ ಇದನ್ನು ನಾವು ಕಲ್ಪಿಸಿಕೊಳ್ಳಬಹುದು.

ಹಿಂದೂ ಮುಸ್ಲಿಮರ ಈ ಸಹಿಷ್ಣುತೆಯಿಂದಾಗಿ ಅವರ ಉನ್ನತ ಸ್ಥಾನಮಾನ ಯಾವುದೇ ರೀತಿಯ ಅಸೂಯೆಯನ್ನುಂಟುಮಾಡದೆ, ಪರಸ್ಪರ ಕೊಡು ಕೊಳ್ಳುವಿಕೆಯನ್ನು ಅಂದಿನ ಜೀವನದ ವಿವಿಧ ಕ್ಷೇತ್ರಗಳಲ್ಲಿ ಕಾಣಬಹುದು.

ಸಾಂಸ್ಕೃತಿಕವಾಗಿ ಅರಬಿ ಮತ್ತು ತುಳು ಭಾಷೆಗಳ ಮಿಶ್ರ ಭಾಷೆಯಾಗಿ ಬ್ಯಾರಿ ಭಾಷೆಯು ಮುಸ್ಲಿಮರ ಆಡುನುಡಿಯಾದುದು. ಕೆಲವು ಪದಗಳು ತುಳು ಭಾಷೆಯಲ್ಲಿ ಸೇರಿಕೊಂಡದ್ದನ್ನು ಕಾಣುತ್ತೇವೆ. ಉದಾ :- ತುಳುವಿನ 'ಸೊಲ್ಮೆಲು' ಎಂಬುದು 'ಸಲಾಮ್' ಎಂದು ವಂದಿಸುವ ಅರಬಿ ಮೂಲದ ಶಬ್ದವಾಗಿದೆ. ಇದೇ ರೀತಿ ಇನ್ನೂ ಹಲವಾರು ತುಳು ಪದಗಳು ಬ್ಯಾರಿ ಭಾಷೆಯಲ್ಲಿ ಇರುವುದನ್ನು ಗಮನಿಸುವಾಗ ಸಾಂಸ್ಕೃತಿಕವಾಗಿ ಸಮನ್ವಯವಿದ್ದುದು ಕಂಡು ಬರುತ್ತದೆ. 8

ರಾಣಿ ಅಬ್ಬಕ್ಕನ ಕಾಲದಲ್ಲಿ ಧಾರ್ಮಿಕ ಸಾಮರಸ್ಯ

ಈ ಅಬ್ಬಕ್ಕ ರಾಣಿಯ ಸೈನ್ಯದಲ್ಲಿ ಸ್ಥಳೀಯ ಮುಸ್ಲಿಮರು ಬಹುಸಂಖ್ಯೆಯಲ್ಲಿದ್ದರು. ಮಾತ್ರವಲ್ಲದೇ ಆಕೆ ನಡೆಸಿದ ಯುದ್ಧಗಳಲ್ಲಿ ಆಕೆಗೆ ಹೆಗಲು ಕೊಟ್ಟು ವೀರಾವೇಶದಿಂದ ಹೋರಾಡಿದ್ದರು. ರಾಣಿಯನ್ನು ಆಕೆಯ ಸೀಮೆಯಲ್ಲಿದ್ದ ಮುಸ್ಲಿಮರು ಅದಮ್ಯವಾಗಿ ಪ್ರೀತಿಸುತ್ತಿದ್ದರು. ರಾಣಿ ಅಬ್ಬಕ್ಕನ ಕಾಲದಲ್ಲಿ ಅವಳ ಸೀಮೆಯಲ್ಲಿ ಮತೀಯ ಸಾಮರಸ್ಯವಿತ್ತು. ಮಾತ್ರವಲ್ಲದೇ ಅವಳ ಸೈನ್ಯದಲ್ಲಿ ಹಿಂದೂಗಳಂತೇ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿದ್ದರು. ಆಕೆಯ ಅಂಗರಕ್ಷಕರಾಗಿ ಅಕ್ಕಪಕ್ಕದಲ್ಲಿ ಒಬ್ಬ ಮುಸಲ್ಮಾನ ಹಾಗೂ ಒಬ್ಬ ಹಿಂದೂ ಸದಾ ಕಾವಲು ಇದ್ದರು. 9

ಕ್ರಿ. ಶ. 1567ರಲ್ಲಿ ಉಳ್ಳಾಲದಲ್ಲಿ ರಾಣಿ ಅಬ್ಬಕ್ಕನ ಅರಮನೆಗೆ ದಾಳಿಯಿಟ್ಟ ಪೋರ್ಚುಗೀಸರು, ಜನರಲ್ ಪಿಕ್ಸಾಟೊನ ನೇತೃತ್ವದಲ್ಲಿ ಅದನ್ನು ವಶಪಡಿಸಿಕೊಂಡರು. ಈ ಸಮಯದಲ್ಲಿ ರಾಣಿ ಅಬ್ಬಕ್ಕ ಅರಮನೆಯಿಂದ ತಪ್ಪಿಸಿಕೊಂಡು ಉಳ್ಳಾಲದ ಅಳೇಕಲ್ ಮಸೀದಿಯಲ್ಲಿ ಅಡಗಿ ಕುಳಿತಳು. ಪೋರ್ಚುಗೀಸ್ ಜನರಲ್ ಮತ್ತವನ ಸೈನಿಕರು ಗೆಲುವಿನ ಸಂತೋಷದಿಂದ ರಾತ್ರಿ ಕುಡಿದು ನರ್ತಿಸುತ್ತಿದಾಗ, ರಾಣಿ ತನ್ನ ಮುಸ್ಲಿಂ ಸೈನ್ಯದೊಂದಿಗೆ ಮರುದಾಳಿ ನಡೆಸಿ, ಜನರಲ್ ಪಿಕ್ಸಾಟೊ ಮತ್ತು ಆತನ 70 ಸೈನಿಕರನ್ನೂ ಕೊಂದಳು. ಈ ಗೆಲುವು ರಾಣಿ ಮತ್ತು ಮುಸ್ಲಿಮರಲ್ಲಿ ಆತ್ಮಸ್ಥೈರ್ಯ ನೀಡಿತು. ಇದು ಆ ಕಾಲದ ಅಂತರಾಷ್ಟ್ರೀಯ ಸುದ್ದಿಯಾಗಿತ್ತು.

ಅದೇ ರೀತಿ ಮತ್ತೊಂದು ಪೋರ್ಚುಗೀಸರ ಆಕ್ರಮಣ, ವೈಸರಾಯ್ ಅಂತೋನಿ ನೊರೋನ್ಹನ ನೇತೃತ್ವದಲ್ಲಿ ಸಜ್ಜುಗೊಂಡಾಗ, ಸುಮಾರು ಐನೂರು ಮುಸ್ಲಿಂ ಯುವಕರು ಹಠಾತ್ ದಾಳಿ ಮಾಡಿ,

ಪೋರ್ಚುಗೀಸ್ ಹಡಗುಗಳನ್ನು ಬೆಂಕಿಗಾಹುತಿ ಮಾಡಿ ಎಡ್ಮಿರಲ್ ನೊರೋನ್ಹ ಮತ್ತು 50 ಪೋರ್ಚುಗೀಸ್ ನಾವಿಕರನ್ನು ಹತ್ಯೆಗೆಯ್ಯಲಾಯಿತು.

ಕ್ರಿ ಶ 1569ರಲ್ಲಿ ಪೋರ್ಚುಗೀಸರು ರಾಣಿ ಅಬ್ಬಕ್ಕನ ಕೋಟೆಯನ್ನು ಪುಡಿಗೈದರು.ಈ ಸಂದರ್ಭದಲ್ಲಿ ರಾಣಿ ಅಬ್ಬಕ್ಕ ಪೋರ್ಚುಗೀಸರಿಗೆ ಬಲವಾದ ಪ್ರತಿರೋದ ಒಡ್ಡಿದಳು. ಉಳ್ಳಾಲದ ರಾಣಿ ಕಲ್ಲಿಕೋಟೆಯ ರಾಜ ಝಮೋರಿನ್‌ನೊಂದಿಗೆ ಮಾಡಿದ ಒಪ್ಪಂದದ ಪ್ರಕಾರ ಅವನ ದಳಪತಿಯಾದ "ಕುಟ್ಟಿಪ್ಪೋಕರ್" ರಾಣಿ ಅಬ್ಬಕ್ಕನ ಪರವಾಗಿ ಹೋರಾಡಿ ಪೋರ್ಚುಗೀಸರ ಮಂಗಳೂರು ಕೋಟೆಯನ್ನು ನಾಶಮಾಡಿದ. ಆದರೆ ಆ ಗೆಲುವಿನೊಂದಿಗೆ ಕಲ್ಲಿಕೋಟೆಗೆ ಹಿಂದಿರುಗುತ್ತಿದ್ದಾಗ ಪೋರ್ಚುಗೀಸರ ಪ್ರಬಲ ನೌಕಾಪಡೆಯೊಂದಿಗೆ ಹೋರಾಡಿ ಬಲಿಯಾದ. ಇದು ಅಬ್ಬಕ್ಕ ರಾಣಿ ಮುಸ್ಲಿಮರೊಂದಿಗೆ ಇಟ್ಟುಕೊಂಡ ಸೌಹಾರ್ದದ ಕೊಂಡಿಗೆ ಮತ್ತು ಮುಸ್ಲಿಮರು ರಾಣಿ ಪರವಾಗಿ ನಡೆಸಿದ ತ್ಯಾಗಗಳಿಗೆ ಐತಿಹಾಸಿಕ ಸಾಕ್ಷಿಯಾಗಿದೆ. 10

ಅಬ್ಬಕ್ಕ ರಾಣಿಯ ಸೈನ್ಯದಲ್ಲಿ ಸ್ಥಳೀಯ ಬ್ಯಾರಿಗಳು ಸೈನಿಕರಾಗಿ ದುಡಿಯುತ್ತಿದ್ದು, 'ಬಾವ' ಎಂಬುದು ಒಂದು ಸೇನಾ ಪದವಾಗಿತ್ತು ಎಂದು ಪ್ರೊ. ಬಿ. ಯಂ. ಇಚ್ಲಂಗೋಡು ಅಬಿಪ್ರಾಯ ಪಟ್ಟಿದ್ದಾರೆ. ಆದುದರಿಂದ 'ಬಾವ' ಎಂಬ ಪದ ಇಂದಿಗೂ ಬ್ಯಾರಿ ಸಮುದಾಯದಲ್ಲಿ ಉಳ್ಳಾಲವೂ ಸೇರಿದಂತೆ "ಎಂದ್ರೆ ಬಾವ" ಅಥವಾ "ಏನು ಮಾರಾಯ (ಮಹಾರಾಯ)" ಎಂಬಂತೆ ಜನಜನಿತವಾಗಿದೆ. ಇದು ರಾಣಿ ಅಬ್ಬಕ್ಕ ಮತ್ತು ಮುಸ್ಲಿಮರ ನಡುವೆ ಇದ್ದ ಅನ್ಯೋನ್ಯತೆಗೆ ಸಾಕ್ಷಿಯಾಗಿದೆ.11

ಆಧುನಿಕ ಕಾಲದಲ್ಲಿ ತುಳುನಾಡಿನಲ್ಲಿ ಧಾರ್ಮಿಕ ಸಾಮರಸ್ಯ

ಧಾರ್ಮಿಕ ಸಾಮರಸ್ಯ ಹಿಂದೂ-ಮುಸ್ಲಿಮರಲ್ಲಿ ಕೆಲವು ಹಬ್ಬಗಳ ಸಂದರ್ಭದಲ್ಲಿ ವ್ಯಕ್ತವಾಗಿತ್ತು. ಟಿಪ್ಪುವಿನ ಕಾಲದಲ್ಲಿ ವಿಜಯದಶಮಿ ಮತ್ತು ಮೊಹರಂಗಳನ್ನು ವಿಜೃಂಭಣೆಯಿಂದ ಎರಡು ಕೋಮಿನವರು ಆಚರಿಸುತ್ತಿದ್ದರು. ಮೊಹರಮ್ ಆಚರಿಸಲು ಮಂಗಳೂರಿನ ಅಲಾಬಿ ಕಟ್ಟೆ (ಈಗಿನ ಬೀಬಿ ಅಲಾಬಿ ರೋಡ್ ಹಳೆ ಬಂದರು ಪ್ರದೇಶ)ಪ್ರಸಿದ್ದವಾಗಿತ್ತು. ಆ ಸಂದರ್ಭದಲ್ಲಿ ಸಂಗೀತ ನೃತ್ಯ ಮೇಳಗಳು ಮಂಗಳೂರಿನ ಬಂದರಿನಿಂದ ಬೋಳೂರಿನವರೆಗೆ ನಡೆಯುತ್ತಿತ್ತು. ತುರ್ಕರು ಅಥವಾ ದಖನಿಗಳು ವಾಸಿಸುವ ತುಳುನಾಡಿನ ಉಪ್ಪಳ, ಗುರುಕಂಬಳ, ಕಾಪು, ಕಾರ್ಕಳ, ಉಡುಪಿ, ಬೈಂದೂರು, ಕುಂದಾಪುರ, ಬೆಳ್ತಂಗಡಿಯಲ್ಲಿ ಮೊಹರಮ್‌ನ್ನು ಸಡಗರದಿಂದ ಆಚರಿಸುತ್ತಿದ್ದರು.

ಸಾಂಸ್ಕೃತಿಕ ಚಟುವಟಿಕೆಗಳು, ಪಂಜಿನ ಮೆರವಣಿಗೆ, ತಾಬೂತ್ ಮೆರವಣಿಗೆಗಳನ್ನೊಳಗೊಂಡ ಮೊಹರಂನ ಆಚರಣೆಯು ತುಳುನಾಡಿನ ಉಭಯ ಕೋಮುಗಳ ಸಾಂಸ್ಕೃತಿಕ ಸಂಗಮದ ಮತ್ತು ಸೌಹಾರ್ದದ ಪ್ರತೀಕವಾಗಿತ್ತು. ದಸರಾ ಹಬ್ಬವು ಛದ್ಮ ವೇಷ, ನೃತ್ಯ, ಹುಲಿ ವೇಷ, ಸಿದ್ದಿವೇಷಗಳೊಂದಿಗೆ ತುಳುನಾಡಿನಲ್ಲಿ ಟಿಪ್ಪುವಿನ ಕಾಲದಿಂದಲೇ ಆರಂಭವಾಯಿತು. ಹಿಂದು ಮುಸ್ಲಿಮರು ಮೊಹರಂ ಹಬ್ಬವನ್ನು ಒಗ್ಗೂಡಿ ಶ್ರದ್ಧಾಭಕ್ತಿಯಿಂದ ಮತ್ತು ವಿಜೃಂಭಣೆಯಿಂದ 20ನೇ ಶತಮಾನದ ಆದಿ ಭಾಗದ ವರೇಗೂ ಆಚರಿಸುತ್ತಿದ್ದರು. ಆ ಸಮಯದಲ್ಲಿ ದಖನಿ ಮತ್ತು ಕನ್ನಡ ಹಾಡುಗಳ ರಚನೆ ಹಾಗೂ 'ಯಾ ಹುಸೇನ್ ದೂಲ' ಎಂಬ ಮೊಹರಮ್ ಹಾಡು ಈ ಹಬ್ಬವನ್ನು ದಸರಾಮಯವಾಗಿಸಿತ್ತು.

1920ರಲ್ಲಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಗುಪ್ತ ಸಭೆಯು ಮಂಗಳೂರಿನ ಬಂದರಿನಲ್ಲಿರುವ ಕಚ್ಚಿ ಮೇಮನ್ ಮಸೀದಿಯ ಖಬರ್‌ಸ್ಥಾನದಲ್ಲಿ (ರುದ್ರ ಭೂಮಿ) ಸ್ವಾತಂತ್ರ್ಯ ವೀರ ದಿ। ಕಾರ್ನಾಡ್ ಸದಾಶಿವರಾಯರ ನೇತೃತ್ವದಲ್ಲಿ ಜರಗಿತು. ಈ ಸಭೆಯಲ್ಲಿ ರಾಷ್ಟ್ರೀಯ ಶಾಲೆ 'ತಿಲಕ ವಿದ್ಯಾಲಯ'ವನ್ನು ಮಂಗಳೂರಿನಲ್ಲಿ ಪ್ರಾರಂಭಿಸಲು ನಿಶ್ಚಯಿಸಲಾಯಿತು. ಅಂದಿನ 'ಸ್ವದೇಶಾಭಿಮಾನಿ' ಪತ್ರಿಕಾ ವರದಿಯ ಪ್ರಕಾರ 'ಭಾರತದ ಬೇರೆ ಬೇರೆ ಕಡೆಗಳಲ್ಲಿ ಖಿಲಾಫತ್ ದಿವಸ ಆಚರಣೆ ನಡೆಯಿತು. ಮಂಗಳೂರಿನಲ್ಲಿಯೂ ಸಮರ್ಪಕವಾಗಿ ನಡೆಯಿತು. ಮಂಗಳೂರಿನ ಇಸ್ಲಾಮಿಕ್ ಕ್ಲಬ್ ವಠಾರದಲ್ಲಿ 2 ಸಾವಿರದಷ್ಟು ಹಿಂದು ಮುಸ್ಲಿಮರು ಕಾರ್ನಾಡ್ ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಜಮಾಯಿಸಿದ್ದರು. ಸಭೆಯಲ್ಲಿ ಮಾತನಾಡಿದ ಕೃಪಾಶಂಕರ್ ಜಿನಾಬಾಯಿ ಮತ್ತು ವಕೀಲ್ ಮಾಧವರಾಯರು ಟರ್ಕಿಯ ಖಿಲಾಪತ್‌ಗೆ ಭಂಗ ತರದಂತೆ ಠರಾವುಗಳನ್ನು ಮಂಜೂರು ಮಾಡಲಾಯಿತು. ಹಾಗೂ ಅದನ್ನು ಸಂಧಿ ಪರಿಷತ್ತು ಮತ್ತು ಬ್ರಿಟಿಷ್ ಸಾರ್ವಭೌಮರಿಗೆ ವೈಸ್‌ರಾಯ್ ಮೂಲಕ ತಿಳಿಸಲು ತಂತಿ ಬಿಡುವ ನಿರ್ಣಯ ತೆಗೆದುಕೊಳ್ಳಲಾಯಿತು. ಖಿಲಾಫತ್ ಚಳುವಳಿಯು ದ. ಕ. ಜಿಲ್ಲೆಯಲ್ಲಿಯೂ ಹಿಂದೂ ಮುಸ್ಲಿಂ ಐಕ್ಯವನ್ನು ಸಾರುವ ಮತ್ತೊಂದು ಘಟನೆಯಾಗಿದೆ. 12

1915ರಲ್ಲಿ ಮುಸ್ಲಿಂ ಸಾಹುಕಾರ ಅಬ್ದುಲ್ ರಹಿಮಾನ್ ಹಾಗೂ ಹಿಂದುಳಿದ ಜಾತಿಯ ಬಿಲ್ಲವ ಕೊರಗಪ್ಪ ಎಂಬವರು ಹಂಚಿನ ಕಾರ್ಖಾನೆಯನ್ನು ಸ್ಥಾಪಿಸಿದರು. ಹಿಂದೂ ಮುಸ್ಲಿಂ ಜಂಟಿ ಮಾಲಕತ್ವ ಅಂದಿನ ಸಾಮರಸ್ಯದ ಕುರುಹಾಗಿತ್ತು. ಅದೇ ರೀತಿ ಅಂದಿನ ಪ್ರಮುಖ ವಕೀಲರು ಸಾರಸ್ವತರು ಮತ್ತು ಅವರ ಕಕ್ಷಿದಾರರು ಮುಸಲ್ಮಾನರಾಗಿದ್ದರು. ಪ್ರಮುಖ ಕೃಷಿಕರಾದ ಬಂಟರ ಬೆಳೆಯನ್ನು ಮಾರುಕಟ್ಟೆಗೆ ತಲುಪಿಸಲು ಮುಸ್ಲಿಮ್ ವರ್ತಕರ ಸಹಾಯ ಅವಶ್ಯವಾಗಿತ್ತು. ಬಿಲ್ಲವರು ಮುಸ್ಲಿಮರ ಪರಮ ಮಿತ್ರರಾಗಿದ್ದು ಕೆಲವು ಕಡೆ ಕೃಷಿ ಭೂಮಿಯನ್ನು ಹೊಂದಿದ್ದ ಮುಸ್ಲಿಮರಿಗೆ ಬಿಲ್ಲವರೇ ನೆಚ್ಚಿನ ಒಕ್ಕಲುಗಳಾಗಿದ್ದರು. ಮೊಗವೀರರು ಮೀನುಗಾರಿಕೆಯಲ್ಲಿ ಮುಸ್ಲಿಮರ ಒಡನಾಡಿಗಳಾಗಿ, ವ್ಯಾಪಾರಿಗಳಾಗಿ ಅನ್ಯೋನ್ಯವಾಗಿದ್ದರು. ಈ ಒಡನಾಟದಿಂದಾಗಿ ಪುಸಲಾರ್ ಅಥವಾ ಪುದಿಯ+ಇಸ್ಲಾಮ್ ಎಂಬ

ಇಸ್ಲಾಮಿಗೆ ಮತಾಂತರವಾದವರೂ ಕಾಸರಗೋಡು ಭಾಗದಲ್ಲಿ ಇದ್ದರು. ಅದೇ ರೀತಿ ಉಳ್ಳಾಲದಲ್ಲೂ ಮೊಗವೀರರು ಮತ್ತು ಮುಸ್ಲಿಮರು ಅನ್ಯೋನ್ಯತೆಯಿಂದ ಅಬ್ಬಕ್ಕನ ಕಾಲದಿಂದಲೇ ಇದ್ದರು. ದುಬಾರಿ ಮದುವೆಗಳನ್ನು ನಡೆಸುತ್ತಿದ್ದ ಮುಸ್ಲಿಮರಿಗೆ ಚಿನಿವಾರರು (ವಿಶ್ವಕರ್ಮ ಜನಾಂಗ) ಅಚ್ಚುಮೆಚ್ಚಿನ ಮಿತ್ರರು. ಹರಿಜನ ಕೇರಿಗಳು ಮುಸ್ಲಿಂ ಬಾಹುಳ್ಯವಿರುವ ಸ್ಥಳಗಳಲ್ಲಿದ್ದು, ಅಸ್ಪೃಶ್ಯತಾ ಮನೋಭಾವ ಮುಸ್ಲಿಮರಲ್ಲಿ ಇರಲಿಲ್ಲ. ಕ್ರೈಸ್ತ ಮಹಿಳೆಯರು ಹೂ ತರಕಾರಿ ಮಾರುತ್ತಿದ್ದರಿಂದ, ಮುಸ್ಲಿಂ ಸ್ತ್ರೀಯರು ಅವರ ಗೆಳತಿಯರಾಗಿದ್ದರು. ನಿಮ್ನ ವರ್ಗದವರಿಗೆ ಮುಸ್ಲಿಮ್ ಮನೆಗಳಲ್ಲಿ ಮುಕ್ತ ಪ್ರವೇಶವಿತ್ತು. ಸಾಮಾಜಿಕವಾಗಿ ಸೌಹಾರ್ಧದ ಕೊಂಡಿಯನ್ನು ನಾವು ಈ ಮೇಲಿನ ಎಲ್ಲಾ ಅಂಶಗಳಲ್ಲೂ ಕಾಣಬಹುದು.

ಕ್ರಿ. ಶ. 1940 ರ ದಶಕದಿಂದೀಚೆಗೆ ಜೈನರ ಹತೋಟಿಯಲ್ಲಿರುವ ಧರ್ಮಸ್ಥಳದ ಮಂಜುನಾಥನ ಸನ್ನಿಧಿಯು ವರ್ಷಂಪ್ರತಿ ಸರ್ವಧರ್ಮ ಸಮ್ಮೇಳನದೊಂದಿಗೆ ವಿವಿಧ ಧರ್ಮಗಳ ಬಾಂಧವ್ಯವನ್ನು ಬೆಸೆಯುವ ಕೇಂದ್ರವಾಗಿದೆ. ಅಂದಿನ ಧರ್ಮಾಧಿಕಾರಿ ಶ್ರೀ ಮಂಜಯ್ಯ ಹೆಗ್ಗಡೆಯವರು ವರ್ಷಕ್ಕೊಮ್ಮೆ ನಡೆಯುವ ಲಕ್ಷದೀಪೋತ್ಸವದಲ್ಲಿ ಸರ್ವಧರ್ಮ ಸಮ್ಮೇಳನವನ್ನು ಆರಂಭಿಸಿದರು. ತುಳುನಾಡಿನ ಸಾಮರಸ್ಯಕ್ಕೆ ಮತ್ತು ಐಕ್ಯತೆಗೆ ಅನನ್ಯ ಕೊಡುಗೆಯನ್ನು ನೀಡಿದ ಮಂಜಯ್ಯ ಹೆಗ್ಗಡೆಯವರು ಅಪ್ಪಟ ಗಾಂಧಿವಾದಿಯಾಗಿದ್ದರು. ಹಲವಾರು ಬಡ ಮುಸ್ಲಿಮರಿಗೆ, ಮಸೀದಿಗಳಿಗೆ ಆರ್ಥಿಕ ಸಹಾಯ ನೀಡಿದರು. ಹಳೇ ತಲೆಮಾರಿನ ಮುಸ್ಲಿಮರು ಇಂದಿಗೂ ದಿವಂಗತ ಮಂಜಯ್ಯ ಹೆಗ್ಗಡೆಯವರನ್ನು ಅವರ ಹೃದಯ ವೈಶಾಲ್ಯಕ್ಕಾಗಿ ನೆನೆಯುತ್ತಾರೆ.

ಕುಂದಾಪುರದ ಕರಾವಳಿಯಲ್ಲಿ ಮೀನು ಕ್ಷಾಮ ತಲೆದೋರಿದರೆ ಮೀನುಗಾರರು ಇಂದಿಗೂ 'ಸೀರಣಿ ಪೂಜೆ' ಎನ್ನುವ ಆರಾಧನೆಯನ್ನು ನಡೆಸುತ್ತಾರೆ. ಮುಸ್ಲಿಮ್ ಮೌಲ್ವಿಯೊಬ್ಬರಿಂದ, ಪಂಚ ಕಜ್ಜಾಯವನ್ನು ತುಂಬಿದ ಪುಟ್ಟ ಮರದ ದೋಣಿಗೆ ಪ್ರಾರ್ಥನೆ ಸಲ್ಲಿಸಿ ದೋಣಿಯನ್ನು ಸಮುದ್ರಕ್ಕೆ ತೇಲಿಬಿಡುವುದೇ ಈ ಸೀರನಿ ಪೂಜೆ. ತುಳುನಾಡಿನ ನೂರಾರು ದರ್ಗಾಗಳಲ್ಲಿ ದೊಡ್ಡ ಸಂಖ್ಯೆಯ ಮುಸ್ಲಿಮೇತರರು ಭಕ್ತರಾಗಿ, ಆರಾಧಕರಾಗಿ ಇಂದಿಗೂ ಸಂದರ್ಶನ ನೀಡುತ್ತಾರೆ. ಕಾಸರಗೋಡಿನ ಪೈಕದ 'ಮಣವಾಟ್ಟಿ ಬೀಬಿ' ದರ್ಗಾ, ಬಂದಿಯೋಡಿನ ದರ್ಗಾಗಳಿಗೂ ತನ್ನದೇ ಆದ ಸಾಮರಸ್ಯದ ಐತಿಹ್ಯಗಳಿವೆ. 13

ಅದೇ ರೀತಿ ಉಳ್ಳಾಲದ ಸಂತ ಸೆಯ್ಯದ್ ಮಹಮ್ಮದ್ ಶರೀಫುಲ್ ಮದನಿ ದರ್ಗಾಕ್ಕೆ ಊರ ಪರವೂರ ಹಿಂದೂ, ಮುಸ್ಲಿಂ, ಕ್ರೈಸ್ತ ಭಕ್ತರು ಸಂದರ್ಶನ ನೀಡುತ್ತಿದ್ದಾರೆ. ಐದು ವರ್ಷಗಳಿಗೊಮ್ಮೆ ನಡೆಯುವ ಉರೂಸ್ ಕಾರ್ಯಕ್ರಮವಂತೂ ಅದ್ದೂರಿಯಿಂದ ಜಾತಿ ಮತ ಭೇದವಿಲ್ಲದೆ ಸಾಗುತ್ತದೆ.

ಸಾಮರಸ್ಯಕ್ಕೆ ಉಳ್ಳಾಲ ದರ್ಗಾದ ಕೊಡುಗೆ

ಹಿಂದಿನ ಕಾಲದಲ್ಲಿ ಹಬ್ಬ ಹರಿದಿನಗಳ ಒಂದು ಸಂದರ್ಭವಾದ ಹೊಸಅಕ್ಕಿ ದಿವಸದ ಆಚರಣೆಯಂದು ಹಿಂದೂ ಬಾಂಧವರು ಸಂತರ ಮೇಲಿನ ಆದರದಿಂದ ದರ್ಗಾಕ್ಕೆ ಹರಕೆ ರೂಪದಲ್ಲಿ ಅಕ್ಕಿ ಹಾಗೂ ಇತರ ವಸ್ತುರೂಪದ ಕಾಣಿಕೆಗಳನ್ನು ಸಂದಾಯ ಮಾಡುತ್ತಿದ್ದರು. ಆನಂದಾಶ್ರಮ ಹೈಸ್ಕೂಲಿನ ಕೆ. ಪಿ. ಚಂದ್ರ, ಭಾರತ್ ಹೈಸ್ಕೂಲಿನ ವಾಸುದೇವರಾವ್, ಭಾಸ್ಕರ್ ಹಾಗೂ ಈಶ್ವರ್ ಉಳ್ಳಾಲ ಇವರುಗಳ ಅನಿಸಿಕೆಯಂತೆ ಇದು ಹಿಂದೂ ಮುಸ್ಲಿಂ ಸಾಮರಸ್ಯದ ಕೇಂದ್ರವಾಗಿದ್ದು, ದರ್ಗಾಕ್ಕೆ ಹಿಂದೂಗಳು ತಮ್ಮ ಗೌರವಾದರಗಳನ್ನು ನೀಡಿ ಕಾಣಿಕೆ ಸಲ್ಲಿಸುವ ಪ್ರತೀತಿ ಹಿಂದಿನಿಂದಲೂ ಬಂದಿದೆ.

ಹರಕೆಯ ರೂಪದಲ್ಲಿ ದೂರದೂರದ ಪ್ರದೇಶದಿಂದಲೂ ಹಿಂದೂ, ಕ್ರಿಶ್ಚಿಯನ್ ಸಮುದಾಯದವರ ಕಾಣಿಕೆಗಳು ಬರುತ್ತದೆ. ಕಳೆದ ಉರೂಸಿನ ಸಂದರ್ಭದಲ್ಲಿ ರಾಜಕೀಯ ನೇತಾರ ಶ್ರೀ ಜನಾರ್ಧನ ಪೂಜಾರಿಯವರು 1000 ಮುಡಿ ಅಕ್ಕಿ ಕಾಣಿಕೆಯಾಗಿ ಕೊಟ್ಟಿರುವುದು ದರ್ಗಾದ ಸಂತರ ಮೇಲಿನ ಗೌರವಾದರಗಳನ್ನು ಸೂಚಿಸುತ್ತದೆ. ಉರೂಸ್ ಸಂದರ್ಭದಲ್ಲಿ ಅಲ್ಲದೆ ಇತರ ಸಮಯದಲ್ಲೂ ಇಲ್ಲಿಗೆ ಕಾಣಿಕೆ ಬರುವುದು ವಾಡಿಕೆಯಾಗಿದೆ. ದರ್ಗಾಕ್ಕೆ ಇಲ್ಲಿನ ಪ್ರಮುಖ ಕೆಳವರ್ಗದ ಮೊಗವೀರರು ಗೌರವಾಧರ ಸಲ್ಲಿಸಲು ಭೇಟಿ ನೀಡುತ್ತಾರೆ. 14

ಸಂದಲ್ ಮೆರವಣಿಗೆಯಲ್ಲಿ ಹಿಂದೆ ಕಾಣಿಸುತ್ತಿದ್ದ ಕೋಳ್‌ಕಳಿ (ಕೋಲಾಟ) ಮತ್ತು ತಾಲೀಮು ಪ್ರದರ್ಶನ ಇವುಗಳು ಹಿಂದೂ ಮೂಲದಿಂದ ಬಂದವುಗಳು. ಕೋಲಾಟ ಹಿಂದೂಗಳ ಬೇರೆ ಬೇರೆ ಸಮಾರಂಭ, ವಾರ್ಷಿಕೋತ್ಸವಗಳಲ್ಲಿ ಪ್ರದರ್ಶಿಸಲ್ಪಡುತ್ತಿತ್ತು. ಅದೇ ರೀತಿ ತಾಲೀಮು ಪ್ರದರ್ಶನ ಕೂಡಾ ದಸರಾ ಉತ್ಸವದಲ್ಲಿ ಉತ್ಸಾಹಭರಿತವಾಗಿ ಪ್ರದರ್ಶಿಸಲ್ಪಡುತ್ತಿದ್ದ ಒಂದು ದೈಹಿಕ ಕಸರತ್ತು ಮತ್ತು ಯುಕ್ತಿಪೂರ್ವಕವಾದ ಕೈ ಚಳಕ. ಈ ಅಂಶವನ್ನು ಗಮನಿಸುವಾಗ ಪರಸ್ಪರ ಧಾರ್ಮಿಕ ಸೌಹಾರ್ದಯುತವಾದ ಜೀವನ, ವಾತಾವರಣದಿಂದ ಇಂತಹ ಮನೋರಂಜನಾ ಕ್ರೀಡೆಗಳು ಉಭಯ ಧರ್ಮದ ಅನುಯಾಯಿಗಳಲ್ಲಿ ಕರಗತವಾಗಿದ್ದುದು ಗಮನೀಯವಾಗಿದೆ. ಉಳ್ಳಾಲದ ಸಂದಲ್‌ಗಲ್ಲಿ ಈ ಸೌಹಾರ್ಧಯುತ ಮನೋರಂಜನಾ ಕ್ರೀಡೆಗಳು ವಾಡಿಕೆಯಲ್ಲಿತ್ತು.

ಉರೂಸು ಆಚರಣೆಯ ಸಂದರ್ಭದಲ್ಲಿ ಕಾಣುವ ಸಂಗೀತ, ಸಿಡಿಮದ್ದು, ಹೂವಿನ ಅಲಂಕಾರ, ಮೆರವಣಿಗೆ ಇವುಗಳು ಕೂಡಾ ಹಿಂದೂ ಮುಸ್ಲಿಂ ಭಾವೈಕ್ಯದ ಸಂಕೇತವಾಗಿ ಮೂಡಿ ಬಂದ ಆಚರಣೆಗಳಾಗಿವೆ. ಸಂದಲ್ ಮೆರವಣಿಗೆಯಲ್ಲಿ ಹಿಂದಿನ ಕಾಲದಲ್ಲಿ ಈ ರೀತಿಯ ಮನೋರಂಜನೆಗಳಲ್ಲಿ ತಾಲೀಮು ಪ್ರದರ್ಶನದಲ್ಲಿ, ಮೆರವಣಿಗೆಯಲ್ಲಿ ಉಭಯ ಧರ್ಮೀಯರು ಭಾಗವಹಿಸುತ್ತಿದ್ದುದು ಕೋಮು

ಸೌಹಾರ್ದದ ಸಂಕೇತವಾಗಿರುತ್ತದೆ. ಆ ನೆಲೆಯಲ್ಲಿ ಉರೂಸ್ ಹಿಂದಿನ ಕಾಲದಲ್ಲಿ ನಾಡಹಬ್ಬದ ಮಾದರಿಯಲ್ಲೇ ನಡೆಯುತ್ತಿತ್ತು.

ದರ್ಗಾದಲ್ಲಿ ಲಭಿಸುವ ಹಾಗೂ ಇನ್ನಿತರ ಆರ್ಥಿಕ ಆದಾಯದ ಆಯ-ವ್ಯಯಗಳ ಬಗ್ಗೆ ಲೆಕ್ಕ ಪರಿಬೋಧಕವನ್ನಾಗಿ ಒಬ್ಬ ಬ್ರಾಹ್ಮಣ ಕ್ಲಾರ್ಕ್‌ನನ್ನು ದರ್ಗಾದ ವತಿಯಿಂದ ನೇಮಿಸಲಾಗಿತ್ತು. ಲೆಕ್ಕಿಗ ನೀಡಿದ ಆಯ ವ್ಯಯ ಪಟ್ಟಿಯನ್ನು ಜಮಾತ್ ಸಮಿತಿ ಸದಸ್ಯರು ಸರ್ವಾನುಮತದಿಂದ ಅನುಮೋದಿಸುತ್ತಿದ್ದರು. ಇದು ದರ್ಗಾದ ವತಿಯಿಂದ ಧಾರ್ಮಿಕ ಸಾಮರಸ್ಯವನ್ನು ಎತ್ತಿ ಹಿಡಿಯುವ ಮತ್ತೊಂದು ಉದಾಹರಣೆಯಾಗಿದೆ. 15

ದರ್ಗಾಕ್ಕೆ ನೀಡುತ್ತಿದ್ದ ಹಿಂದೂಗಳ ಹರಕೆ ಮತ್ತು ಮುಸ್ಲಿಮರ ನೇರ್ಚೆಗಳಿಗೂ ಸಾಮ್ಯತೆ ಇರುವುದನ್ನು ನಾವು ಕಾಣುತ್ತೇವೆ. ಬೇರೆ ಬೇರೆ ರೀತಿಯ ಹರಕೆಗಳಾದಂತಹ ಮನುಷ್ಯ ರೂಪದ ಹರಕೆ, ಆಡು, ಕುರಿ, ಕೋಳಿ ಕೊಡುವಂತಹ ಹರಕೆ, ಸಂದಲ್‌ನಲ್ಲಿ ಉಪಯೋಗಿಸುತ್ತಿದ್ದ ಚಂದನದ ಕೊರಡು, ಮುಂತಾದವುಗಳನ್ನು ಎರಡೂ ಧರ್ಮದ ಧಾರ್ಮಿಕ ಕೇಂದ್ರಗಳಿಗೆ ಸಲ್ಲಿಸುವುದನ್ನು ಗಮನಿಸುವಾಗ ಪರಸ್ಪರ ಸೌಹಾರ್ದಮಯ ಜೀವನದ ಅಂಶವನ್ನೂ ಇದು ಪ್ರತಿಬಿಂಬಿಸುತ್ತದೆ. ಎರಡೂ ಕೇಂದ್ರಗಳಿಗೂ ಉಭಯ ಧರ್ಮಿಯರು ಈ ರೀತಿಯ ಹರಕೆಯನ್ನು ನೀಡುವುದು ಜಿಲ್ಲೆಯಲ್ಲಿ ಸಾಮಾನ್ಯ ಅಂಶವಾಗಿತ್ತು. ಉಳ್ಳಾಲದಲ್ಲೂ ಈ ಸೌಹಾರ್ದತೆ ಅಂದಿನಿಂದ ಇಂದಿನವರೆಗೂ ಸ್ಫುಟಗೊಂಡಿದೆ.

ಬಿ. ಎಂ. ಇಚ್ಲಂಗೋಡ್‌ರವರ ಪ್ರಕಾರ ಮನುಷ್ಯರೂಪದ ಕೈ, ಕಾಲು ಮುಂತಾದ ಹರಕೆ ಭಾರತೀಯ ಮೂಲದಿಂದ ಬಂದಂತಹ ಸಂಪ್ರದಾಯ. ಅವು ಎರಡೂ ಧರ್ಮದ ಅನುಯಾಯಿಗಳಲ್ಲೂ ಪ್ರೋತ್ಸಾಹದಾಯಕವಾಗಿ ಜಾರಿಯಲ್ಲಿತ್ತು. ಉರೂಸ್ ಸಂದರ್ಭದಲ್ಲಿ ಹಿಂದೂಗಳು ಭಾಗವಹಿಸುತ್ತಿದ್ದರು. ಸಂದಲ್ ಮೆರವಣಿಗೆಯ ಉದ್ದೇಶದಲ್ಲೇ ಧಾರ್ಮಿಕ ಸಾಮರಸ್ಯದ ಅಂಶವನ್ನು ಕಾಣಬಹುದು. ಉಳ್ಳಾಲದ ಸುತ್ತಮುತ್ತ ಚಲಿಸುವ ಕಾರ್ಯಕ್ರಮ ಉಳ್ಳಾಲದಲ್ಲಿ ಸಂತರ ಪುಣ್ಯಫಲ ನೆಲೆ ನಿಲ್ಲಲಿ, ಊರಲ್ಲಿ ಶಾಂತಿ, ಸುಭಿಕ್ಷೆ, ಸೌಹಾರ್ಧ ನೆಲೆಯಾಗಿರಲಿ ಎಂದಾಗಿದೆ.

ದರ್ಗಾಕ್ಕೆ ದೂರದ ಪ್ರದೇಶದಿಂದಲೂ ಅನ್ಯಮತೀಯರು ಆಗಮಿಸುತ್ತಿದ್ದರು. ಕೇರಳದ ಒಬ್ಬ ಕ್ರಿಶ್ಚಿಯನ್ ಜ್ಯೋತಿಷಿ ಇಲ್ಲಿ ಬಂದು ದರ್ಗಾ ಸಂದರ್ಶನ ನೀಡಿ ಹರಕೆ ಸಲ್ಲಿಸುತ್ತಿದ್ದುದು ವಾಡಿಕೆಯಾಗಿತ್ತು. ಆ ಜ್ಯೋತಿಷಿ ಒಮ್ಮೆ ಕೇರಳದ ಖ್ಯಾತ ಗಾಯಕ ಜೇಸುದಾಸ್‌ರವರನ್ನೂ ಕರಕೊಂಡು ಬಂದಿದ್ದರು.

ಶಬರಿಮಲೆಗೆ ಹೋಗುವ ಯಾತ್ರಾರ್ಥಿಗಳು ಪ್ರತೀವರ್ಷ ದರ್ಗಾಕ್ಕೆ ಸಂದರ್ಶನ ನೀಡಿ ಹರಕೆ ಹಾಕಿ, ಪ್ರಾರ್ಥನೆ ಮಾಡಿ ಇಲ್ಲಿಂದ ಮುಂದುವರಿಯುವುದು ರೂಢಿಯಲ್ಲಿದೆ. ದರ್ಗಾಕ್ಕೆ ಬರುವ ಎಲ್ಲಾ ಯಾತ್ರಾರ್ಥಿಗಳನ್ನು ದರ್ಗಾಕ್ಕೆ ಪ್ರವೇಶಿಸಲು, ಪ್ರಾರ್ಥಿಸಲು ಅವಕಾಶ ನೀಡುವ ಸಂಪ್ರದಾಯ ಇಂದಿಗೂ ಚಾಲ್ತಿಯಲ್ಲಿದೆ. ಅಗತ್ಯವಿದ್ದವರಿಗೆ ಊಟ, ವಸತಿ, ಸೌಕರ್ಯವನ್ನು ಇತರ ಸಂದರ್ಭಗಳಲ್ಲಿ ಮಾಡಿಕೊಡುವ ವ್ಯವಸ್ಥೆಯೂ ಇದೆ.

20ನೇ ಶತಮಾನದಲ್ಲಿ ದರ್ಗಾಕ್ಕೆ ಎಣ್ಣೆ ಕೊಡುವ ಸಂಪ್ರದಾಯ ಉಭಯ ಧರ್ಮೀಯರಲ್ಲೂ ಇತ್ತು. ಬ್ಯಾರಿ ಮುಸ್ಲಿಮರಲ್ಲಿ ಇದನ್ನು ಎಣ್ಣೆತಿರಿ ಕೊಡುವುದು ಎನ್ನಲಾಗುತ್ತಿತ್ತು. ದರ್ಗಾದಲ್ಲಿ ನಿರಂತರವಾಗಿ ಬೆಳಕು ಇರಲು ಎಣ್ಣೆಯು ಅವಶ್ಯಕ. ಇಂತಹ ಎಣ್ಣೆ ಕೊಡುವ ಸಂಪ್ರದಾಯವೂ ಈ ದರ್ಗಾಕ್ಕೆ ಇತ್ತು. ಸ್ಥಳೀಯ ಹಿಂದೂಗಳು, ಮೊಗವೀರರು ಮತ್ತು ಭಗವತೀ ಕ್ಷೇತ್ರದ ವತಿಯಿಂದ ಇತ್ತೀಚಿಗಿನವರೆಗೂ ಈ ಪದ್ಧತಿ ಜಾರಿಯಲ್ಲಿತ್ತು.

ಪ್ರಸಕ್ತ ಕೇರಳದ ಕ್ರಿಶ್ಚಿಯನ್ ಫಾದರ್ ಒಬ್ಬರು ಈ ದರ್ಗಾಕ್ಕೆ 2–3 ತಿಂಗಳಿಗೊಮ್ಮೆ ಭೇಟಿ ನೀಡುತ್ತಾರೆ. ದರ್ಗಾದಲ್ಲಿ ಹರಕೆ ಸಲ್ಲಿಸಿ ಪ್ರಾರ್ಥಿಸಿ ತಮ್ಮ ತವರಿಗೆ ಹಿಂತಿರುಗುವರು. ದರ್ಗಾದ ಸಂತರ ಹೆಸರಿನಲ್ಲಿ ಅವರು ಕೇರಳದಲ್ಲಿ ಬೇರೆ ಬೇರೆ ರೋಗಗಳಿಗೆ ಮದ್ದು ಕೊಡುತ್ತಾರೆ. ಮಾತ್ರವಲ್ಲ ಅದರಿಂದ ಹಲವರಿಗೆ ಕಾಯಿಲೆ ಗುಣಮುಖವಾಗಿದೆ ಎಂದು ದರ್ಗಾ ಕಮಿಟಿಯ ಸದಸ್ಯರು ತಿಳಿಸಿದರು. 16

ಉಳ್ಳಾಲ ಪ್ರದೇಶದ ಹೆಸರಾಂತ ಕವಿ ಬಿ. ಎಂ. ಇದಿನಬ್ಬ ಅವರನ್ನು ಭೇಟಿಯಾದಾಗ "ಉಳ್ಳಾಲದಲ್ಲಿ ಕೋಮು ಸೌಹಾರ್ದವಿದೆ. ಉಳ್ಳಾಲದ ದರ್ಗಾದ ಬಗ್ಗೆ ಇತರ ಧರ್ಮಿಯರನ್ನೊಳಗೊಂಡಂತೆ ಜನಮಾನಸದಲ್ಲಿ ಇಂದಿಗೂ ಗೌರವಾದರದ ಅಭಿಪ್ರಾಯವಿದೆ. 50–60 ವರ್ಷಗಳ ಹಿಂದೆ ಕೇರಳದಿಂದ ಘಟ್ಟದಿಂದ ಉಳ್ಳಾಲಕ್ಕೆ ತುಂಬಾ ವರ್ತಕರು, ಪ್ರಯಾಣಿಕರು ಬರುತ್ತಿದ್ದರು. ಇಲ್ಲಿ ದರ್ಗಾ ಸಂದರ್ಶನ ಮಾಡಿ, ಹರಕೆ ಕಾಣಿಕೆ ಸಲ್ಲಿಸದೆ ಅವರು ಹಿಂತಿರುಗುತ್ತಿರಲಿಲ್ಲ. ಇಲ್ಲಿಯ ವಿವಿಧ ಧರ್ಮಿಯರಲ್ಲಿ ಪರಸ್ಪರ ಕೊಡುಕೊಳ್ಳುವಿಕೆಯ ಸೌಹಾರ್ದಮಯ ವಾತಾವರಣವಿದೆ. ಹಬ್ಬ ಹರಿದಿನಗಳಲ್ಲಿ ಉಭಯ ಧರ್ಮಿಯರು ಪರಸ್ಪರ ಭೇಟಿ ನೀಡುವುದು ಸಿಹಿ, ಹಂಚುವುದು ಹಿಂದಿನಿಂದಲೂ ರೂಢಿಯಲ್ಲಿತ್ತು.

ಇಲ್ಲಿನ ಮುಖ್ಯ ಉದ್ಯಮವಾದ ಮೀನುಗಾರಿಕೆಯನ್ನು ಮುಸ್ಲಿಂ ಮತ್ತು ಮೊಗವೀರರು ಸೌಹಾರ್ದತೆಯಿಂದ ನಡೆಸುತ್ತಾರೆ. ಹಿಂದಿನ ಕಾಲದಲ್ಲಿ ಹೆಂಚಿನ ಕಾರ್ಖಾನೆ, ಸುಣ್ಣದ ಕಾರ್ಖಾನೆಗಳಲ್ಲೂ ಮುಸ್ಲಿಮರು, ಮೊಗವೀರ ಹಾಗೂ ಇನ್ನಿತರರು ಕೆಲಸ ಮಾಡುವುದು ಸರ್ವೇ ಸಾಧಾರಣವಾಗಿತ್ತು. ಹಿಂದಿನ ಕಾಲದಲ್ಲಿ ಹಿಂದೂ ಭೂಮಾಲಿಕರ ಗದ್ದೆಯಲ್ಲಿ ನಟ್ಟಿ ಮಾಡಲು, ನೇಜಿ ಹಾಕಲು, ಮುಸ್ಲಿಮ್

ಹೆಂಗಸರು ಕೆಲಸಕ್ಕೆ ಹೋಗುತ್ತಿದ್ದರು. ಹಿಂದೆ ಶ್ರೀನಿವಾಸ ಮಲ್ಯ ಎಂಬ ನಿಷ್ಠಾವಂತ ನಾಯಕರ ಪ್ರೋತ್ಸಾಹದಿಂದ ಉಳ್ಳಾಲದ ಅಣೆಕಟ್ಟು ನಿರ್ಮಾಣವಾಗಿ ಆ ಮೂಲಕ ಮಂಗಳೂರು ಇನ್ನಿತರ ಪ್ರದೇಶಗಳಿಗೆ ಪ್ರಯಾಣಕ್ಕೆ ಅನುಕೂಲವಾಯಿತು. ಒಳ್ಳೆಯ ಸೌಹಾರ್ದಯುತವಾದ ವಾತಾವರಣ ಉಳ್ಳಾಲದಲ್ಲಿ ಇತ್ತು ಎಂಬುದು ಈ ಹಿರಿಯ ಕವಿ, ಚಿಂತಕರ ಬಲವಾದ ಅಭಿಪ್ರಾಯ. 17

ಇಸ್ಲಾಂನಲ್ಲಿ ಮಹಾತ್ಮರ ಮರಣಾನಂತರ ಅವರ ಸಮಾಧಿಗಳು ದರ್ಗವಾಗಿ ಮಾರ್ಪಟ್ಟಿತು. ಸುನ್ನಿ ಪಂಥದ ನಂಬಿಕೆಯ ಪ್ರಕಾರ ಮಹಾತ್ಮರು ಮರಣಾನಂತರವೂ ತಮ್ಮ ಅಭೌತಿಕ ಶಕ್ತಿಯನ್ನು ಪ್ರದರ್ಶಿಸುವವರಾಗಿದ್ದಾರೆ. ಇಂತಹ ನಂಬಿಕೆ, ವಿಶ್ವಾಸಗಳು, ಕ್ರಮೇಣ ದರ್ಗಾದ ಸಂದರ್ಶನ, ಉರೂಸ್ ಕಾರ್ಯಕ್ರಮಗಳಿಗೆ ನಾಂದಿ ಹಾಡಿತು. ಉಳ್ಳಾಲದ ದರ್ಗಾದ ಮೂಲಕ ಹಿಂದಿನಿಂದಲೂ ಈ ಧರ್ಮ ಸಾಮರಸ್ಯವನ್ನು ಕಾಣಬಹುದು.

ತುಳುನಾಡಿನ ಜನಪದದಲ್ಲಿ ಮೂಲಭೂತವಾಗಿ ಮೂಡಿಬಂದ ನಂಬಿಕೆ ಹಾಗೂ ಧರ್ಮವಾಗಿ ಇಲ್ಲಿನ ಭೂತಾರಾಧನೆ, ನಾಗಾರಾಧನೆಗಳು ಮೂಡಿ ಬಂದಿದೆ. ಉಳ್ಳಾಲದ ಸಮೀಪದ ವಿಷ್ಣುಮೂರ್ತಿ ದೇವಸ್ಥಾನದ ನಾಗಸನ್ನಿಧಿಯಲ್ಲಿ ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಅನೇಕ ಕ್ರಿಶ್ಚಿಯನ್ನರು, ಮುಸ್ಲಿಮರು ಹಾಗೂ ಜೈನರೂ ಇಂದಿಗೂ ಭೇಟಿ ನೀಡುತ್ತಾರೆ. ಹರಕೆ ಕಾಣಿಕೆ ಸಲ್ಲಿಸುವ ಪ್ರತೀತಿ ಇದೆ ಎಂಬ ಅಂಶ ಸಾಮರಸ್ಯದ ಎಸಳನ್ನು ನಮ್ಮ ಮುಂದೆ ಇಡುತ್ತದೆ.

ಉಳ್ಳಾಲದಲ್ಲಿ ಕೋಮು ಸಾಮರಸ್ಯದ ಮತ್ತೊಂದು ಘಟನೆಯನ್ನು ಡಾ। ಅಮೃತ ಸೋಮೇಶ್ವರರು ಈ ರೀತಿ ವಿವರಿಸುತ್ತಾರೆ. ಉಳ್ಳಾಲದ ಸಮೀಪದ ಉಚ್ಚಿಲ ಮಸೀದಿಯ ದಕ್ಷಿಣ ಭಾಗದಿಂದ ಅಡ್ಕದ ಭಗವತೀ ದೈವ ಬರುವ ಸಂಪ್ರದಾಯವಿತ್ತು. ಮಸೀದಿಯ ಹತ್ತಿರ ಬಂದಾಗ ದೈವವು ಮಸೀದಿಗೆ ಮರ್ಯಾದೆ ಕೊಟ್ಟು ಮುಂದುವರಿಯುವ ವಾಡಿಕೆ ಇತ್ತು.

ಮಸೀದಿ, ದರ್ಗಾಗಳಿಗೆ ಎಣ್ಣೆ, ಬೆಳಕು ಕೊಡುವ ಬಗ್ಗೆ ಈಗಾಗಲೇ ವಿವರಿಸಲಾಗಿದೆ. ಡಾ। ಅಮೃತ ಸೋಮೇಶ್ವರರರನ್ನು ಭೇಟಿಯಾದಾಗ ಅವರ ಕುಟುಂಬದವರು ಇತ್ತೀಚಿಗೆ ಉದ್ಯಾವರ ಮಸೀದಿಗೆ ಎಣ್ಣೆ ನೀಡಿದುದನ್ನು ಉಲ್ಲೇಖಿಸಿದರು. ಇದರಿಂದ ಉಳ್ಳಾಲದಲ್ಲ ಇಂದಿಗೂ ಈ ರೀತಿಯ ಸಾಮರಸ್ಯದ ಕೊಂಡಿಯನ್ನ ಬಲಪಡಿಸುವಂತಹ ಪ್ರಮೇಯಗಳು, ವ್ಯಕ್ತಿಗಳು ಇದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ.

ಅಬ್ಬಕ್ಕ ರಾಣಿ, ಅಳೇಕಲ ಮಸೀದಿಯ ಬಳಿ ಪೋರ್ಚುಗೀಸರ ದಾಳಿಯಲ್ಲಿ ಸೋತ ನಂತರ ಆಶ್ರಯ ಪಡೆದಿದ್ದರು. ಆ ಸಂಕಷ್ಟದಿಂದ ಪಾರಾದ ನಂತರ ಹರೇಕಳದ ಮಸೀದಿಯನ್ನು ಪುನರುಜ್ಜೀವನಗೊಳಿಸಿದಳು. ಇಲ್ಲಿ ರಾಣಿ ಅಬ್ಬಕ್ಕನಿಗೆ ಒಬ್ಬ ಜೈನ ರಾಣಿಯಾಗಿ, ಇಸ್ಲಾಂ ಧರ್ಮದಲ್ಲಿ

ನಂಬಿಕೆ, ಆದರಗಳಿದ್ದುದು ಹಾಗೂ ಆ ಮೂಲಕ ಸೌಹಾರ್ದವನ್ನು ಕಾಪಾಡಲು ಮಾದರಿಯಾದುದನ್ನು ನಾವು ಕಾಣಬಹುದು. ಉಳ್ಳಾಲದ ಸೋಮನಾಥ ದೇವಾಲಯವಿರುವ ಕ್ಷೇತ್ರ ಒಂಭತ್ತು ಕೆರೆ ಪ್ರದೇಶಗಳು ಹಿಂದೆ ವ್ಯವಹಾರ ಕೇಂದ್ರಗಳಾಗಿದ್ದವು. ವ್ಯಾಪಾರ, ವ್ಯವಹಾರ ಮಾಡುವವರು ಹೆಚ್ಚಿನವರು ಮುಸ್ಲಿಮರು. ಇವರ ಭೇಟಿ ಹಾಗೂ ವಾಸ್ತವ್ಯ ಸಂದರ್ಭದಲ್ಲಿ ಸೋಮನಾಥ ಕ್ಷೇತ್ರಕ್ಕೂ ತಮ್ಮ ಆರ್ಥಿಕ ಕಾಣಿಕೆಯನ್ನು ನೀಡುವ ಸಂಪ್ರದಾಯವಿತ್ತು. ಆ ಮೂಲಕ ಧಾರ್ಮಿಕ ಸಮನ್ವಯವನ್ನು ಉಳ್ಳಾಲದಲ್ಲಿ ನೆಲೆ ನಿಂತಿತ್ತು.

ಹಜ್ರತ್ ಸೈಯ್ಯದ್ ಮದನಿಯವರ ಜೀವನ ಕಾಲದಲ್ಲೂ ಕೆಲವು ಐತಿಹ್ಯಗಳು ಕೋಮು ಸಾಮರಸ್ಯದ ಅಂಶವನ್ನೂ ಸಾರುತ್ತದೆ. ಐತಿಹ್ಯ ಒಂದರ ಪ್ರಕಾರ ಸೈಯ್ಯದ್ ಮದನಿಯವರ ಕೋರಿಕೆಯಂತೆ ಅವರು ವಾಸ್ತವ್ಯ ಸಮೀಪದಲ್ಲಿದ್ದ ದೈವಸ್ಥಾನವನ್ನು ಮಸೀದಿಯ ಪಶ್ಚಿಮ ದಿಕ್ಕಿಗೆ ಹಿಂದೂ ಬಾಂಧವರು ಸಂತೋಷದಿಂದ ಬದಲಾಯಿಸಿದರು. ಇನ್ನೊಂದು ಐತಿಹ್ಯದ ಪ್ರಕಾರ ಅವರ ಪತ್ನಿಯ ಮನೆಯವರಿಗೆ ತಮ್ಮ ಹಿಂದೂ ಧಣಿಗೆ ಗೇಣಿ ಕೊಡಲು ಅಸಾಧ್ಯವಾದಾಗ ಮದನಿಯವರು ಕನಸಿನಲ್ಲಿ ಬಂದು ಆ ಮನೆಯನ್ನು ತನ್ನ ಪತ್ನಿಯ ಕುಟುಂಬಸ್ಥರಿಗೆ ಬಿಟ್ಟು ಕೊಡಲು ಹೇಳಿದ್ದು ಅದರಂತೆ ಆ ಭೂಮಾಲಿಕ ಬಿಟ್ಟುಕೊಟ್ಟರು ಎಂಬ ಪ್ರತೀತಿ ಇದೆ. ಈ ಮಾಹಿತಿಗಳು ಸಂತರನ್ನು ಹಿಂದೂ ಸಹೋದರರು ಗೌರವಿಸುತ್ತಿದ್ದರು. ಅವರ ಉಪದೇಶಗಳನ್ನು ಆಲಿಸುತ್ತಿದ್ದರು. ಹಾಗೂ ಧಾರ್ಮಿಕ ಸೌಹಾರ್ಧದ ಜೀವನ ಅಲ್ಲಿ ನೆಲೆಯೂರಿತ್ತು ಎಂಬ ಅಂಶದ ಬಗ್ಗೆ ಬೆಳಕು ಚೆಲ್ಲುತ್ತದೆ. 18

ಅಬ್ಬಕ್ಕ ರಾಣಿಯ ಬಗ್ಗೆ ಉಳ್ಳಾಲ ಹಾಗೂ ತುಳುನಾಡಿನ ಇತರ ಪ್ರದೇಶಗಳಲ್ಲಿ ಎಲ್ಲ ಧರ್ಮದವರಲ್ಲೂ ಗೌರವಾದರಗಳಿದ್ದವು. ತನ್ನ ಗಂಡುಬೀರಿತನಕ್ಕೆ ಮತ್ತು ಧೈರ್ಯಕ್ಕೆ ಹೆಸರಾಗಿದ್ದ ರಾಣಿ ಅಬ್ಬಕ್ಕನ ಜೀವನ, ಪುರುಷ ಸಮಾಜದ ವಿರುದ್ಧ, ಪ್ರಬಲ ಯುರೋಪಿನ ಶಕ್ತಿ ಪೋರ್ಚುಗೀಸರ ವಿರುದ್ಧದ ಹೋರಾಟಕ್ಕೆ ಮುಡಿಪಾಗಿತ್ತು. ಆದುದರಿಂದಲೇ ಅವಳ ಕಾರ್ಯ ಸಾಹಸವನ್ನು ಉಭಯ ಧರ್ಮೀಯರು ಇಂದಿಗೂ ನೆನಪಿಸುತ್ತಾರೆ. ಯಾರಾದರೂ ಒಬ್ಬ ಗಂಡುಬೀರಿ, ದಿಟ್ಟ ಹೆಂಗಸು ಇದ್ದರೆ "ಏನು ದೊಡ್ಡ ಅಬ್ಬಕ್ಕ ರಾಣಿಯ ಹಾಗೆ ಮಾಡುತ್ತಿ?" ಎಂಬ ಮಾತು ಹಿಂದೂಗಳಲ್ಲೂ, ಮುಸ್ಲೀಮರಲ್ಲೂ ವಾಡಿಕೆಯಾಗಿತ್ತು ಎಂದು ಬಿ. ಎ. ಮೊೈದೀನ್‌ರವರು ಅಭಿಪ್ರಾಯ ಪಡುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಅಬ್ಬಕ್ಕ ರಾಣಿಯ ಶೌರ್ಯ, ದಿಟ್ಟತನ ತುಳುನಾಡಿನ ಎಲ್ಲಾ ಕೋಮಿನವರಲ್ಲೂ ಜನಜನಿತವಾಗಿತ್ತು. ಮಾತ್ರವಲ್ಲದೆ ರಾಣಿ ಅಬ್ಬಕ್ಕ ಎಲ್ಲ ಧರ್ಮಿಯರನ್ನೂ ಸಮಾನ ಸೌಹಾರ್ದದಿಂದ ಕಾಣುವ ರಾಣಿಯಾಗಿ ಆಳಿದ್ದಳು ಎಂಬುದು ವಾಸ್ತವ.

ಉಳ್ಳಾಲದ ಕೋಟೆಕಾರ್‌ನಲ್ಲಿ ಹಿಂದೆ ಅಲಾದಿಯ ಕೊಟ್ಲು ಎಂಬ ಸ್ಥಳವಿತ್ತು. ಅಲ್ಲಿ ಮೊಹರಂನ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮವೇರ್ಪಡುತ್ತಿತ್ತು. ಹಿಂದೂ ಮುಸ್ಲಿಂ ಬಾಂಧವರು ಜೊತೆಯಾಗಿ

ಭಾಗವಹಿಸುವ ವಿಜೃಂಭಣೆಯ ಹಬ್ಬವಾಗಿತ್ತು. ಮೊಹರಂ ಬೆಂಕಿಯ ಕೆಂಡದ ರಾಶಿಯಲ್ಲಿ ನಡೆಯುವುದು, ದರ್ಶನ ಹಿಡಿಯುವಂತಹ ಸಂಪ್ರದಾಯ, ಸಂಗೀತ ಉಪಕರಣಗಳಿಂದೊಡಗೂಡಿದ ದೊಡ್ಡ ಶಬ್ದ, ನರ್ತನ ಇತ್ಯಾದಿ ನಡೆಯುತ್ತಿತ್ತು. ಇದು ಉಳ್ಳಾಲದ ಹಿಂದೂ ಮುಸ್ಲಿಂ ಸಾಮರಸ್ಯದ ಒಂದು ನೆಲೆಯಾಗಿತ್ತು. 19

ಉಳ್ಳಾಲದಲ್ಲಿ ದೊರಕಿದ ಹಂಜಮಾನ ಶಾಸನವೊಂದು ಕ್ರಿ. ಶ. 1474ರಲ್ಲಿ ವಿಟ್ಟರಸ ಒಡೆಯನೆಂಬವನು ಮುಸ್ಲಿಂಮರಿಗೆ ಭೂಮಿ ದಾನ ಮಾಡಿದ ಬಗ್ಗೆ ಇತಿಹಾಸಕಾರ ಡಾ। ವಸಂತ ಮಾಧವರ ಅಭಿಪ್ರಾಯ. ಮುಸ್ಲಿಮರಿಗೆ ಭೂಮಿ ದಾನ ಮಾಡಿದ ಈ ಉದಾಹರಣೆಯೂ ಕೂಡ ಹಿಂದೆ ಉಳ್ಳಾಲದಲ್ಲಿ ಇದ್ದ ಧಾರ್ಮಿಕ ಸಾಮರಸ್ಯವನ್ನು ತಿಳಿಸುತ್ತದೆ. ವಿಟ್ಟರಸ ಹಿಂದೂ ರಾಜನಾಗಿದ್ದು ಮುಸ್ಲಿಮರ ಮಸೀದಿಯೊಂದಕ್ಕೆ ಭೂದಾನ ಮಾಡಿರುವುದು, ಪರಸ್ಪರ ಕೊಡು-ಕೊಳ್ಳುವಿಕೆ ಉಭಯ ಧರ್ಮೀಯರಲ್ಲಿದ್ದುದನ್ನು ಸ್ಪುಟಗೊಳಿಸುತ್ತದೆ.

ಉಳ್ಳಾಲದಲ್ಲಿ 1921ನೇ ಇಸವಿಯ ಆದಿಭಾಗದಲ್ಲಿ ನಡೆದ ಒಂದು ಸಮಾಜ ಸೇವಾ ಕಾರ್ಯಕ್ರಮವು ಕೋಮು ಸೌಹಾರ್ದತೆಯನ್ನು ಎತ್ತಿ ಹಿಡಿಯುತ್ತದೆ. ಉಳ್ಳಾಲ ಮಾಪ್ಲಾ ಬೋರ್ಡ್ ಶಾಲೆಯಲ್ಲಿ ಅಗತ್ಯವಿದ್ದ ವಿದ್ಯಾರ್ಥಿಗಳಿಗೆ ಶಾಲಾ ದಿವಸಗಳಲ್ಲಿ ಮಧ್ಯಾಹ್ನ ಊಟ ಕೊಡುವುದಾಗಿ ಹಯಾತುಲ್ ಇಸ್ಲಾಂ ಸಂಘದವರು ನಿಶ್ಚಯಿಸಿ ಸದರಿ ಕೆಲಸವನ್ನು ಜಾರಿಗೆ ತಂದರು. ಈ ಬಗ್ಗೆ ಕೆಲವು ಹಿಂದೂ-ಮುಸಲ್ಮಾನ ಗೃಹಸ್ಥರು ತಮ್ಮ ಚಿತ್ತವರಿತು ಅಲ್ಪ ಸ್ವಲ್ಪ ಹಣವನ್ನು ನೀಡಿರುವರು, ಮಾತ್ರಲ್ಲದೆ ಅನೇಕರು ಇದಕ್ಕೆ ತಮ್ಮ ತನುಮನದಿಂದ ಪ್ರೋತ್ಸಾಹಿಸಿದ್ದರು. ಮುಂದಕ್ಕೆ ಹೊಸ ವರ್ಷದ ಕುರಿತು ತಕ್ಕ ಏರ್ಪಾಡು ಮಾಡುವರೇ ಸ್ವದೇಶ ಮಿತ್ರರೆಲ್ಲರೂ ಈ ಬಗ್ಗೆ ಗಮನ ಕೊಡುವರೆಂತಲೂ ಕೋರುತ್ತೇವೆ. ಹಾಗೂ ಈ ವಿಷಯದಲ್ಲಿ ಸಹಾಯಕರಾದ ಹಿಂದೂ ಮುಸಲ್ಮಾನ ಗೃಹಸ್ಥರಿಗೆ ನಮ್ಮ ಮನಃಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇವೆ. ಈ ರೀತಿಯ ಕೃತಜ್ಞತಾ ಸ್ವರೂಪದ ಪತ್ರವನ್ನು ಸಂಘದ ಸೆಕ್ರೆಟರಿ (1921) ಯು. ಎಸ್. ಅಬ್ದುಲ್ ಅಜೀಜ್ ಅಂದಿನ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. 20

ಕಡು ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಹಾಹಾಕಾರವಾದಾಗ ಜಾತಿ ಮತ ಭೇದವೆಣಿಸದೆ ಉಳ್ಳಾಲ, ಪೆರ್ಮನ್ನೂರು, ಮುನ್ನೂರು ಹಾಗೂ ಸೋಮೇಶ್ವರ ಗ್ರಾಮಗಳಲ್ಲಿ ದರ್ಗಾದ ವತಿಯಿಂದ ನೀರು ಸರಬರಾಜು ಮಾಡುವ ವ್ಯವಸ್ಥೆಯಿದೆ. ವರ್ಷಂಪ್ರತಿ 2 ರಿಂದ 3 ಲಕ್ಷ ರೂಪಾಯಿಯವರೆಗೂ ಖರ್ಚು ಮಾಡಿ ಈ ಶ್ಲಾಘನೀಯ ಕಾರ್ಯ ನಡೆಯುತ್ತಾ ಇದ್ದು, ಇದೊಂದು ಜನರ ಅಗತ್ಯಗಳಿಗೆ ದರ್ಗಾದ ವತಿಯಿಂದ ನಡೆಯುವ ಉತ್ತಮ ಸ್ಪಂದನವಾಗಿದೆ.

ಇಲ್ಲಿನ ದರ್ಗಾ ಕಮಿಟಿಯವರೊಂದಿಗಿನ ಬೇಟಿಯ ಸಂಬರ್ಭದಲ್ಲಿ ಆಡು, ಹರಕೆ ಕೊಡುವಂತಹುದು ಉಳ್ಳಾಲಕ್ಕೆ ಮಾತ್ರ ವಿಶೇಷವಾಗಿದೆ. ಈ ಹರಕೆ ಹಿಂದಿನಿಂದಲೇ ರೂಢಿಯಲ್ಲಿದೆ. ಅಂತಹ ಆಡುಗಳು ಬೇರೆ ಬೇರೆ ಊರಿನಿಂದ ಉರೂಸ್ ಸಂದರ್ಭದಲ್ಲಿ ಉಳ್ಳಾಲಕ್ಕೆ ಬರುವುದು ಎಂಬ ಪ್ರತೀತಿ ಇದೆ. ಮಾತ್ರವಲ್ಲದೆ ಅಂತಹ ಆಡುಗಳಿಗೆ, ಜಾತಿ, ಮತ ಭೇದವಿಲ್ಲದೆ ಅಂಗಡಿಗಳಿಗೆ, ಹೊಟೇಲುಗಳಿಗೆ ಪ್ರವೇಶಿಸಿದರೂ ಅದನ್ನು ತಡೆಯದೆ ಏನಾದರೂ ತಿನ್ನಲು ಕೊಡುವುದು ಎಲ್ಲಾ ಜನರಲ್ಲೂ ವಾಡಿಕೆಯಾಗಿದ್ದು "ಉಳ್ಳಾಲಕ್ಕೆ ಹರಕೆ ಬಿಟ್ಟ ಆಡು" ಎಂಬ ಮಾತು ಇಂದಿಗೂ ಜನಪ್ರಿಯವಾಗಿದೆ. ಸಾಮರಸ್ಯದ ಪ್ರತೀಕವಾಗಿ ಈ ಪ್ರಾಣಿ ಹಿಂದಿನ ಜನರ ಗೌರವಾದರಗಳಿಗೆ ಪಾತ್ರವಾಗಿತ್ತು.

ಉಳ್ಳಾಲದ ದರ್ಗಾಕ್ಕೆ ಶೇ. 30 ರಿಂದ 40 ರಷ್ಟು ಹಿಂದೂ, ಕ್ರಿಶ್ಚಿಯನ್, ಜೈನ ಧರ್ಮಿಯರು ಭೇಟಿ ನೀಡುತ್ತಿದ್ದು, ದರ್ಗಾದಲ್ಲಿ ಯಾವುದೇ ಪ್ರತ್ಯೇಕತಾ ಭಾವನೆಯನ್ನು ತೋರದೆ ಎಲ್ಲರಿಗೂ ಮುಕ್ತವಾಗಿ ದರ್ಗಾ ಸಂದರ್ಶನಕ್ಕೆ ಅವಕಾಶವಿದೆ. ದರ್ಗಾದಲ್ಲಿ ವಿಶ್ವಾಸವಿಟ್ಟುಕೊಂಡು ಬರುವ ಭಕ್ತಾದಿಗಳನ್ನು ಯಾವುದೇ ರೀತಿಯಲ್ಲಿ ಬೇಧಭಾವನೆಯಿಂದ ದರ್ಗಾದ ಆಡಳಿತ ವರ್ಗ ನೋಡುವುದಿಲ್ಲ. ದರ್ಗಾದ ಹತ್ತಿರವೇ ನಿಂತು ಪ್ರಾರ್ಥನೆ, ಧ್ಯಾನ ಮಾಡುವ ಅವಕಾಶ ಇತರ ಧರ್ಮಿಯರಿಗೂ ಇದೆ.

ದರ್ಗಾಕ್ಕೆ ಬಂದ ಕೆಲವು ಮುಸ್ಲಿಮೇತರರನ್ನು ಭೇಟಿ ಮಾಡಿದಾಗ ಅವರಿಗೆ ಮನಶ್ಯಾಂತಿ ಲಭಿಸಿರುವುದು ಮಾತ್ರವಲ್ಲದೆ ರೋಗ ರುಜಿನ, ಸಂಕಷ್ಟ ವಿಪತ್ತುಗಳಿಂದ ಪಾರಾದುದನ್ನು ವಿವರಿಸಿದರು. ಅದೇ ರೀತಿ ವ್ಯಾಪಾರದಲ್ಲಿ ಉಂಟಾದ ಲಾಭದ ಬಗ್ಗೆ ವಿವರಣೆ ನೀಡಿದರು. ಇಲ್ಲಿಗೆ ಹರಕೆ ನೀಡುತ್ತಿರು ವುದನ್ನು ಇಲ್ಲಿಯ ಸೀರಣಿ ಸ್ವೀಕರಿಸುವುದನ್ನು ಆಗಾಗ ಭೇಟಿ ನೀಡುತ್ತಿರುವುದನ್ನು, ಇಲ್ಲಿಯ ಸೀರಣಿ ಸ್ವೀಕರಿಸುವುದನ್ನು, ಆಗಾಗ ಭೇಟಿ ನೀಡುತ್ತಿರುವ ವಿಚಾರವನ್ನು ಸ್ಪಷ್ಟಗೊಳಿಸಿದ ಅವರಿಗೆ ದರ್ಗಾದಲ್ಲಿ ವಿಶೇಷ ಗೌರವವಿರುವದನ್ನೂ ಕಾಣಲಾಯಿತು. ಉರೂಸಿನ ಸಂದರ್ಭದಲ್ಲಿ ಇವರ ಸಂಖ್ಯೆ ಇನ್ನಷ್ಟು ಅಧಿಕವಾಗಿದೆ. ಈ ರೀತಿಯಲ್ಲಿ ಸಾಮರಸ್ಯಕ್ಕೆ ದರ್ಗಾ ಇಂದಿಗೂ ಒಂದು ಉತ್ತಮ ಪಡಿಯಾಗಿದೆ. 21

ಅದೇ ರೀತಿ ದರ್ಗಾದ ವತಿಯಿಂದ ನಡೆಯುತ್ತಿರುವ ಅರೇಬಿಕ್ ಕಾಲೇಜಿನಲ್ಲಿ, ಅರೇಬಿಕ್ ಮಾತ್ರವಲ್ಲದೆ ಕನ್ನಡ, ಮಲೆಯಾಳಂ ಭಾಷೆ ಕಲಿಯಲು ಬರಹಗಾರರಾಗಲು ವಿಶೇಷವಾದ ಅವಕಾಶವಿದೆ. ಅರೇಬಿಕ್ ಕಾಲೇಜಿನ ವಿದ್ಯಾರ್ಥಿಗಳಿಂದಲೇ ನಿರ್ಮಾಣವಾದ "ಸೈಯದ್ ಮದನಿ ಕನ್ನಡ ಸಾಹಿತ್ಯ ವೇದಿಕೆ" ನಿರಂತರವಾಗಿ ಕನ್ನಡ ಭಾಷಣ ಕಲೆ, ಲೇಖನ, ಕಥೆ, ಕವನದ ಮೂಲಕ ಕನ್ನಡದಲ್ಲಿ ಹೆಚ್ಚಿನ ಜ್ಞಾನವನ್ನು ಪಡೆಯುವ ಒಂದು ಉತ್ತಮ ವೇದಿಕೆಯಾಗಿದ್ದು, ನಾಡಭಾಷೆಯ ಮಹತ್ವವನ್ನು ಅರಿತು ಆ

ಮೂಲಕ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ದರ್ಗಾದ ಈ ಪ್ರಯತ್ನವು ಅದರ ವೈಶಾಲ್ಯತೆಗೆ ಮತ್ತು ಸೌಹಾರ್ದತೆಗೆ ನೀಡುವ ಉತ್ತಮ ಕೊಡುಗೆ ಆಗಿದೆ. 22

ಸೈಯ್ಯದ್ ಮದನಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ನಡೆಯುತ್ತಿರುವ ಹಲವು ಪ್ರಾಥಮಿಕ ಹೈಸ್ಕೂಲ್, ಪದವಿಪೂರ್ವ, ಕಾಲೇಜು, ಪದವಿ ಕಾಲೇಜುಗಳು ಹಾಗೂ ತಾಂತ್ರಿಕ ಶಿಕ್ಷಣ ಕೇಂದ್ರಗಳಲ್ಲಿ, ಕೆಲಸ ಮಾಡುತ್ತಿರುವ ಸಿಬ್ಬಂದಿಗಳಲ್ಲಿ ಶೇಕಡಾ 80ರಷ್ಟು ಇರುವುದನ್ನು ಗಮನಿಸುವಾಗ ಇಲ್ಲಿ ಕೇವಲ ಧರ್ಮದ ಆಧಾರದಲ್ಲಿ ಕೆಲಸ ನೀಡುವ ಸಂಕುಚಿತತೆಯನ್ನು ಕಾಣುವುದಿಲ್ಲ.

ದರ್ಗಾದಿಂದ ಪಡೆದ ಮಾಹಿತಿ ಪ್ರಕಾರ ಈ ಕೆಳಗಿನ ವಿದ್ಯಾ ಸಂಸ್ಥೆಗಳಲ್ಲಿರುವ ಸಿಬ್ಬಂದಿವರ್ಗದ ಅನುಪಾತ ಈ ರೀತಿ ಇದೆ.

ಸಂಸ್ಥೆಯ ಹೆಸರು	ಒಟ್ಟು ಸಿಬಂದಿ	ಮುಸ್ಲಿಮೇತರ ಸಿಬಂದಿ	ಮುಸ್ಲಿಂ ಸಿಬಂದಿ
ಹಜ್ರತ್ ಸೈಯ್ಯದ್ ಮದನಿ ಆಂಗ್ಲ ಮಾಧ್ಯಮ ಶಾಲೆ ಮತ್ತು ಹಜ್ರತ್ ಸೈಯ್ಯದ್ ಮದನಿ ಆಂಗ್ಲ ಮಾಧ್ಯಮ ಪ್ರೌಢ ಶಾಲೆ, ಕಲ್ಲಾಪು, ತೊಕ್ಕೊಟ್ಟು	61	45 ಹಿಂದುಗಳು 5 ಕ್ರಿಶ್ಚಿಯನ್ನರು	11
ಹಜ್ರತ್ ಸೈಯ್ಯದ್ ಮದನಿ ಪ್ರೌಢಶಾಲೆ, ಉಳ್ಳಾಲ	13	10	03
ಹಜ್ರತ್ ಸೈಯ್ಯದ್ ಮದನಿ ಬಾಲಕಿಯರ ಪ್ರೌಢಶಾಲೆ, ಉಳ್ಳಾಲ	08	07	01
ಸೈಯ್ಯದ್ ಮದನಿ ಹೈಯರ್ ಪ್ರೈಮರಿ ಸ್ಕೂಲ್, ಚೆಂಬುಗುಡ್ಡೆ, ತೊಕ್ಕೊಟ್ಟು	10	09	01
ಟಿಪ್ಪು ಸುಲ್ತಾನ್ ಪದವಿ ಪೂರ್ವ ಕಾಲೇಜು, ಒಂಬತ್ತುಕೆರೆ, ಉಳ್ಳಾಲ	18	15	03
ಟಿಪ್ಪು ಸುಲ್ತಾನ್ ಪದವಿ ಕಾಲೇಜು, ಒಂಬತ್ತುಕೆರೆ, ಉಳ್ಳಾಲ	24	21	03
ಸೈಯ್ಯದ್ ಮದನಿ ತಾಂತ್ರಿಕ ತರಬೇತಿ ಕೇಂದ್ರ, ಉಳ್ಳಾಲ	19	01	09

ಇಲ್ಲಿ ಕೆಲವನ್ನು ಮಾತ್ರ ನಮೂದಿಸಲಾಗಿದೆ. 23

ಉಳ್ಳಾಲದಲ್ಲಿರುವ ಭಾರತ್ ಹೈಸ್ಕೂಲಿನಲ್ಲಿ 90ರ ದಶಕದವರೆಗೂ ಉಪಾಧ್ಯಾಯರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಸಾದುಕುಂಞಿ ಎಂಬವರ ಪ್ರಕಾರ ಉಳ್ಳಾಲದ ದರ್ಗಾಕ್ಕೆ ಹಿಂದೂಗಳಲ್ಲಿ ಗೌರವಾದರಗಳಿದ್ದು, ಮುಸ್ಲಿಂ ಬಾಂಧವರಲ್ಲಿ ಉತ್ತಮ ರೀತಿಯಲ್ಲಿ ವ್ಯವಹಾರ ಬಾಂಧವ್ಯವಿದ್ದುದನ್ನು ನೆನೆಯುತ್ತಾರೆ. ತಮ್ಮ ಸೇವೆಯ ದಿನಗಳನ್ನು ನೆನಪಿಸಿಕೊಂಡು ಅವರು ವರ್ಷದ ಕ್ಯಾಲೆಂಡರನ್ನು ತಯಾರಿಸುವಾಗ ಮುಸ್ಲಿಂ ಹಬ್ಬ ಹರಿದಿನಗಳ ಬಗ್ಗೆ ಅವರಲ್ಲಿ ಕೇಳಿ ರಜೆಗಳನ್ನು ಕೊಡುವ, ಕ್ಯಾಲೆಂಡರ್‌ಗಳಲ್ಲಿ ನಿಗದಿಪಡಿಸುವುದು ರೂಢಿಯಲ್ಲಿತ್ತು ಎಂದರು. (ಮುಸ್ಲಿಂ ಹಬ್ಬಗಳು ಚಾಂದ್ರಮಾನ ಕ್ಯಾಲೆಂಡರ್ ಆದುದರಿಂದ ಒಂದು ದಿವಸ ಮುಂಚಿತವಾಗಿ ಹಬ್ಬ ಹರಿದಿನಗಳು ನಡೆಯುವುದು) ಈ ಮಾಹಿತಿ ಕೂಡಾ ಉಳ್ಳಾಲದಲ್ಲಿದ್ದ ಧಾರ್ಮಿಕ ಸಹ ಬಾಳ್ವೆಯ ಅಂಶವನ್ನು ಎತ್ತಿ ಹಿಡಿಯುತ್ತದೆ. 24

ಉಳ್ಳಾಲದಲ್ಲಿ ಶ್ರೀನಿವಾಸ ಮಲ್ಯರು ಅಪೂರ್ವ ರಾಜಕೀಯ ಮುತ್ಸದ್ದಿಯಾಗಿದ್ದು ಉಳ್ಳಾಲದ ಧಾರ್ಮಿಕ ಸಾಮರಸ್ಯಕ್ಕೆ ಅಪಾರ ಕೊಡುಗೆ ನೀಡಿರುವ ಮಹನೀಯರು ಇವರ ಶ್ರಮದಿಂದಲೇ ಉಳ್ಳಾಲದ ಸೇತುವೆ ನಿರ್ಮಾಣಗೊಂಡು ಇತರ ಪ್ರದೇಶಗಳಿಗೆ ಮುಕ್ತವಾಗಿ ಉಳ್ಳಾಲದವರಿಗೆ ಸಂಚರಿಸುವಂತಾಯಿತು. ಸಾಮಾಜಿಕ ಸುಧಾರಣೆಯಲ್ಲಿ ರಘುನಾಥಯ್ಯನವರ ಹೆಸರು ಮುಂಚೂಣಿಯಲ್ಲಿದೆ. ಮಂಗಳೂರಿನಲ್ಲಿ ಬ್ರಹ್ಮ ಸಮಾಜವನ್ನು ಸ್ಥಾಪಿಸಿದ ಇವರು ಬಿಲ್ಲವರಿಗೆ ಸಮಾಜ ಸುಧಾರಣಾ ಪ್ರೇರಣೆ ನೀಡಿದವರು. ಇವರು ಜಾತಿ ಮತ ಬೇಧವಿಲ್ಲದೆ ದುಡಿದುದರಿಂದ ಸ್ವಜಾತಿ ಬಾಂಧವರಿಂದ ಬಹಿಷ್ಕಾರಕ್ಕೂ ಗುರಿಯಾದರು.

ಅದೇ ರೀತಿ ಗುಲಾಂ ಖಾದರ್, ಮಂಚಿಲಹಮ್ಮಬ್ಬ, ಯು. ಎಂ. ಇಬ್ರಾಹಿಂ, ಸವೂರ್ ಶಿವರಾಮ್, ಬಾಬುರಾವ್ ಉಳ್ಳಾಲ, ಶೇಷಪ್ಪ ಬಂಗೇರ, ಹರಿಯಪ್ಪ ಪುತ್ರನ್ ಮೊದಲಾದವರು ಸಾಮಾಜಿಕ ಸೇವೆಯಲ್ಲಿ ನೆನಪಿಸಬಹುದಾದ ಹೆಸರುಗಳು. ಇವರ ನಿರಂತರ ಸೇವೆ, ಪ್ರಯತ್ನದಿಂದ ಉಳ್ಳಾಲದಲ್ಲಿ ಸೌಹಾರ್ದ, ಪ್ರಗತಿ, ಶಾಂತಿ ಬೀಡು ಬಿಟ್ಟಿತ್ತು. ಇತ್ತೀಚೆಗಿನ ದಿನಗಳಲ್ಲಿ ಬಿ. ಎಂ. ಇದಿನಬ್ಬ, ಯು. ಟಿ. ಫರೀದ್ ಮುಂತಾದವರು ಒಳ್ಳೆಯ ಸೇವೆಯನ್ನು ನೀಡಿರುವರು.

ಸೈಯದ್ ಮದನಿ ದರ್ಗಾವಲ್ಲದೆ ಇನ್ನಿತರ ಖ್ಯಾತ ಆರಾಧನಾ ಮಂದಿರಗಳಾದ ಉಳ್ಳಾಲ್ತಿ, ಧರ್ಮ ಅರಸರ ಕ್ಷೇತ್ರ ಚಿರುಂಬಾ ಭಗವತೀ ಕ್ಷೇತ್ರ ಉಳ್ಳಾಲ, ಮಲರಾಯ ದೇವಸ್ಥಾನ ಕೋರ್ದಬ್ಬು ದೈವಸ್ಥಾನ, ಅಲೇಕಳ ಮಸೀದಿ, ಸೋಮೇಶ್ವರ ದೇವಸ್ಥಾನ, ಸೈಂಟ್ ಸೆಬಾಸ್ಟಿಯನ್ ಚರ್ಚ್, ರಾಣಿ ಅಬ್ಬಕ್ಕಳ ಪುನರ್ ನಿರ್ಮಾಣಗೊಂಡ ಬಸದಿ, ಒಂಭತ್ತು ಕೆರೆ, ರಾಜದುರ್ಗೆ ಬನ, ಇತ್ಯಾದಿಗಳು ಜನರ ಧಾರ್ಮಿಕ ಜೀವನ ಭಾಗವಾಗಿದ್ದು ಸೌಹಾರ್ಧಯುತ ಪರಂಪರೆಗೆ ಇಂಬು ನೀಡುವ ಕ್ಷೇತ್ರಗಳಾಗಿವೆ.

ಒಟ್ಟಿನಲ್ಲಿ ತುಳುನಾಡಿನ ಇತರ ಭಾಗಗಳಲ್ಲಿದ್ದಂತಹ ಈ ಸೌಹಾರ್ಧಯುತ ವಾತಾವರಣ ದಕ್ಷಿಣ ಕನ್ನಡ ಜಿಲ್ಲೆಯ ನಾನಾ ಮೂಲೆಗಳಲ್ಲೂ ನೆಲೆ ಮಾಡಿತ್ತು ಎಂಬುದಕ್ಕೆ ಉಳ್ಳಾಲ ಉತ್ತಮ ಉದಾಹರಣೆಯಾಗಿದೆ. ಐತಿಹಾಸಿಕವಗಿ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಧಾರ್ಮಿಕವಾಗಿ ವಿಶಿಷ್ಠ ಪ್ರದೇಶವಾಗಿರುವ ಉಳ್ಳಾಲದಲ್ಲಿ, ಸೌಹಾರ್ದತೆಯು ರಾಣಿ ಅಬ್ಬಕ್ಕನ ಕಾಲದಿಂದಲೇ ಜನಜನಿತವಾಗಿತ್ತು. ಸಂತ ಶರೀಫುಲ್ ಮದನಿಯವರ ಆಗಮನ, ವಾಸ್ತವ್ಯ ಸರಿಸುಮಾರು ರಾಣಿ ಅಬ್ಬಕ್ಕನ ಕಾಲದಲ್ಲೇ ಆಗಿದ್ದು, ಅಂದಿನಿಂದ ಲಾಗಾಯ್ತು ಉಳ್ಳಾಲದಲ್ಲಿ ಕೋಮು ಸೌಹಾರ್ಧದ ಪರಂಪರೆ ನೆಲೆನಿಂತಿರುವುದನ್ನು ಈ ಮೇಲಿನ ಅಂಶಗಳಿಂದ ತಿಳಿದುಕೊಳ್ಳಬಹುದಾಗಿದೆ. 25

ಆಕರ ಸೂಚಿ

1. ಡಾ। ವಹ್ಹಾಬ್ ದೊಡ್ಡಮನಿ, ಧಾರ್ಮಿಕ ಸಾಮರಸ್ಯ '*ಪೊಲಿ (ಸಂ) ಕೆನರಾ 200*' ಬ್ಯಾರಿ ಬೆಳೆದು ಬಂದ ದಾರಿ, ಜಿಲ್ಲಾಧಿಕಾರಿ, ಮಂಗಳೂರು 2000, ಪು. 292–294
2. ಡಾ। ಅಮೃತ್ ಸೋಮೇಶ್ವರ, *ಉಳ್ಳಾಲ ಇತಿಆದಿ(ಸಂ)*, ಉಳ್ಳಾಲ ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪು. 72 ಹಾಗೂ ಬಬ್ಬರ್ಯ ಪಾಡ್ದನ–ಪಾಡ್ದನ ಸಂಪುಟ – 1997 ಡಾ। ಅಮೃತ ಸೋಮೇಶ್ವರ.
3. ಡಾ। ಅಮೃತ್ ಸೋಮೇಶ್ವರ, *ಉಳ್ಳಾಲ ಇತಿಆದಿ (ಸಂ)*, ಉಳ್ಳಾಲ ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪು. 70
4 ಡಾ। ವಹ್ಹಾಬ್ ದೊಡ್ಡಮನಿ, ಧಾರ್ಮಿಕ ಸಾಮರಸ್ಯ '*ಪೊಲಿ (ಸಂ) ಕೆನರಾ 200*' ಬ್ಯಾರಿ ಬೆಳೆದು ಬಂದ ದಾರಿ, ಜಿಲ್ಲಾಧಿಕಾರಿ, ಮಂಗಳೂರು 2000, ಪು. 294–295
5. ಡಾ। ಅಮೃತ ಸೋಮೇಶ್ವರ ಅವರೊಂದಿಗೆ ನಡೆಸಿದ ಸಂದರ್ಶನದಲ್ಲಿ ದೊರಕಿದ ಮಾಹಿತಿ (23ಜೂನ್2008)
6. ಡಾ। ಕೆ.ವಿ.ರಮೇಶ್, ತುಳುನಾಡಿನ ಇತಿಹಾಸ, ಗೀತಾ ಬುಕ್‌ಹೌಸ್, ಮೈಸೂರು 1969 ಪುಟ 101
7. ಡಾ। ವಹ್ಹಾಬ್ ದೊಡ್ಡಮನಿ, ಧಾರ್ಮಿಕ ಸಾಮರಸ್ಯ '*ಪೊಲಿ (ಸಂ) ಕೆನರಾ 200*' ಬ್ಯಾರಿ ಬೆಳೆದು ಬಂದ ದಾರಿ, ಜಿಲ್ಲಾಧಿಕಾರಿ, ಮಂಗಳೂರು 2000, ಪು. 294–295
8. ಡಾ। ವಹ್ಹಾಬ್ ದೊಡ್ಡಮನಿ, '*ತುಳುನಾಡ ಮುಸ್ಲಿಮರು*' ಗ್ರೀನ್ ವರ್ಡ್ಸ್ ಮಂಗಳೂರು 2008 ಪು. 37
9. ಡಾ। ಅಮೃತ್ ಸೋಮೇಶ್ವರ, *ಉಳ್ಳಾಲ ಇತಿಆದಿ(ಸಂ)*, ಉಳ್ಳಾಲ ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪು. 73
10. ಡಾ। ವಹಾಬ್ ದೊಡ್ಡಮನಿ *ಉಳ್ಳಾಲ ಇತಿಆದಿ (ಸಂ)*, ಉಳ್ಳಾಲ ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪು. 28–32
11. ಬಿ.ಎಂ. ಇಚ್ಲಂಗೋಡು ಅವರ ಸಂದರ್ಶನದಲ್ಲಿ ದೊರಕಿದ ಮಾಹಿತಿ, ಮೇ 20 2008.
12. ಡಾ। ವಹಾಬ್ ದೊಡ್ಡಮನಿ *ತುಳುನಾಡ ಮುಸ್ಲಿಮರು*, ಗ್ರೀನ್ ವರ್ಡ್ಸ್ ಮಂಗಳೂರು 2008 ಪುಟ 131–133
13. ಅದೇ, ಪುಟ 136

14. ಕೆ. ಪಿ. ಚಂದ್ರ, ಅಧ್ಯಾಪಕರು ಆನಂದಾಶ್ರಮ ಹೈಸ್ಕೂಲ್ ಉಳ್ಳಾಲ, ವಾಸುದೇವರಾವ್, ಭಾಸ್ಕರ್ ಅಧ್ಯಾಪಕರುಗಳು ಭಾರತ್ ಹೈಸ್ಕೂಲ್ ಉಳ್ಳಾಲ – ಇವರೊಂದಿಗೆ ನಡೆಸಿದ ಸಂದರ್ಶನದಲ್ಲಿ ಸಂಗ್ರಹಿಸಿದ ಮಾಹಿತಿ(22 ಜೂನ್2008)

15. ಪಟ್ಟಾಂಬಿ ಉಸ್ತಾದ್ ಅರೇಕಳ, ಅವರೊಂದಿಗೆ ನಡೆಸಿದ ಸಂದರ್ಶನದಲ್ಲಿ ದೊರಕಿದ ಮಾಹಿತಿ, 2 ಆಗಸ್ಟ್ 2008.

16. ಉಳ್ಳಾಲ ದರ್ಗಾಕ್ಕೆ ಆಗಮಿಸಿದ ಭಕ್ತರಿಂದ ಪಡೆದ ಮಾಹಿತಿ (24 ಜೂನ್2008)

17. ಬಿ. ಎಂ. ಇದ್ದಿನಬ್ಬ, ಕವಿ ಹಾಗೂ ಚಿಂತಕ, ಉಳ್ಳಾಲ, ಅವರೊಂದಿಗೆ ನಡೆಸಿದ ಸಂದರ್ಶನದಲ್ಲಿ ದೊರಕಿದ ಮಾಹಿತಿ, 2ಆಗಸ್ಟ್2008.

18. ಅಲ್–ಮಿಸ್ಬಾಹ್ ಉರೂಸ್ ಸ್ಮರಣ ಸಂಚಿಕೆ–2000, ಸಿರಾಜುಲ್ ಉಲೇಮಾ ವಿದ್ಯಾರ್ಥಿ ಸಂಘ ಎಸ್.ಎಂ.ಎ. ಕಾಲೇಜು ಉಳ್ಳಾಲ, 2000 ಪುಟ 28–30

19. ಡಾ। ಅಮೃತ ಸೋಮೇಶ್ವರ ಅವರೊಂದಿಗೆ ನಡೆಸಿದ ಸಂದರ್ಶನದಲ್ಲಿ ದೊರಕಿದ ಮಾಹಿತಿ(23ಜೂನ್2008)

20. ಡಾ। ವಹ್ಹಾಬ್ ದೊಡ್ಡಮನಿ, *'ತುಳುನಾಡ ಮುಸ್ಲಿಮರು'* ಗ್ರೀನ್ ವರ್ಡ್ಸ್, ಮಂಗಳೂರು 2008 ಪುಟ 197–199

21. ಉಳ್ಳಾಲ ದರ್ಗಾ ಸಮಿತಿಯ ಸದಸ್ಯರನ್ನು ಹಾಗೂ ದರ್ಗಾಕ್ಕೆ ಭೇಟಿ ನೀಡಿದ ಮುಸ್ಲಿಮೇತರ ಭಕ್ತರನ್ನು ಸಂದರ್ಶಿಸಿದಾಗ ದೊರಕಿದ ಮಾಹಿತಿ. (30ಜೂನ್2008)

22. ಸಿ.ಎಸ್. ಹನೀಫ್, ಕಾರ್ಯದರ್ಶಿ ಸಿರಾಜುಲ್ ಹುದಾ ಸಾಹಿತ್ಯ ಸಮಾಜ ಉಳ್ಳಾಲ ಅವರೊಂದಿಗೆ ನಡೆಸಿದ ಸಂದರ್ಶನದಲ್ಲಿ ದೊರಕಿದ ಮಾಹಿತಿ (30ಜೂನ್2008)

23. ದರ್ಗಾ ಕಮಿಟಿಯ ಮ್ಯಾನೇಜರ್ ಅವರನ್ನು ಸಂದರ್ಶಿಸಿದಾಗ ದೊರಕಿದ ಮಾಹಿತಿ. (21ಜೂನ್2008)

24. ಸಾಧುಕುಂಞಿ ನಿವೃತ್ತ ಅಧ್ಯಾಪಕರು, ಭಾರತ್ ಹೈಸ್ಕೂಲ್ ಉಳ್ಳಾಲ ಅವರನ್ನು ಸಂದರ್ಶಿಸಿದಾಗ ದೊರಕಿದ ಮಾಹಿತಿ. (21ಜೂನ್2008)

25. ಡಾ। ಅಮೃತ್ ಸೋಮೇಶ್ವರ, *ಉಳ್ಳಾಲ ಇತಿಆದಿ (ಸಂ)*, ಉಳ್ಳಾಲ ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪು. 78

ಅಧ್ಯಾಯ 5

ಸಾಮಾಜಿಕ ಸೇವೆಯಲ್ಲಿ ದರ್ಗಾದ ಪಾತ್ರ

ಶಿಕ್ಷಣ – ಧಾರ್ಮಿಕ ಶಿಕ್ಷಣ

ಲೌಕಿಕ ಶಿಕ್ಷಣ

ಆರೋಗ್ಯಕ್ಕೆ ದರ್ಗಾದ ಕೊಡುಗೆ

ಸಾರ್ವಜನಿಕ ಕಲ್ಯಾಣ ಕಾರ್ಯಕ್ರಮಗಳು

ಸೈಯ್ಯದ್ ಮದನಿ ದರ್ಗಾ ಸಮಿತಿ ಹಾಗೂ ಆಡಳಿತ ವೈಖರಿ

ಅಧ್ಯಾಯ 5

ಸಾಮಾಜಿಕ ಸೇವೆಯಲ್ಲಿ ದರ್ಗಾದ ಪಾತ್ರ

ಶಿಕ್ಷಣ–ಆರೋಗ್ಯ–ಕಲ್ಯಾಣ ಕಾರ್ಯಕ್ರಮಗಳು
ಧಾರ್ಮಿಕ ಶಿಕ್ಷಣಕ್ಕೆ ದರ್ಗಾದ ಕೊಡುಗೆ
ಸೈಯದ್ ಮದನಿ ಅರೇಬಿಕ್ ಎಜ್ಯುಕೇಶನ್ ಟ್ರಸ್ಟ್

1986ರಲ್ಲಿ ಈ ಟ್ರಸ್ಟ್ ಸ್ಥಾಪನೆಗೊಂಡಿತು. ಧಾರ್ಮಿಕ ವಿದ್ಯಾಭ್ಯಾಸ ಮತ್ತು ಜನ ಕಲ್ಯಾಣಕ್ಕಾಗಿ ಈ ಟ್ರಸ್ಟ್ ರಚಿಸಲ್ಪಟ್ಟಿದೆ. ಇದರ ಆಡಳಿದಲ್ಲಿ ಒಂದು ಅರೇಬಿಕ್ ಕಾಲೇಜು, 10 ಜಮಾಅತ್ ಇರುವ ಮಸೀದಿಗಳು (ಶುಕ್ರವಾರದ ನಮಾಜ್ ನಡೆಸುವ ಮಸೀದಿಗಳು) 18 ಇತರ ಮಸೀದಿಗಳು, 27 ಮದರಸ ವಿದ್ಯಾಲಯಗಳು ಕಾರ್ಯಾಚರಿಸುತ್ತದೆ. ದರ್ಗಾಕ್ಕೆ ಬರುವ ಆದಾಯದಲ್ಲಿ ಶೇಕಡಾ 40 ರಷ್ಟು ಈ ಟ್ರಸ್ಟ್‌ಗೆ ಸಂದಾಯವಾಗುತ್ತದೆ.

ಈ ಟ್ರಸ್ಟ್‌ನ ಕೈ ಕೆಳಗೆ ಬರುವ ಪ್ರಮುಖ ಸಂಸ್ಥೆಗಳು

ಸೈಯ್ಯದ್ ಮದನ್ ಅರೇಬಿಕ್ ಕಾಲೇಜ್

ಸೈಯ್ಯದ್ ಮದನಿ ಅರೆಬಿಕ್ ಕಾಲೇಜು 1971ರಲ್ಲಿ ಆರಂಭವಾಯಿತು. ಇಲ್ಲಿ ಅರೇಬಿಕ್ ಸಾಹಿತ್ಯ ಹಾಗೂ ಅರೇಬಿಕ್ ಬಾಷೆ, ಸಂಸ್ಕೃತಿಯಲ್ಲಿ ಪರಿಣಿತ ಅಧ್ಯಾಪಕರುಗಳನ್ನು ತರಬೇತುಗೊಳಿಸಲಾಗುವುದು. ಈ ಕಾಲೇಜಿನ ಮುಖ್ಯ ಉದ್ದೇಶ ಧಾರ್ಮಿಕ ಭೋಧನೆಗಳನ್ನು ನೀಡಲು ಕೊರತೆ ಇರುವ ಅರೇಬಿಕ್ ಅಧ್ಯಾಪಕರುಗಳನ್ನು ಹಾಗೂ ಉಲೆಮಾಗಳನ್ನು ನೀಗಿಸುವುದಾಗಿದೆ. ಈ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಒಬ್ಬರು ಹಾಗೂ 6 ಮಂದಿ ಉಪನ್ಯಾಸಕರು ಉನ್ನತ ವಿದ್ಯಾಭ್ಯಾಸವನ್ನು ವಿದ್ಯಾರ್ಥಿಗಳಿಗೆ ನೀಡುತ್ತಿದ್ದಾರೆ. ವರ್ಷಂಪ್ರತೀ 50ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು 'ಮದನಿ' ಮುಕ್ತಸರ್ ಸನದು (ಎಂಎಫ್‌ಎಂ ಅಥವಾ ಮೌಲವಿ ಫಾಸಿಲ್ ಮದನಿ) ಮುತವ್ವಲ್ ಸನದು ಮತ್ತು ತಕ್ಮೀರ್ ಪದವಿಯನ್ನು ಪಡೆದು ನಾಡಿನ ಮೂಲೆ ಮೂಲೆಗಳಲ್ಲಿ ಧಾರ್ಮಿಕ ಬೋಧಕರಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. 1971ರಲ್ಲಿ 56 ವಿದ್ಯಾರ್ಥಿಗಳಿಂದ ಆರಂಭಗೊಂಡ ಈ ಕಾಲೇಜು ಹಂತ ಹಂತವಾಗಿ ಬೆಳೆದು ವಿದ್ಯಾರ್ಥಿಗಳಿಗೆ ಜಿಲ್ಲೆಯಲ್ಲಿ ಅಗತ್ಯವಿರುವ ಅರೇಬಿಕ್ ವಿದ್ಯಾಭ್ಯಾಸವನ್ನು ನೀಡುವಲ್ಲಿ ಯಶಸ್ವಿಯಾಗಿದೆ. ಸನದು ದಾನ ಸಮಾರಂಭವು ಬಹಳ ವಿಜೃಂಭಣೆಯಿಂದ ಜರಗುತ್ತದೆ. ಸಮಾರಂಭಕ್ಕೆ ಹೆಸರಾಂತ ಧಾರ್ಮಿಕ

ಪಂಡಿತರು, ರಾಜಕೀಯ ನಾಯಕರು, ಹಾಗೂ ಅನೇಕ ಗಣ್ಯ ವ್ಯಕ್ತಿಗಳು ಪಾಲ್ಗೊಳ್ಳುತ್ತಾರೆ. ಈ ಸಮಾರಂಭಕ್ಕೆ ತಗಲುವ ವೆಚ್ಚವನ್ನು ಟ್ರಸ್ಟ್ ಭರಿಸುತ್ತದೆ. 1

ಪ್ರಸಕ್ತ 200 ವಿದ್ಯಾರ್ಥಿಗಳು ಈ ಕಾಲೇಜಿನಲ್ಲಿ ಕೇರಳ, ತಮಿಳುನಾಡು, ಆಂಧ್ರಪ್ರದೇಶ ಹಾಗೂ ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಬಂದು ಕಲಿಯುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಉಚಿತ ಊಟ, ಔಷಧಿ ಮತ್ತು ವಸತಿ ವ್ಯವಸ್ಥೆ ದರ್ಗಾದ ಅರೇಬಿಕ್ ಎಜ್ಯುಕೇಶನ್ ಟ್ರಸ್ಟ್ ವತಿಯಿಂದ ನೀಡಲಾಗುತ್ತದೆ. ಅವರಿಗಾಗಿಯೇ ಒಂದು ಸುಸಜ್ಜಿತ ಹಾಸ್ಟೆಲ್ ಮತ್ತು ಕ್ಯಾಂಟೀನ್‌ಗಳಿವೆ. ಇದುವರೆಗೆ ಎರಡು ಸಾವಿರದಷ್ಟು ವಿದ್ಯಾರ್ಥಿಗಳು ಎಂ.ಎಫ್.ಎಂ. ಪದವಿಯನ್ನು ಈ ಸಂಸ್ಥೆಯಿಂದ ಪಡೆದುಕೊಂಡಿದ್ದಾರೆ. 1973ರಲ್ಲಿ ಈ ಗ್ರಂಥಾಲಯದಲ್ಲಿ ಸುಮಾರು 1000 ಪುಸ್ತಕಗಳಿದ್ದು ಪ್ರಸಕ್ತ 3000ಕ್ಕಿಂತಲೂ ಅಧಿಕ ಪುಸ್ತಕಗಳಿವೆ. ಇದರಲ್ಲಿ ಭಾರತದ ಒಳ ಹೊರಗಿನ ಅನೇಕ ನಿಯತಕಾಲಿಕಗಳು, ಇಸ್ಲಾಮಿ ಪುಸ್ತಕಗಳು ಹಾಗೂ ಭಾಷೆ, ವಿಜ್ಞಾನ, ಸಾಹಿತ್ಯ, ಸಾಮಾನ್ಯ ಜ್ಞಾನಗಳ ಕೃತಿಗಳು, ಅರಬ್ಬೀ, ಕನ್ನಡ, ಮಲೆಯಾಳಂ ಹಾಗೂ ಉರ್ದು ಭಾಷೆಗಳಲ್ಲಿ ಇಲ್ಲಿ ಲಭ್ಯವಿದೆ. ವಿದ್ಯಾರ್ಥಿಗಳ ಅವಶ್ಯಕತೆಗಾಗಿ 'ಮಿನಿ ಪೋಸ್ಟಲ್' ವ್ಯವಸ್ಥೆಯನ್ನು ಸಂಘಟನೆ ಮಾಡಿದೆ.

ಸಿರಾಜುಲ್ ಉಲೆಮಾ ಸಂಘಟನೆ

ಸೈಯ್ಯದ್ ಮದನಿ ಅರೇಬಿಕ್ ಕಾಲೇಜಿನಲ್ಲಿ 1980ರ ದಶಕದಲ್ಲಿ ಸಿರಾಜುಲ್ ಉಲೆಮಾ ಎಂಬ ಸಂಘಟನೆ ರೂಪುಗೊಂಡಿತು. ಇದರ ಮೂಲಕ ಸುಪ್ತ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಭಾಷಣ, ಚರ್ಚೆ, ಲೇಖನ ಮುಂತಾದ ಕಲೆಗಳಲ್ಲಿ ಪರಿಣಾಮಕಾರಿಯಾಗಿ ನಿರ್ವಹಣೆ ನೀಡಲು ತರಬೇತು ನೀಡಲಾಗುತ್ತಿತ್ತು. 'ಸ್ಪೀಕರ್ಸ್ ಫಾರಂ' ಎಂಬ ವೇದಿಕೆಯನ್ನು ಭಾಷಣ ಪ್ರಾವೀಣ್ಯತೆಗಾಗಿ ನಿರ್ಮಿಸಲಾಗಿದ್ದು ಸಮಕಾಲೀನ ವಿಷಯಗಳಲ್ಲಿ, ಧಾರ್ಮಿಕ ವಿಷಯಗಳಲ್ಲಿ, ಪ್ರಬಂಧ ಮಂಡಿಸಿ ಟೀಕೆ ವಿಮರ್ಶೆಗಳೊಂದಿಗೆ ಮಲೆಯಾಳಂ ಹಾಗೂ ಕನ್ನಡ ಭಾಷೆಗಳಲ್ಲಿ ತರಬೇತು ಕಾರ್ಯಕ್ರಮವನ್ನು ಈ ಸಂಘಟನೆ ಏರ್ಪಡಿಸಿದೆ. ಇತ್ತೀಚೆಗೆ ಸಿರಾಜುಲ್ ಉಲೆಮಾ ಸಂಘಟನೆ ಮದನೀಸ್ ಸಂಘಟನೆಯಾಗಿ ಮಾರ್ಪಾಟುಗೊಂಡಿದೆ.

ಸೈಯದ್ ಮದನಿ ಕನ್ನಡ ಸಾಹಿತ್ಯ ವೇದಿಕೆ

ಸಿರಾಜುಲ್ ಉಲಾಮದ ಆಶ್ರಯದಲ್ಲಿ 1996ರಲ್ಲಿ ಕನ್ನಡ ಸಾಹಿತ್ಯ ವೇದಿಕೆಯು ಆರಂಭಗೊಂಡಿತು. ಇಸ್ಲಾಮೀ ಆಶಯವನ್ನು ಕನ್ನಡದಲ್ಲಿ ಸಮಗ್ರವಾಗಿ ವಿವರಿಸುವ ಪಕ್ವತೆಯನ್ನು ಪಡೆಯುವುದು ಮತ್ತು ಪಸರಿಸುವುದು ಈ ವೇದಿಕೆಯ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ದರ್ಗಾದ ಅರೇಬಿಕ್ ಕಾಲೇಜಿನಲ್ಲಿ ವ್ಯಾಸಾಂಗ ಮಾಡುತ್ತಿರುವ ಕನ್ನಡ ನಾಡಿನ ವಿದ್ಯಾರ್ಥಿಗಳು ಕನ್ನಡ ಭಾಷೆಯಲ್ಲಿ ಲೇಖನ, ಪ್ರಬಂಧ, ಭಾಷಣ, ಮುಂತಾದವುಗಳಿಂದ ಧಾರ್ಮಿಕ, ಸಾಮಾಜಿಕ, ವಿಷಯಗಳನ್ನು ಕಲಿಯುವುದು ಮತ್ತು

ಕಲಿಸುವುದನ್ನು ಈ ವೇದಿಕೆಯಡಿಯಲ್ಲಿ ನಿರ್ವಹಿಸಲಾಗುತ್ತಿದೆ. ಮೇಲಿನ ವಿಷಯಗಳಲ್ಲಿ ಪ್ರಾವೀಣ್ಯತೆಯನ್ನು ಪಡೆಯುವ ಸಲುವಾಗಿ ಸದಸ್ಯರನ್ನು 3 ವಿಭಾಗಗಳಾಗಿ ವಿಂಗಡಿಸಿ ಕನ್ವೀನರ್‌ಗಳ ಮೂಲಕ ಪ್ರತೀ ವಾರ ತರಬೇತಿ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ. ವಿದ್ಯಾರ್ಥಿಗಳ ಅಭ್ಯುದಯಕ್ಕೆ ಅವಶ್ಯಕವಾದ ಕಂಪ್ಯೂಟರ್ ಶಿಕ್ಷಣವನ್ನು ಇತ್ತೀಚೆಗೆ ಈ ವೇದಿಕೆಯ ಅಡಿಯಲ್ಲಿ ಆರಂಭಿಸಲಾಗಿದೆ. ಈ ವೇದಿಕೆಯ ಕೈ ಕೆಳಗೆ ಪಳಗಿದ ಹಲವಾರು ಪ್ರಬುದ್ಧ ಲೇಖಕರು, ಉನ್ನತ ಭಾಷಣಕಾರರು, ಕನ್ನಡದಲ್ಲಿ ಖ್ಯಾತ ವಾಗ್ಮಿಗಳಾಗಿ, ಬರಹಗಾರರಾಗಿ, ದಕ್ಷಿಣ ಕನ್ನಡದ ಬೇರೆ ಬೇರೆ ಕಡೆಗಳಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಅರೇಬಿಕ್ ಸಾಹಿತ್ಯ ವೇದಿಕೆಯ ವತಿಯಿಂದ ಹಲವಾರು ಧಾರ್ಮಿಕ ಕೃತಿಗಳು, ವಾರ್ಷಿಕ ಸಂಚಿಕೆಗಳು ಬಿಡುಗಡೆಗೊಳ್ಳುತ್ತಿದ್ದು ಕನ್ನಡ ಸಾಹಿತ್ಯಕ್ಕೆ ದರ್ಗಾದಿಂದ ಸಲ್ಲುತ್ತಿರುವ ಕಿರು ಕೊಡುಗೆಯಾಗಿದೆ.

ಮದನೀಸ್ ಸಂಘಟನೆ

1971ರಿಂದಲೇ ಸಾವಿರಾರು (ಎಮ್.ಎಫ್.ಎಮ್) ಮೌಲವಿ ಫಾಝಿಲ್ ಮದನಿ ಪದವಿ ಪಡೆದು ಇಲ್ಲಿಂದ ಹೊರಬಂದು ನಾನಾ ಕಡೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪಂಡಿತರಿಂದ ಹಾಗೂ ವಿದ್ಯಾರ್ಜನೆ ನಿರತರಾಗಿರುವ ವಿದ್ಯಾರ್ಥಿಗಳಿಂದ ಈ ಸಂಘಟನೆಯು ಕ್ರಿ. ಶ. 2000ರಲ್ಲಿ ಪ್ರಾರಂಭಗೊಂಡಿತು. ಹಲವಾರು ಧಾರ್ಮಿಕ ಕಾರ್ಯಕ್ರಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಈ ಸಂಘಟನೆ ಕ್ರಿ. ಶ. 2000ದಲ್ಲಿ ಸುನ್ನಿ ಸಮ್ಮೇಳನ, ಮೊಹಲ್ಲಾ ಮಟ್ಟದಲ್ಲಿ ಧಾರ್ಮಿಕ ಜ್ಞಾನ ಪ್ರಸಾರ,ಸಾಮಾಜಿಕ ಪರಿವರ್ತನೆಯಲ್ಲಿ ತೊಡಗಿಸಿಕೊಳ್ಳುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ. ಈ ಸಂಘಟನೆಯ ಮೇಲ್ನೋಟವನ್ನು ದರ್ಗಾ ಸಮಿತಿಯು ನೋಡಿಕೊಳ್ಳುತ್ತಿದ್ದು, ದರ್ಗಾ ಸಮಿತಿಯ ಸಹಕಾರದೊಂದಿಗೆ ಒಂದು ಬೃಹತ್ ಗ್ರಂಥಾಲಯವನ್ನು ಸ್ಥಾಪಿಸುವುದು ಇದರ ಪ್ರಮುಖ ಉದ್ದೇಶವಾಗಿದ್ದು, ಅಧ್ಯಯನಗಳ ಹಾಗೂ ವಿವಿಧ ವಿಷಯಗಳ ಮೇಲೆ ಪ್ರಬಂಧ, ಲೇಖನ ಬರೆಯುವ ವ್ಯವಸ್ಥೆಯನ್ನು ಕಲ್ಪಿಸುವ ನಿಟ್ಟಿನಲ್ಲಿ ಈ ಸಂಘಟನೆ ಕಾರ್ಯ ನಿರ್ವಹಿಸುತ್ತಿದೆ.

ಗ್ರಂಥ ಭಂಡಾರ

ವಿದ್ಯಾರ್ಥಿಗಳು ಓದಲು ಮತ್ತು ವಿಕಾಸ ಹೊಂದಲು 'ಸಿರಾಜುಲ್ ಉಲಮಾ' ಸಂಘಟನೆಯು ಪುಸ್ತಕಾಲಯವೊಂದನ್ನು ಸ್ಥಾಪಿಸಿದೆ. 3000ಕ್ಕಿಂತಲೂ ಅಧಿಕ ಪುಸ್ತಕಗಳನ್ನೊಳಗೊಂಡ ಈ ಗಂಥ ಭಂಡಾರದಲ್ಲಿ ಧಾರ್ಮಿಕ, ಭಾಷೆ, ವಿಜ್ಞಾನ, ಸಾಹಿತ್ಯ ಸಾಮಾನ್ಯ ಜ್ಞಾನಗಳ ಕೃತಿಗಳು, ಅರೇಬಿಲಕ್, ಕನ್ನಡ, ಮಲೆಯಾಳಂ ಹಾಗೂ ಉರ್ದು ಭಾಷೆಯಲ್ಲಿ ಲಭ್ಯವಿದೆ. 2

ಆರಾಧನಾ ಕೇಂದ್ರಗಳು ಅಥವಾ ಜುಮ್ಮಾ ಮಸೀದಿಗಳು

ಕೇಂದ್ರ ಜುಮ್ಮಾ ಮಸೀದಿ:- ಇದು ದರ್ಗಾದ ಸಮೀಪದಲ್ಲೇ ಇರುವ ಪುರಾತನ ಮಸೀದಿಯಾಗಿದ್ದು 1985ರಲ್ಲಿ ಪುನನಿರ್ಮಾಣಗೊಂಡಿದೆ.

ಮದನಿ ಮಸೀದಿ:- ಬಹಳ ಕಾಲದ ಹಿಂದೆಯೇ ಇದ್ದ ಈ ಮಸೀದಿಯನ್ನು 1948ರಲ್ಲಿ ಜೀರ್ಣೋದ್ಧಾರ ಮಾಡಲಾಯಿತು.

ಕೋಟೇಪುರ ಜುಮ್ಮಾ ಮಸೀದಿ:- ಇದು ಮತ್ತೊಂದು ಪುರಾತನ ಮಸೀದಿಯಾಗಿದ್ದು 1976ರಲ್ಲಿ ಪುನನಿರ್ಮಾಣ ಮಾಡಲಾಗಿದೆ.

ಮೊಹಿಯುದ್ದೀನ್ ಮಸೀದಿ ಕೋಡಿ:- ಹಜ್ರತ್ ಟಿಪ್ಪು ಸುಲ್ತಾನ್‌ರವರು ಬರುವುದಕ್ಕಿಂತಲೂ ಮೊದಲೇ ಇದ್ದ ಈ ಮಸೀದಿಯನ್ನು 1950ರಲ್ಲಿ ಮತ್ತೆ ಪುನನಿರ್ಮಾಣ ಮಾಡಲಾಯಿತು.

ರಹ್ಮಾನಿಯಾ ಮಸೀದಿ, ಪೇಟೆ:- ಪುರಾತನವಾದ ಈ ಮಸೀದಿಯನ್ನು 1978ರಲ್ಲಿ ಪುನನಿರ್ಮಾಣ ಮಾಡಲಾಯಿತು.

ಮೇಲಂಗಡಿ ಹೊಸ ಮಸೀದಿ:- ಪುದಿಯಪಳ್ಳಿ ಎಂದು ಹೆಸರಿರುವ ಈ ಮಸೀದಿಯನ್ನು 1956ರಲ್ಲಿ ಜೀರ್ಣೋದ್ಧಾರ ಮಾಡಲಾಯಿತು.

ಅಳೇಕಲ ಜುಮ್ಮಾ ಮಸೀದಿ:- ಈ ಮಸೀದಿ ಅಬ್ಬಕ್ಕ ರಾಣಿಯ ಕಾಲದಲ್ಲಿ ನಿರ್ಮಿಸಲ್ಪಟ್ಟಿದ್ದು 1946ರಲ್ಲಿ ಇದರ ಪುನನಿರ್ಮಾಣ ಕಾರ್ಯ ನೆರವೇರಿಸಲಾಯಿತು.

ಮೇಲೆ ಹೇಳಿದ ಎಲ್ಲಾ ಮಸೀದಿಗಳು ಸರಕಾರದ ತಸ್ತೀಕ್ ಪಡೆಯುತ್ತಿವೆ.

ಸಿದ್ದೀಕ್ ಜುಮ್ಮಾ ಮಸೀದಿ, ಮುಕ್ಕಚ್ಚೇರಿ :- ಈ ಮಸೀದಿ 1890ರಲ್ಲಿ ಸ್ಥಾಪನೆಗೊಂಡಿದ್ದು, ಸ್ಥಳಾವಕಾಶದ ಕೊರತೆಯಿಂದಾಗಿ 1987ರಲ್ಲಿ ಮತ್ತೆ ವಿಶಾಲವಾಗಿ ಪುನರ್ ನಿರ್ಮಿಸಲಾಗಿದೆ.

ಬದ್‌ರ್ ಮಸೀದಿ, ಕೋಡಿ:- ಬಹಳ ಹಿಂದೆಯೇ ಇಲ್ಲಿ ಸ್ಥಾಪಿಸಲ್ಪಟ್ಟಿದ್ದ ಈ ಮಸೀದಿ 1906ರಲ್ಲಿ ಪುನರ್ ನಿರ್ಮಾಣಗೊಂಡಿತ್ತು.

ಉಳ್ಳಾಲ ಬೈಲು ಮಸೀದಿ:- ಈ ಮಸೀದಿಯು 1968ರಲ್ಲಿ ಸ್ಥಾಪಿಸಲ್ಪಟ್ಟದ್ದಾಗಿದೆ.

ಆಜಾದ್ ನಗರ ಮಸೀದಿ:- ಇಲ್ಲಿನ ಕಟ್ಟಡವೊಂದರಲ್ಲಿ 1980ರಲ್ಲಿ ಸ್ಥಾಪಿಸಲ್ಪಟ್ಟ ಈ ಮಸೀದಿಯನ್ನು 1989ರಲ್ಲಿ ಸುವ್ಯವಸ್ಥಿತವಾಗಿ ಪುನನಿರ್ಮಾಣಗೆಯ್ಯಲಾಯಿತು.

ಹಳೇಕೋಟೆ ಮಸೀದಿ:– ಈ ಮಸೀದಿ 1973ರಲ್ಲಿ ಸ್ಥಾಪಿಸಲ್ಪಟ್ಟದ್ದಾಗಿದೆ.

ಮಾರ್ಗತ್ತಲ ಮಸೀದಿ:– ಈ ಮಸೀದಿಯನ್ನು 1984ರಲ್ಲಿ ಸ್ಥಾಪಿಸಲಾಯಿತು.

ಮಂಚಿಲ ಮಸೀದಿ:– ಈ ಮಸೀದಿಯನ್ನು 1970ರಲ್ಲಿ ಸ್ಥಾಪಿಸಲಾಯಿತು.

ಕಲ್ಲಾಪು ಜುಮ್ಮಾ ಮಸೀದಿ:– ಈ ಮಸೀದಿಯನ್ನು 1890ರಲ್ಲಿ ನಿರ್ಮಿಸಲಾಗಿದ್ದು 1982ರಲ್ಲಿ ವ್ಯವಸ್ಥಿತ ಮಸೀದಿಯನ್ನಾಗಿ ಪುನನಿರ್ಮಿಸಲಾಯಿತು.

ಪಟ್ಟಲ ಮಸೀದಿ:– ಇಲ್ಲಿ ಹಿಂದಿನಿಂದಲೂ ಇದ್ದ ಹಳೆ ಮಸೀದಿಯನ್ನು 1954ರಲ್ಲಿ ಪುನರ್ ನಿರ್ಮಾಣಗೈಯಲಾಯಿತು.

ಚೆಂಬುಗುಡ್ಡೆ ಜುಮ್ಮಾ ಮಸೀದಿ:– ಈ ಮಸೀದಿಯನ್ನು 1974ರಲ್ಲಿ ಸ್ಥಾಪಿಸಲಾಯಿತು.

ಮದನಿ ನಗರ ಜುಮ್ಮಾ ಮಸೀದಿ:– ಈ ಮಸೀದಿಯನ್ನು 1975ರಲ್ಲಿ ನಿರ್ಮಾಣಗೆಯ್ಯಲಾಯಿತು.

ನೂರಾನಿಯ ಜುಮ್ಮಾ ಮಸೀದಿ, ಕೊಲ್ಯ:– ಈ ಮಸೀದಿಯನ್ನು 1982ರಲ್ಲಿ ಪುನನಿರ್ಮಾಣ ಮಾಡಲಾಯಿತು.

ಕಡಪ್ಪುರ ಜಾರ ಮಸೀದಿ:– ಪುರಾತನ ಮಸೀದಿಯಾಗಿರುವ ಇಲ್ಲಿ ಸೂಫಿ ಸಂತರೊಬ್ಬರ ದರ್ಗಾವು ಇದೆ. 3

ಮದ್ರಸಗಳು

ಮದನಿ ಎಜುಕೇಶನ್ ಟ್ರಸ್ಟ್‌ನಿಂದ 28 ಮದರಸಗಳಲ್ಲಿ ಸುಮಾರ ಎಂಟು ಸಾವಿರದಷ್ಟು ವಿದ್ಯಾರ್ಥಿಗಳು ಪ್ರಾಥಮಿಕ ಅರೇಬಿಕ್ ಧಾರ್ಮಿಕ ಶಿಕ್ಷಣವನ್ನು ಉಚಿತವಾಗಿ ಪಡೆಯುತ್ತಿದ್ದಾರೆ. ಮದರಸ ಅಥವಾ ವಿದ್ಯಾಲಯ ಎಂಬುದು ಪ್ರವಾದಿಯವರ ಕಾಲದಿಂದಲೇ ಅಸ್ತಿತ್ವದಲ್ಲಿದೆ. ಇಸ್ಲಾಂ ಧರ್ಮದ ಪಂಚ ತತ್ತ್ವಗಳನ್ನು ವಿಶ್ವಾಸ ಕಾರ್ಯಗಳನ್ನು ಹಾಗೂ ಕುರ್‌ಆನ್ ಮತ್ತು ಪ್ರವಾದಿಯವರ ಚರ್ಯೆಗಳನ್ನು ಮಾತ್ರವಲ್ಲದೆ ಗತಕಾಲದ ಮಹಾತ್ಮರ ನೈತಿಕ ಮೌಲ್ಯಗಳನ್ನು ಮದರಸಗಳಲ್ಲಿ ಕಲಿಸಲಾಗುವುದು. ಇಲ್ಲಿ ಧಾರ್ಮಿಕ ಶಿಕ್ಷಣವಲ್ಲದೆ ದೇಶಭಕ್ತಿ, ಸೌಹಾರ್ದ, ನೆರೆಹೊರೆಯವರೊಂದಿಗೆ ಪ್ರೀತಿ, ಹಿರಿಯರನ್ನು ಗೌರವಿಸುವುದು, ಕಿರಿಯರನ್ನು ಪ್ರೀತಿಸುವುದು ಮುಂತಾದ ಮೌಲ್ಯಗಳನ್ನು ಕಲಿಸಲಾಗುವುದು. ರಾಷ್ಟ್ರೀಯ ಹಬ್ಬಗಳಾದ ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ ಮತ್ತು ರಾಷ್ಟ್ರಪಿತ ಮಹಾತ್ಮ ಗಾಂಧಿಯ ಜನ್ಮ ದಿನದಂದು ರಜೆ ಸಾರಿ ಮದ್ರಸದಲ್ಲಿ ಅವುಗಳ ಮಹತ್ವವನ್ನು ಮಕ್ಕಳಿಗೆ ಬೋಧಿಸಲಾಗುವುದು. ಪ್ರತೀ ಮದ್ರಸದಲ್ಲೂ ಧ್ವಜಾರೋಹಣ, ಧ್ವಜ ವಂದನೆ ನಡೆಸಲಾಗುವುದು. ಸುನ್ನಿ

ವಿದ್ಯಾಭ್ಯಾಸ ಬೋರ್ಡಿನ ಪಠ್ಯಕ್ರಮದ ಪ್ರಕಾರ ಈ ಮದ್ರಸಗಳಲ್ಲಿ ಧಾರ್ಮಿಕ ಶಿಕ್ಷಣಗಳನ್ನು ನೀಡಲಾಗುತ್ತಿದೆ. ಪ್ರಾಥಮಿಕ ಹಂತದಿಂದ ಹಿಡಿದು 12ನೇ ತರಗತಿಯವರೆಗೂ ಕ್ಲಾಸ್‌ಗಳು ನಡೆಯುತ್ತದೆ. ಅರೇಬಿಕ್ ಭಾಷೆಯ ಜ್ಞಾನವರ್ಧನೆ, ಧಾರ್ಮಿಕ, ನೈತಿಕ ಮೌಲ್ಯಗಳ ಅಧ್ಯಯನವನ್ನು ಹೇಳಿಕೊಡಲಾಗುತ್ತದೆ. ಐದನೇ ಕ್ಲಾಸ್, ಏಳನೇ ಕ್ಲಾಸ್, ಹತ್ತನೇ ಕ್ಲಾಸ್ ಮತ್ತು ಹನ್ನರಡನೆಯ ಕ್ಲಾಸ್‌ಗಳಿಗೆ ಪಬ್ಲಿಕ್ ಪರೀಕ್ಷೆ ವಾರ್ಷಿಕವಾಗಿ ನಡೆಯುತ್ತದೆ. ಈ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟ್‌ಗಳನ್ನು ವಿತರಿಸಲಾಗುವುದು. ಉಳಿದ ತರಗತಿಗಳಲ್ಲಿ ಸಾಮಾನ್ಯ ಪರೀಕ್ಷೆಗಳನ್ನು ನಡೆಸಲಾಗುವುದು. ತರಗತಿಗಳ ಎಲ್ಲಾ ಅಧ್ಯಾಪಕರುಗಳಿಗೆ (ಮುಅಲ್ಲಿಂ) ಮತ್ತು ಅರೇಬಿಕ್ ಕಾಲೇಜು ವಿದ್ಯಾರ್ಥಿಗಳಿಗೆ ಮದರಸ ಶಿಕ್ಷಣ ತರಬೇತಿ ಕ್ಲಾಸುಗಳನ್ನು ವರ್ಷಂಪ್ರತಿ ನಡೆಸಲಾಗುತ್ತದೆ. ಈ ಮದ್ರಸಗಳಲ್ಲಿ ಕನ್ನಡದಲ್ಲೇ ಪಾಠ ಪ್ರವಚನ ನಡೆಯುತ್ತಿರುವುದು ಒಂದು ವೈಶಿಷ್ಟ್ಯವಾಗಿದೆ.

ಉಳ್ಳಾಲದ ಕೋಟೆಪುರ, ಕೋಡಿ, ಪೇಟೆ, ಕೈಕೋ, ಖಿಳ್ರಿಯಾ ನಗರ, ಮುಕ್ಕಚ್ಚೇರಿ, ಅಝಾದ್ ನಗರ, ಮೇಲಂಗಡಿ, ಅಕ್ಕರೆಕೆರೆ, ಹಳೇಕೋಟೆ, ಅಳೇಕಲ್, ಮಾರ್ಗತಲೆ, ಮಂಚಿಲ, ಕಲ್ಲಾಪು, ಪಟ್ಲ, ಚೆಂಬುಗುಡ್ಡೆ, ಪಿಲಾರ್, ಮದನಿನಗರ, ಕುಂಪಲ, ದಾರಂದ ಬಾಗಿಲು, ಸುಂದರಿಬಾಗ್, ತೋಟ, ಕಡಪರ, ಕೋಡಿ, ಕೋಟೆಪುರ ಶಾಖೆ, ಮುಂತಾದ ಮದ್ರಸಗಳು ದರ್ಗಾ ಅರೇಬಿಕ್ ಟ್ರಸ್ಟ್‌ನಡಿಯಲ್ಲಿ ಧಾರ್ಮಿಕ ಶಿಕ್ಷಣದ ಸೇವೆಯನ್ನು ನೀಡುತ್ತಿದೆ. 4

ಅರೇಬಿಕ್ ಕಾಲೇಜ್‌ನ ಪ್ರಾಂಶುಪಾಲರಿಗೆ, ಉಪನ್ಯಾಸಕರುಗಳಿಗೆ, ಬೇರೆ ಬೇರೆ ಮಸೀದಿಗಳು ಖತೀಬರುಗಳಿಗೆ ಮಸೀದಿಯಲ್ಲಿ (ನಮಾಜಿನ ನೇತೃತ್ವ ವಹಿಸುವವರು ಮತ್ತು ಶುಕ್ರವಾರದಂದು ಖುತ್ಬಾ ಪಾರಾಯಣ ಮಾಡುವವರು) ಮುಅದ್ದೀನ್‌ರ (ನಮಾಜಿನ ಆಯಾ ಸಮಯದಲ್ಲಿ ಬಾಂಗ್ ಯಾ ಕರೆ ಕೊಡುವವರು ಮತ್ತು ಮಸೀದಿಯ ಶುಚಿತ್ವ ನೋಡಿಕೊಳ್ಳುವವರು) ಎಲ್ಲಾ ಅರೇಬಿಕ್ ಮದ್ರಸಗಳ ಸದರ್‌ಗಳ (ಹೆಡ್‌ಮಾಸ್ಟರ್) ಮತ್ತು ಮುಅಲ್ಲಿಂಗಳು (ಅಧ್ಯಾಪಕರು) ಸಂಬಳ, ವಸತಿ ವ್ಯವಸ್ಥೆಯ ಖರ್ಚನ್ನು ದರ್ಗಾ ಸಮಿತಿ ವತಿಯಿಂದಲೇ ಭರಿಸಲಾಗುತ್ತದೆ. ಸುಮಾರು 120ರಷ್ಟು ಮಂದಿ ನುರಿತ ಅಧ್ಯಾಪಕರುಗಳು ಬೇರೆ ಬೇರೆ ಮದ್ರಸಾಗಳಲ್ಲಿ ಪಾಠ ಕಲಿಸುತ್ತಾರೆ. ಈ ಅಧ್ಯಾಪಕರುಗಳಿಗೆ ಊಟ, ಉಪಚಾರಗಳನ್ನು ಮೊಹಲ್ಲಾದವರ ಸಹಕಾರದಿಂದ ನೀಡಲಾಗುವುದು. ಮದ್ರಸಾಗಳಿಗೆ ಬರುವ ಮಕ್ಕಳಿಗೆ ಪ್ರತಿ ವರ್ಷವೂ ಸುಮಾರು 2 ಲಕ್ಷ ರೂಪಾಯಿಗಳಷ್ಟು ವ್ಯಯಿಸಿ ಪುಸ್ತಕಗಳನ್ನು, ಪೀಠೋಪಕರಣಗಳನ್ನು ಪೂರೈಸಲಾಗುತ್ತದೆ. ಈ ಮದ್ರಸಗಳಲ್ಲಿ ಅರೇಬಿಕ್ ಭಾಷೆಯಲ್ಲಿರುವ ಪಾಠಗಳನ್ನು ಕನ್ನಡದಲ್ಲೇ ಕಲಿಸುವುದು ವಿಶೇಷವಾಗಿದೆ. ಈ ಮದ್ರಸಗಳ ನಿಯಂತ್ರಣಕ್ಕೆ ಓರ್ವ ಪರೀಕ್ಷಕರನ್ನು (ಮುಫತ್ತಿಶ್‌ರನ್ನು) 1991ರಲ್ಲಿ ನೇಮಿಸಲಾಗಿದ್ದು ಇಂದಿಗೂ ಇದು ಜಾರಿಯಲ್ಲಿದೆ. 5

ಲೌಕಿಕ ಶಿಕ್ಷಣಕ್ಕೆ ದರ್ಗಾದ ಕೊಡುಗೆ

ಸೆಯ್ಯದ್ ಮದನಿ ಚಾರಿಟೇಬಲ್ ಟ್ರಸ್ಟ್ :- ಇದು 1982ನೇ ಇಸವಿಯಲ್ಲಿ ಸ್ಥಾಪನೆಗೊಂಡಿದ್ದು ಇದರ ಅಧೀನದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳ ಕಾರ್ಯಾಚರಿಸುತ್ತಿದೆ.

ಟಿಪ್ಪು ಸುಲ್ತಾನ್ ಪದವಿ ಕಾಲೇಜು:- 200 ವಿದ್ಯಾರ್ಥಿಗಳಿರುವ ಪದವಿ ಕಾಲೇಜಿನಲ್ಲಿ ಬಿ. ಬಿ. ಎಂ., ಬಿ. ಕಾಂ., ಮತ್ತು ಬಿ. ಎ. ಕೋರ್ಸ್‌ಗಳಲ್ಲಿ ಅಧ್ಯಯನ ನಡೆಸುತ್ತಿದ್ದು ಒಬ್ಬರು ಪ್ರಾಂಶುಪಾಲರು ಮತ್ತು 24 ಮಂದಿ ಬೋಧಕ ಬೋಧಕೇತರ ಸಿಬ್ಬಂದಿಗಳಿದ್ದಾರೆ. ಕಾಲೇಜನ್ನು ನೋಡಿಕೊಳ್ಳಲು 9 ಮಂದಿ ಗವರ್ನಿಂಗ್ ಕೌನ್ಸಿಲ್ ಸದಸ್ಯರಿದ್ದಾರೆ.

ಟಿಪ್ಪು ಸುಲ್ತಾನ್ ಪದವಿ ಪೂರ್ವ ಕಾಲೇಜು:- ಇಲ್ಲಿ ಕಲಾ, ವಿಜ್ಞಾನ, ವಾಣಿಜ್ಯ ಮತ್ತು ಲ್ಯಾಬೋರೇಟರಿ ಟೆಕ್ನೀಷಿಯನ್ ಕೋರ್ಸ್‌ಗಳಿವೆ. ಸುಸಜ್ಜಿತ ಲ್ಯಾಬೋರೇಟರಿಯ ವ್ಯವಸ್ಥೆ ಇರುವ ಕಾಲೇಜಿನಲ್ಲಿ 350ರಿಂದ 400ರಷ್ಟು ವಿದ್ಯಾರ್ಥಿಗಳಿದ್ದಾರೆ. ಒಬ್ಬ ಪ್ರಾಂಶುಪಾಲ ಮತ್ತು 18 ಬೋಧಕ ಸಿಬ್ಬಂದಿಗಳು ಈ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಸೈಯದ್ ಮದನಿ ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರ್:- ಮುಸ್ಲಿಂ ಸಮುದಾಯದಲ್ಲಿ ತಾಂತ್ರಿಕ ವಿದ್ಯಾಭ್ಯಾಸದ ಅವಶ್ಯಕತೆಯನ್ನು ಪರಿಗಣಿಸಿ ಸೈಯ್ಯದ್ ಮದನಿ ಮೇನೆಜ್‌ಮೆಂಟ್ ಇಂಡಸ್ಟ್ರೀಯಲ್ ಟ್ರೈನಿಂಗ್ ಸೆಂಟರನ್ನು ಉಳ್ಳಾಲದಲ್ಲಿ ಆರಂಭಿಸಲು ತೀರ್ಮಾನಿಸಲಾಯಿತು. 1983ರಲ್ಲಿ ಆರಂಭವಾದ ಐಟಿಸಿಯಲ್ಲಿ 2 ವರ್ಷಗಳ ಮೂರು ಕೋರ್ಸ್‌ಗಳನ್ನು ನೀಡಲಾಗುತ್ತಿತ್ತು. ಪ್ರಸಕ್ತ 200ರಷ್ಟು ವಿದ್ಯಾರ್ಥಿಗಳು ಕಲಿಯುತ್ತಿರುವ ಈ ಸಂಸ್ಥೆಯಲ್ಲಿ ಕಾಲದ ಬೇಡಿಕೆಯಂತೆ ಈ ಕೆಳಗಿನ ಕೋರ್ಸ್‌ಗಳನ್ನು ನೀಡಲಾಗುತ್ತಿದೆ.

ಮೆಕ್ಯಾನಿಕಲ್ ರೆಫ್ರಿಜರೇಶನ್ ಮತ್ತು ಏರ್‌ಕಂಡೀಷನ್:- 16 ವಿದ್ಯಾರ್ಥಿಗಳ 2 ತಂಡಗಳಿದ್ದು 2 ವರ್ಷಗಳ ಕೋರ್ಸ್ ಇದಾಗಿರುತ್ತದೆ.

ಇಲೆಕ್ಟ್ರೀಶಿಯನ್:- 16 ವಿದ್ಯಾರ್ಥಿಗಳ 4 ತಂಡಗಳಿದ್ದು ಕೋರ್ಸ್ 2 ವರ್ಷದ್ದಾಗಿರುತ್ತದೆ.

ಮೆಕಾನಿಕಲ್ ಫಿಟ್ಟರ್ಸ್ :- 16 ವಿದ್ಯಾರ್ಥಿಗಳ 2 ತಂಡಗಳಿದ್ದು 2 ವರ್ಷಗಳ ಕೋರ್ಸ್.

ಇಲೆಕ್ಟ್ರಾನಿಕ್ ಮೆಕ್ಯಾನಿಕ್ :- 2ವರ್ಷದ ಕೋರ್ಸಾಗಿದ್ದು 16 ವಿದ್ಯಾರ್ಥಿಗಳ 2 ತಂಡಗಳಿವೆ.

ಡೀಸೆಲ್ ಮೆಕ್ಯಾನಿಕ್:- ಒಂದು ವರ್ಷದ ಕೋರ್ಸಾಗಿದ್ದು 16 ವಿದ್ಯಾರ್ಥಿಗಳ ಒಂದು ತಂಡವಿದೆ.

ಪ್ಲಂಬರ್:- ಒಂದು ವರ್ಷದ ಕೋರ್ಸಾಗಿದ್ದು 16 ವಿದ್ಯಾರ್ಥಿಗಳ ಒಂದು ತಂಡವಿದೆ.

10ನೇ ತರಗತಿ ಪಾಸಾದ ವಿದ್ಯಾರ್ಥಿಗಳಿಗೆ ಈ ಮೇಲಿನ ಎಲ್ಲಾ ಕೋರ್ಸ್‌ಗಳನ್ನು ಕಲಿಯುವ ಅವಕಾಶವಿದ್ದು ಈ ಸಂಸ್ಥೆಯಲ್ಲಿ 20 ಮಂದಿ ಬೋಧಕ ಸಿಬ್ಬಂದಿಗಳಿದ್ದಾರೆ. ರಾಜ್ಯ ಸರ್ಕಾರ ಮತ್ತು ಭಾರತ ರಾಷ್ಟ್ರೀಯ ತರಬೇತಿ ಪರಿಷತ್, ನವದೆಹಲಿ ಇದರ ಸಂಯೋಜನೆ ಪಡೆದಿರುವ ದ. ಕ. ಜಿಲ್ಲೆಯ ಏಕೈಕ ಮುಸ್ಲಿಂ ತಾಂತ್ರಿಕ ಸಂಸ್ಥೆಯಾಗಿದೆ.

ಟಿಪ್ಪುಸುಲ್ತಾನ್ ಪ್ರೌಢಶಾಲೆ ಕೋಟೆಪುರ:- 8ರಿಂದ 10ನೇ ತರಗತಿಯಲ್ಲಿ ಸುಮಾರು 450 ವಿದ್ಯಾರ್ಥಿ, ವಿದ್ಯಾರ್ಥಿನಿಯರು ವಿದ್ಯಾರ್ಜನೆ ಮಾಡುತ್ತಿದ್ದಾರೆ. 10 ಮಂದಿ ಸಿಬ್ಬಂದಿಯವರು ಕಾರ್ಯ ನಿರ್ವಹಿಸುತ್ತಿರುವ ಈ ಶಾಲೆಯ ಉಸ್ತುವಾರಿ 11 ಮಂದಿ ಆಡಳಿತ ಸಮಿತಿಯವರದ್ದಾಗಿದೆ.

ಟಿಪ್ಪು ಸುಲ್ತಾನ್ ಉರ್ದು ಹಿ. ಪ್ರಾ. ಶಾಲೆ ಕೋಟೆಪುರ:- 360ರಷ್ಟು ವಿದ್ಯಾರ್ಥಿಗಳು ಈ ಶಾಲೆಯಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದಾರೆ. ಶಾಲೆಯಲ್ಲಿ ಕಲಿಯುತ್ತಿರುವ ಅರ್ಹ ಬಡ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕಗಳನ್ನು ಒದಗಿಸಲಾಗುತ್ತದೆ. 10 ಮಂದಿ ಸಿಬ್ಬಂದಿಗಳು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸೈಯದ್ ಮದನಿ ಉರ್ದು ಹಿ. ಪ್ರಾ. ಶಾಲೆ ಹಳೆಕೋಟೆ:- ಸುಮಾರು 450 ವಿದ್ಯಾರ್ಥಿಗಳಿರುವ ಈ ಶಾಲೆಯಲ್ಲಿ 12 ಸಿಬ್ಬಂದಿ ವರ್ಗದವರಿದ್ದಾರೆ.

ಸೈಯ್ಯದ್ ಮದನಿ ಹಿ. ಪ್ರಾ. ಶಾಲೆ, ಚೆಂಬುಗುಡ್ಡೆ:- 275 ವಿದ್ಯಾರ್ಥಿಗಳಿದ್ದು 8 ಮಂದಿ ಬೋಧಕರಿದ್ದಾರೆ.

ಸೈಯದ್ ಮದನಿ ಕಿರಿಯ ಪ್ರಾಥಮಿಕ ಶಾಲೆ, ದಾರಂದಬಾಗಿಲು:- ಸುಮಾರು 150 ವಿದ್ಯಾರ್ಥಿಗಳು ಇಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದಾರೆ.

ಸೈಯ್ಯದ್ ಮದನಿ ಕಿರಿಯ ಪ್ರಾಥಮಿಕ ಶಾಲೆ, ಸುಂದರಿಬಾಗ್: ಸುಮಾರು 150 ವಿದ್ಯಾರ್ಥಿಗಳು ಕಲಿಯುತ್ತಿರುವ ಈ ಶಾಲೆಯಲ್ಲಿ 5 ಮಂದಿ ಸಿಬ್ಬಂದಿ ವರ್ಗದವರಿದ್ದಾರೆ.

ಹಜ್ರತ್ ಸೈಯದ್ ಮದನಿ ಆಂಗ್ಲ ಮಾಧ್ಯಮ ಪ್ರೌಢ ಶಾಲೆ: ಆಂಗ್ಲ ಮಾಧ್ಯಮದಲ್ಲಿ ವಿದ್ಯಾಭ್ಯಾಸವನ್ನು ನೀಡುತ್ತಿರುವ ಶಾಲೆಯಲ್ಲಿ ಎಲ್‌ಕೆಜಿಯಿಂದ 10 ನೇ ತರಗತಿಯವರೇಗೆ ವಿದ್ಯಾರ್ಜನೆಗೆಂದು 1000ದಷ್ಟು ವಿದ್ಯಾರ್ಥಿಗಳಿದ್ದಾರೆ. ಇಲ್ಲಿ 61 ಮಂದಿ ಭೋಧಕ ಭೋಧಕೇತರ ಸಿಬ್ಬಂದಿ ವರ್ಗ ಕೆಲಸ ಮಾಡುತ್ತಿದ್ದಾರೆ.

ಹಜ್ರತ್ ಸೈಯದ್ ಮದನಿ ಆಂಗ್ಲ ಮಾಧ್ಯಮ ಹಿ. ಪ್ರಾ. ಶಾಲೆ, ಕಲ್ಲಾಪು: ಪೆರ್ಮನ್ನೂರು ಗ್ರಾಮದ ಈ ಶಾಲೆಯಲ್ಲಿ 150 ವಿದ್ಯಾರ್ಥಿಗಳು ಕಲಿಯುತ್ತಿದ್ದು 10 ಮಂದಿ ಸಿಬ್ಬಂದಿಗಳಿದ್ದಾರೆ.

ಹಜ್ರತ್ ಸೈಯದ್ ಮದನಿ ಗರ್ಲ್ಸ್ ಹೈಸ್ಕೂಲ್: 250 ವಿದ್ಯಾರ್ಥಿನಿಯರು ಇಲ್ಲಿ ವಿದ್ಯಾರ್ಜನೆ ಮಾಡುತ್ತಿದ್ದು 8 ಮಂದಿ ಸಿಬ್ಬಂದಿಗಳು ಸೇವೆಯಲ್ಲಿದ್ದಾರೆ.

ಈ ಮೇಲಿನ ಸಂಸ್ಥೆಗಳಲ್ಲಿ ಟಿಪ್ಪು ಸುಲ್ತಾನ್ ಹಿ. ಪ್ರಾ. ಶಾಲೆ ಕೋಟೆಪುರ, ಸೈಯದ್ ಮದನಿ ಹಿ. ಪ್ರಾ. ಶಾಲೆ, ಹಳೆಕೋಟೆ ಮತ್ತು ತಾಂತ್ರಿಕ ತರಬೇತಿ ಸಂಸ್ಥೆಯ ಕೆಲವು ಸಿಬ್ಬಂದಿ ವರ್ಗವನ್ನು ಹೊರತು ಪಡಿಸಿ ಉಳಿದವರ ಸಂಬಳವನ್ನು ದರ್ಗಾದಲ್ಲಿ ಅಧೀನದಲ್ಲಿ ಬರುವ ಚಾರಿಟೇಬಲ್ ಟ್ರಸ್ಟ್‌ನಿಂದಲೇ ನೀಡಲಾಗುತ್ತಿದೆ. ಆರ್ಥಿಕವಾಗಿ ದೊಡ್ಡ ಹೊರೆಯು ಸಮಿತಿಯ ಮೇಲಿದ್ದರೂ ಮುಸ್ಲಿಂ ಸಮುದಾಯ ಮತ್ತು ಇತರ ಬಡವರಿಗೆ ವಿದ್ಯಾಭ್ಯಾಸ ನೀಡುವ ಏಕೈಕ ಉದ್ದೇಶದಿಂದ ಆಡಳಿತ ಸಮಿತಿಯು ಮೇಲಿನ ಎಲ್ಲಾ ಸಂಸ್ಥೆಗಳನ್ನು ಸಮರ್ಥವಾಗಿ ಮುನ್ನಡೆಸುತ್ತಿರುವುದು ಪ್ರಶಂಸನೀಯ ಅಂಶವಾಗಿದೆ. ಬಡ ಹಾಗೂ ಅರ್ಹ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಟ್ರಸ್ಟ್‌ನ ವತಿಯಿಂದಲೇ ಪೂರೈಸಲಾಗುವುದು. ದೊಡ್ಡ ಮೊತ್ತದ ಆರ್ಥಿಕ ಹೊರೆಯನ್ನು ಈ ಮೇಲಿನ ಸಂಸ್ಥೆಗಳಿಗೆ ಖರ್ಚು ಮಾಡಲಾಗುತ್ತದೆ.

ಇದು ಮಾತ್ರವಲ್ಲದೆ ಸರಕಾರಿ ಉರ್ದು ಎಲಿಮೆಂಟರಿ ಶಾಲೆ ಪಟ್ಟಲ, ಸರಕಾರಿ ಉರ್ದು ಹಿ. ಪ್ರಾ. ಶಾಲೆ, ಮೇಲಂಗಡಿ ಮತ್ತು 12 ಬಾಲವಾಡಿ ಶಾಲೆಗಳ ಸ್ಥಳ, ಕಟ್ಟಡ ಹಾಗೂ ಪೀಠೋಪಕರಣಗಳು ಟ್ರಸ್ಟಿನದ್ದಾಗಿರುತ್ತದೆ. ಅದೇ ರೀತಿ ಅಳೇಕಲ ಸೈಯದ್ ಮದನಿ ಸರಕಾರಿ ಪದವಿ ಪೂರ್ವ ಕಾಲೇಜಿನ ಆಡಳಿತ ಸಮಿತಿಯಲ್ಲಿ ದರ್ಗಾ ಸಮಿತಿಯ ಹೆಚ್ಚಿನ ಸದಸ್ಯರು ಕಾರ್ಯ ನಿರ್ವಹಿಸುತ್ತಿರುವರು. 6

ಹೊಲಿಗೆ ತರಬೇತಿ ಕೇಂದ್ರಗಳು

ಹಿಂದುಳಿದ ಗ್ರಾಮೀಣ ಪ್ರದೇಶವಾದ ಉಳ್ಳಾಲದಲ್ಲಿ ಬೀಡಿ ಕಟ್ಟುವುದು ಸ್ತ್ರೀಯರ ಪ್ರಮುಖ ಕಸುಬಾಗಿದೆ. ಬೀಡಿ ಕಟ್ಟುವ ಕಸುಬಿನಿಂದ ಉಂಟಾದ ತೊಂದರೆಗಳನ್ನು ಮನಗಂಡು ಸೈಯದ್ ಮದನಿ ಚಾರಿಟೇಬಲ್ ಟ್ರಸ್ಟ್ ವಿವಿಧ ವೃತ್ತಿಗಳಲ್ಲಿ ಸ್ತ್ರೀಯರಿಗಾಗಿ ಅಲ್ಪಾವಧಿ ತರಬೇತಿಯನ್ನು ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಅದರಂತೆ ಕೋಟೆಪುರ, ಮೇಲಂಗಡಿ, ಅಳೇಕಲ, ಕಲ್ಲಾಪು, ಕೊಲ್ಯ ಮುಂತಾದ ಕಡೆಗಳಲ್ಲಿ ಮಹಿಳೆಯರಿಗಾಗಿ ಹೊಲಿಗೆ ತರಬೇತಿ ಕೇಂದ್ರವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಾ ಇದೆ. ಮಾತ್ರವಲ್ಲದೆ ಕೈ ಚೀಲ ತಯಾರಿಕೆ, ಸಾಬೂನು, ಮೇಣದ ಬತ್ತಿ ತಯಾರಿಕೆ ಮುಂತಾದ ವೃತ್ತಿಗಳಲ್ಲಿ ಸೂಕ್ತ ತರಬೇತಿಯನ್ನು ನೀಡಲಾಗುತ್ತದೆ.

ದರ್ಗಾದ ವತಿಯಿಂದ ಆರೋಗ್ಯ ಪರ ಯೋಜನೆಗಳು

ಸೈಯ್ಯದ್ ಮದನಿ ಚಾರಿಟೇಬಲ್ ಆಸ್ಪತ್ರೆ:- 1982ರಲ್ಲಿ ನಿರ್ಮಾಣಗೊಂಡ ಈ ಆಸ್ಪತ್ರೆಯಲ್ಲಿ ರೋಗಿಗಳ ಶುಶ್ರೂಷೆಗೆ 40 ಹಾಸಿಗೆಗಳ ವ್ಯವಸ್ಥೆ ಇದೆ. ಆಪರೇಷನ್ ಥಿಯೇಟರ್, ಕ್ಷ-ಕಿರಣ, ಪ್ರಯೋಗಾಲಯ, ಔಷಧಾಲಯ ಮತ್ತು ಹೊರ ರೋಗಿಗಳ ವಾರ್ಡ್ ಮುಂತಾದ ವ್ಯವಸ್ಥೆ ಆರಂಭದಲ್ಲಿ ಈ ಆಸ್ಪತ್ರೆಯಲ್ಲಿತ್ತು. ಕಾಲ ಕ್ರಮೇಣ ರೋಗಿಗಳ ಸಂಖ್ಯೆಯಲ್ಲಿ ಹೆಚ್ಚಳದಿಂದಾಗಿ ಈ ಆಸ್ಪತ್ರೆಯನ್ನು 200 ಹಾಸಿಗೆಯಿರುವ ದೊಡ್ಡ ಆಸ್ಪತ್ರೆಯಾಗಿ ಪುನರ್‌ನಿರ್ಮಾಣಗೊಳಿಸಲಾಯಿತು. ದಂತ ಚಿಕಿತ್ಸೆ, ಎಲುಬು

ಚಿಕಿತ್ಸೆ, ಇಸಿಜಿ, ಶಸ್ತ್ರಚಿಕಿತ್ಸಾ ಕೊಠಡಿ, ಫಾರ್ಮಸಿ, ಲ್ಯಾಬೋರೇಟರಿ ಮತ್ತು ಆಯುರ್ವೇದಿಕ್ ವಿಭಾಗ ಮುಂತಾದ ಸೌಲಭ್ಯಗಳನ್ನು ಪುನರ್‌ನಿರ್ಮಾಣದ ಸಂದರ್ಭದಲ್ಲಿ ಒದಗಿಸಲಾಗಿದೆ. ಸಮೀಪದ ಮಂಗಳೂರಿನಿಂದ ತಜ್ಞ ವೈದ್ಯರ ಸೇವೆಯನ್ನು ತುರ್ತು ಸಂದರ್ಭದಲ್ಲಿ ಒದಗಿಸಲಾಗುವುದು. ಬಡ, ನಿರ್ಗತಿಕ ರೋಗಿಗಳಿಗೆ ಆಸ್ಪತ್ರೆಯಲ್ಲಿ ಉಚಿತ ಸೇವೆಯನ್ನು ನೀಡಲಾಗುತ್ತಿದೆ.

ದೀರ್ಘ ಕಾಲದಿಂದ ಬಳಲುತ್ತಿರುವ ರೋಗಿಗಳ ಶುಶ್ರೂಷೆಗೆ ನೆರವು. ಕ್ಷಯ ಮತ್ತು ಇತರ ಮಾರಕ ರೋಗಗಳಿಗೆ ಔಷಧೋಪಾಚಾರದ ವ್ಯವಸ್ಥೆಗಳನ್ನು ಮಾಡಲಾಗುತ್ತದೆ. ಊರ ಹಾಗೂ ಪರವೂರ ರೋಗಿಗಳಿಗೂ ಈ ಸೌಕರ್ಯವನ್ನು ದರ್ಗಾದ ವತಿಯಿಂದ ನಡೆಸಲ್ಪತ್ತಿರುವ ಆಸ್ಪತ್ರೆಯಲ್ಲಿ ಉಚಿತವಾಗಿಯೇ ನೀಡಲಾಗುವುದು.

ವ್ಯಾಯಾಮ ಶಾಲೆಗಳು:– ಯುವಕರಿಗೆ ದೈಹಿಕ ಶಿಕ್ಷಣ ನೀಡುವ ಉದ್ಧೇಶದಿಂದ ಮತ್ತು ಆರೋಗ್ಯವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಲು ಉಳ್ಳಾಲದ ಕೆಲವು ಕಡೆಗಳಲ್ಲಿ ವ್ಯಾಯಾಮ ಶಾಲೆಗಳನ್ನು ನಡೆಸಲಾಗುತ್ತಿದೆ.

ಸೈಯ್ಯದ್ ಮದನಿ ದರ್ಗಾ ಸಮಿತಿ ವತಿಯಿಂದ ನಡೆಯುತ್ತಿರುವ ಸಾಮಾಜಿಕ ಜನಪರ ಕಾರ್ಯಕ್ರಮಗಳು

1. ಸೈಯದ್ ಮದನಿ ವಿವಿದೋದ್ಧೇಶ ಸಹಕಾರಿ ಸಂಘ 1983ರಲ್ಲಿ ಆರಂಭವಾಗಿದ್ದು ಸುತ್ತ ಮುತ್ತಲಿನ ಬಡವರಿಗೆ ಅವಶ್ಯಕ ದಿನಸಿಗಳನ್ನು ಮಿತದರದಲ್ಲಿ ಪೂರೈಸುತ್ತಿದೆ. ಇದರ ಮೇಲುಸ್ತುವಾರಿಯನ್ನು ಸೈಯದ್ ಮದನಿ ಆಡಳಿತ ಸಮಿತಿ ನೋಡಿಕೊಳ್ಳುತ್ತಿದೆ.

2. ಉಳ್ಳಾಲ ಜಮಾಅತಿನ ತೀರಾ ಬಡ ಕನ್ಯೆಯರ ಮದುವೆಗೆ ಧನಸಹಾಯ:– ಸುಮಾರು 80ರಿಂದ 100ರಷ್ಟು ವಾರ್ಷಿಕವಾಗಿ ನಡೆಯುವ ಬಡವರ ಮದುವೆಗಳಿಗೆ ಪ್ರತಿಯೊಂದಕ್ಕೂ ರೂ. 11,000ದಂತೆ ಆರ್ಥಿಕ ಸಹಾಯ ನೀಡಲಾಗುತ್ತದೆ. ಮಾತ್ರವಲ್ಲದೆ ಪರವೂರ ಬಡ ಹೆಣ್ಣು ಮಕ್ಕಳ ಕಲ್ಯಾಣಕ್ಕೂ ಯೋಗ್ಯತಾನುಸಾರ ಧನ ಸಹಾಯ ಮಾಡಲಾಗುವುದು.

3. ಜಾತಿ ಮತ ಭೇದವಿಲ್ಲದೆ ಎಲ್ಲಾ ಬಡ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ ಮಾಡಲಾಗುವುದು. ಅದೇ ರೀತಿ ಬಡ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಧನ ಸಹಾಯ ಮತ್ತು ವಿದ್ಯಾರ್ಥಿ ವೇತನವನ್ನು ಉತ್ತಮ ರೀತಿಯಲ್ಲಿ ನೀಡಲಾಗುತ್ತದೆ.

4. ಪ್ರಕೃತಿ ವಿಕೋಪದಿಂದ ಸಂತ್ರಸ್ತರಾದವರಿಗೆ ಆರ್ಥಿಕ ಸಹಾಯವನ್ನು ನೀಡಲಾಗುತ್ತದೆ. ಉಳ್ಳಾಲವು ಕಡಲ್ಕೊರೆತದ ಬಲಿ ಪ್ರದೇಶವಾದ್ದರಿಂದ ಇಂಥಹ ಆರ್ಥಿಕ ಸಹಾಯವನ್ನು ಪಡೆದವರು ಹಲವರಿದ್ದಾರೆ.

5. ಅನೀರೀಕ್ಷಿತವಾಗಿ ಸಂಭವಿಸುವ ರಾಷ್ಟ್ರೀಯ ವಿಪತ್ತುಗಳಿಗೆ ಸಹಾಯ ಹಿಂದೆ ನಡೆದಂತಹ ರಾಷ್ಟ್ರೀಯ ವಿಪತ್ತುಗಳಾದ ಗುಜರಾತ್ ಭೂಕಂಪ ಹಾಗೂ ಕಾರ್ಗಿಲ್ ಯುದ್ಧಕ್ಕೆ ಆರ್ಥಿಕ ಸಹಾಯವನ್ನು ದರ್ಗಾದ ವತಿಯಿಂದ ನೀಡಲಾಗಿದೆ.

6. ದರ್ಗಾದ ಅಧೀನದ ತೀರಾ ಒಳ ಮತ್ತು ಹಿಂದುಳಿದ ಪ್ರದೇಶದ ಸಂಚಾರ ರಸ್ತೆಗಳಿಗೆ ಹಾಗೂ ಅದೇ ರೀತಿಯ ಸಣ್ಣ ಪುಟ್ಟ ಕಾಮಗಾರಿಗಳಿಗೆ ಸಹಕಾರವನ್ನು ಒದಗಿಸಲಾಗಿದೆ. ಮಾತ್ರವಲ್ಲದೆ ಸ್ಥಳೀಯ ರಾಜಕೀಯ ಶಾಸಕರು ಮತ್ತು ಉಸ್ತುವಾರಿ ಮಂತ್ರಿಗಳ ಮೂಲಕ ಉಳ್ಳಾಲ ದರ್ಗಾ-ಅಳೇಕಲ ರಸ್ತೆ, ಕೆಳಗಿನ ಪೇಟೆ-ತೊಕ್ಕೊಟ್ಟು-ದರ್ಗಾವರೇಗಿನ ರಸ್ತೆ, ಉರೂಸ್ ಕಾರ್ಯಕ್ರಮದ ಸಂದರ್ಭದಲ್ಲಿ ರಾಜ್ಯ ಸರ್ಕಾರದಿಂದ ರಸ್ತೆ ಡಾಮರೀಕರಣ, ದಾರಿದೀಪ, ಚರಂಡಿ ವ್ಯವಸ್ಥೆ, ಮುಂತಾದ ಜನಪರ ಕಾರ್ಯಗಳನ್ನು ಪೂರ್ತಿಗೊಳಿಸಲಾಗಿದೆ. ಅದೇ ರೀತಿ ವಿವಿಧ ಇಲಾಖೆಗಳಿಂದ ಈ ಮೇಲಿನ ಕಾಮಗಾರಿಗಳನ್ನು ಪೂರೈಸಲು ಆರ್ಥಿಕ ಅನುದಾನವನ್ನು ಪಡೆಯಲು ನಿರಂತರ ಶ್ರಮವಹಿಸಿದೆ.

7. ಉಳ್ಳಾಲ ಸುತ್ತಮುತ್ತಲಿನ ಹಾಗೂ ಪರವೂರಿನ ಹಲವಾರು ಧಾರ್ಮಿಕ ಸಂಘ ಸಂಸ್ಥೆಗಳಿಗೆ ಆರ್ಥಿಕ ಧನಸಹಾಯವನ್ನು ನೀಡಲಾಗುತ್ತಿದೆ. ದರ್ಗಾ ಸಮಿತಿಗೆ ಒಳಪಟ್ಟ ಅರೇಬಿಕ್ ಕಾಲೇಜ್, ಮದರಸಗಳು, ಮಸೀದಿಗಳ ಸಿಬ್ಬಂದಿ ವರ್ಗಕ್ಕೆ ಸಂಬಳವನ್ನು ಕೊಡುವುದು ಮತ್ತು ಅವುಗಳ ಕಾಮಗಾರಿಗಳನ್ನು ನಿರ್ವಹಿಸುವುದು ದರ್ಗಾ ಸಮಿತಿಯ ವತಿಯಿಂದಾಗಿರುತ್ತದೆ.

8. ದರ್ಗಾದಲ್ಲಿ ಮತ್ತು ಮಸೀದಿಯಲ್ಲಿರುವ ನಿರ್ಗತಿಕರಿಗೆ ಹಾಗೂ ಬಡವರಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ. ಅದೇ ರೀತಿ ಅನಾಥ ಹೆಣದ ದಫನ ಕಾರ್ಯವನ್ನು ಸಯ್ಯದ್ ಮದನಿ ಸಂಘ ಸಂಸ್ಥೆಯ ವತಿಯಿಂದ ನೆರವೇರಿಸಲಾಗುತ್ತದೆ.

9. ಕಡು ಬೇಸಿಗೆಯಲ್ಲಿ ಕುಡಿಯುವ ನೀರಿಗೆ ಕ್ಷಾಮ ಉಂಟಾದಾಗ ಜಾತಿ ಮತ ಬೇಧವೆನಿಸದೆ ಉಳ್ಳಾಲ, ಪೆರುಮನ್ನೂರು, ಮುನ್ನೂರು ಹಾಗೂ ಸೋಮೇಶ್ವರ ಗ್ರಾಮದ ಹಲವು ಪ್ರದೇಶಗಳಿಗೆ ದರ್ಗಾದ ಬಾವಿಯಿಂದಲೇ ನೀರು ಸರಬರಾಜು ವ್ಯವಸ್ಥೆಯನ್ನು ಯಶಸ್ವಿಯಾಗಿ ಸಮಿತಿಯು ನಿರ್ವಹಿಸುತ್ತದೆ. ದೊಡ್ಡ ಮೊತ್ತದ ಆರ್ಥಿಕ ವೆಚ್ಚ ತಗಲುವ ಈ ಶ್ಲಾಘನೀಯ ಕಾರ್ಯಕ್ರಮಕ್ಕೆ ಉಳ್ಳಾಲದ ಪುರಸಭೆಯು ತನ್ನ ನೆರವಿನ ಹಸ್ತ ನೀಡುತ್ತದೆ.

10. ಉಳ್ಳಾಲದ ಶೈಕ್ಷಣಿಕ ಕೇಂದ್ರಗಳ 90%ದಷ್ಟು ಸಿಬ್ಬಂದಿ ವರ್ಗದವರ ಸಂಬಳವನ್ನು ದರ್ಗಾ ಆಡಳಿತ ಸಮಿತಿಯ ವತಿಯಿಂದಲೇ ನೀಡಲಾಗುತ್ತಿದೆ. ಅಮುಸ್ಲಿಮ್ ಭಾಂಧವರೇ ಹೆಚ್ಚಿನ ಶಿಕ್ಷಕರಾಗಿ ಬೇರೆ ಬೇರೆ ಸಂಸ್ಥೆಗಳಲ್ಲಿ ದುಡಿಯುತ್ತಿದ್ದು ಅವರ ನೇಮಕಾತಿ ಹಾಗೂ ಅವರ ವೇತನವನ್ನು ಯಶಸ್ವಿಯಾಗಿ

ನಿರ್ವಹಿಸುತ್ತಿರುವುದು ದರ್ಗಾ ಸಮಿತಿಯು ಎತ್ತಿ ಹಿಡಿದಿರುವ ಧಾರ್ಮಿಕ ಸೌಹಾರ್ದಕ್ಕೆ ಸ್ಪಷ್ಟ ಕನ್ನಡಿಯಾಗಿದೆ.

11. ಸೈಯ್ಯದ್ ಮದನಿ ದರ್ಗಾ ಸಮಿತಿಯ ವತಿಯಿಂದ ಬಸ್ ಸಂಚಾರ ವ್ಯವಸ್ಥೆಯನ್ನು ಉಳ್ಳಾಲ ಮತ್ತು ಪರಿಸರದ ಜನರಿಗೆ 'ಮದನಿ ಟ್ರಾವೆಲ್ಸ್' ಎಂಬ ಬಸ್ಸುಗಳ ಮೂಲಕ 1980ರ ದಶಕದಲ್ಲಿ ಆರಂಭಿಸಲಾಯಿತು. ಗ್ರಾಮಾಂತರ ಪ್ರದೇಶಗಳಿಂದ ಮಂಗಳೂರಿಗೆ ಕೆಲಸ, ವ್ಯಾಪಾರ ಹಾಗೂ ಇನ್ನಿತರ ಕಾರ್ಯಗಳಿಗೆ ಹೋಗಲು ಈ ಸಾರಿಗೆ ವ್ಯವಸ್ಥೆಯು ಅನುವು ಮಾಡಿ ಕೊಟ್ಟಿತು.

12. ಮದನಿ ನಗರ ವಸತಿ ಯೋಜನೆ: ಮೇಲಂಗಡಿಯ ಹೊಸ ಮಸೀದಿಯ ಬಳಿ ಅಂದಾಜು ಒಂದು ಎಕರೆ ಜಮೀನನ್ನು ಖರೀದಿಸಿ ಮನೆ ನಿವೇಶನಗಳಾಗಿ ವಸತಿ ರಹಿತರಿಗೆ ದರ್ಗಾ ವತಿಯಿಂದ ವಿತರಿಸಲಾಗಿದೆ. ಅದೇ ರೀತಿ ಉಳ್ಳಾಲ ಸಮೀಪದ ಮುನ್ನೂರು ಗ್ರಾಮದ ಮದನಿ ನಗರದಲ್ಲಿ ಸುಮಾರು 150 ವಸತಿಹೀನ ಬಡ ಕುಟುಂಬಗಳಿಗೆ ಮನೆಗಳನ್ನು ಕಟ್ಟಿ ಕೊಡಲಾಗಿದೆ. ಅದರೊಂದಿಗೆ ಪ್ರಾಥಮಿಕ ಶಾಲೆ, ನೀರಾವರಿ, ಮದರಸ ಸೌಕರ್ಯಗಳನ್ನು ಕಲ್ಪಿಸಲಾಗಿದೆ.

13. ಪ್ರವಾದಿ ಜನ್ಮ ದಿನವನ್ನು ದರ್ಗಾದ ವತಿಯಿಂದ ಸಂಭ್ರಮದಿಂದ ಪ್ರತೀ ವರ್ಷವೂ ಆಚರಿಸಲಾಗುತ್ತಿದೆ. ಸದ್ರಿ ಕಾರ್ಯಕ್ರಮದಲ್ಲಿ ರಾಜಕೀಯ ನೇತಾರರು, ಧಾರ್ಮಿಕ ಪಂಡಿತರುಗಳು ಹಾಜರಿದ್ದು ಕೊನೆಯಲ್ಲಿ ಅನ್ನದಾನದೊಂದಿಗೆ ಕಾರ್ಯಕ್ರಮ ಕೊನೆಗೊಳ್ಳುತ್ತದೆ. ಸೌಹಾರ್ದದ ಸಂಕೇತವಾಗಿ ಹಿಂದೂಗಳೂ ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ.

14. ಯುವಕರನ್ನು ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಸ್ವಸ್ಥವಾಗಿಡಲು ಮತ್ತು ಆರೋಗ್ಯವನ್ನು ಕಾಪಾಡಲು ದರ್ಗಾ ವತಿಯಿಂದ ಕೆಲವು ಜಿಮ್ನಾಸಿಯಂಗಳನ್ನು ಹುಟ್ಟು ಹಾಕಿದೆ. ಆ ಮೂಲಕ ಸಮಾಜದ ಯುವಕರಿಗೆ ಆರೋಗ್ಯದ ಸ್ವಾಸ್ಥದ ಅರಿವನ್ನೂ ನೀಡುತ್ತಿದೆ.

15. ಇತ್ತೀಚೆಗೆ ದರ್ಗಾಕ್ಕೆ ದಿನನಿತ್ಯ ಭೇಟಿ ನೀಡುತ್ತಿರುವ ಯಾತ್ರಾರ್ಥಿಗಳಿಗೆ ಉಚಿತ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಮಾಡಲಾಗಿದೆ. ಅದು ಯಶಸ್ವಿಯಾಗಿ ಮುಂದುವರಿಯುತ್ತಿದೆ.

ಉಳ್ಳಾಲ ಸೈಯದ್ ಮದನಿ ದರ್ಗಾ ಸಮಿತಿ ಹಾಗೂ ಆಡಳಿತ ವೈಖರಿ

20ನೇ ಶತಮಾನದ ಪೂರ್ವಾರ್ಧದಲ್ಲಿ ಉಳ್ಳಾಲದ ಮಸೀದಿಯ ಆಡಳಿತವು ಮುಕ್ತೇಸರರ ಮೂಲಕ ನಡೆಯುತ್ತಿತ್ತು. ಮಸೀದಿಯ ಮತ್ತು ದರ್ಗಾದ ಆಡಳಿತವನ್ನು 4 ಮಂದಿ ಮುಕ್ತೇಸರರು ಜಂಟಿಯಾಗಿ ನಿರ್ವಹಿಸುತ್ತಿದ್ದರು. 1966ರ ವರೇಗೆ ಮುಕ್ತೇಸರರ ಆಡಳಿತ ಚಾಲ್ತಿಯಲ್ಲಿತ್ತು 1966ರಲ್ಲಿ ಆಡಳಿತ ವ್ಯವಹಾರವು ಅಧ್ಯಕ್ಷರ ಆಯ್ಕೆಯ ಮೂಲಕ ಜಾರಿಗೆ ಬಂತು. ಅಧ್ಯಕ್ಷರೇ ಜಮಾಅತ್ ಮತ್ತು

ದರ್ಗಾದ ಆಡಳಿತದ ಉಸ್ತುವಾರಿಯಾಗಿದ್ದರು. 1973ರಲ್ಲಿ ಔದ್ಯೋಗಿಕವಾಗಿ ಸೈಯ್ಯದ್ ಮದನಿ ದರ್ಗಾ ಆಡಳಿತ ಸಮಿತಿ ಜಾರಿಗೆ ಬಂತು. ಉಳ್ಳಾಲ ಜುಮಾ ಮಸೀದಿ ಮತ್ತು ಸೈಯದ್ ಮದನಿ ದರ್ಗಾದ ಆಡಳಿತವನ್ನು ಉಳ್ಳಾಲ ಜಮಾಅತಿನ 48 ಸದಸ್ಯರನ್ನೊಳಗಿಂಡ ಸಮಿತಿಯು ನಿರ್ವಹಿಸುತ್ತದೆ. ಉಳ್ಳಾಲ ಜಮಾಅತನ್ನು 4 ವಲಯಗಳಾಗಿ ವಿಂಗಡಿಸಲಾಗಿದ್ದು, ಪ್ರತೀ ವಲಯ (ಖರಿಯ) ದಿಂದ ಆಯ್ಕೆಯಾದ ಸದಸ್ಯರು ಕೇಂದ್ರ ಜಮಾಅತಿನ ಸಮಿತಿ ಸದಸ್ಯರಾಗುತ್ತಾರೆ. 48 ಮಂದಿ ಸಮಿತಿ ಸದಸ್ಯರಲ್ಲಿ 8 ಮಂದಿ ಆಡಳಿತ ಮಂಡಳಿಗೆ ಆಯ್ಕೆಯಾಗುತ್ತಾರೆ. ಅವರೆಂದರೆ,

1 ಅಧ್ಯಕ್ಷರು
2. ಉಪಾಧ್ಯಕ್ಷರು (2 ಮಂದಿ)
3. ಕಾರ್ಯದರ್ಶಿ
4. ಜತೆ ಕಾರ್ಯದರ್ಶಿಗಳು (2 ಮಂದಿ)
5. ಕೋಶಾಧಿಕಾರಿ
6. ಲೆಕ್ಕ ಪರಿಶೋಧಕರು

ದರ್ಗಾ ಸಮಿತಿ ಸದಸ್ಯರು ಹಾಗೂ ಆಡಳಿತ ಮಂಡಳಿಯ ಸದಸ್ಯರು ಯಾವುದೇ ಸಂಭಾವನೆ ಪಡೆಯದೇ ತಮ್ಮ ನಿಸ್ವಾರ್ಥ ಸೇವೆಯನ್ನು ಜಮಾಅತಿನ ಸರ್ವತೋಮುಖ ಅಭಿವೃದ್ಧಿಗೆ ಮುಡಿಪಾಗಿಟ್ಟಿದ್ದಾರೆ. ಸಮಿತಿಯ ಸದಸ್ಯರ ಅವಧಿಯು 5 ವರ್ಷವಾಗಿದ್ದು ನಂತರ ಪುನಃ ಹೊಸ ಸಮಿತಿಯನ್ನು ಆರಿಸಲಾಗುವುದು. ಪ್ರತೀ ಶುಕ್ರವಾರ ಜುಮಾ ನಮಾಜಿನ ನಂತರ ಸಮಿತಿಯ ಸಭೆಯು ಜರಗುತ್ತಲಿದ್ದು, ಜಮಾಅತಿಗೆ ಒಳಪಟ್ಟ ಹಾಗೂ ಇತರ ನಿಶ್ಚಿತ ವಿಷಯಗಳ ಬಗ್ಗೆ, ವಿಚಾರ ವಿನಿಮಯ ಮಾಡಿ ಕೂಲಂಕುಷವಾಗಿ ಪರಿಶೀಲಿಸಿ ಒಮ್ಮತಾಭಿಪ್ರಾಯದೊಂದಿಗೆ ನಿರ್ಣಯಿಸಲಾಗುತ್ತದೆ. ವರ್ಷಕ್ಕೆ ಒಂದು ಬಾರಿ ಜಮಾಅತಿನ ಮಹಾಸಭೆಯನ್ನು ನಡೆಸಲಾಗುವುದು. ಈ ಸಭೆಗೆ ಜಮಾಅತಿನ ಪ್ರತೀ ಸದಸ್ಯರು ಹಾಜರಾಗಬೇಕಾಗಿದ್ದು, ಮಹಾಸಭೆಯ ಮುಂದೆ ವಾರ್ಷಿಕ ಲೆಕ್ಕ ಪತ್ರಗಳು ಹಾಗೂ ಜಮಾಅತ್ ಕೈಗೊಂಡ ಇತರ ಕೆಲಸಗಳ ಬಗ್ಗೆ ವಿಮರ್ಶಿಸಿ ಮಂಜೂರಾತಿಯನ್ನು ಪಡೆಯಲಾಗುತ್ತದೆ. ಜಮಾಅತ್ ಸದಸ್ಯರಿಗೆ ತಮ್ಮ ಸಂಶಯಗಳನ್ನು ಮಹಾಸಭೆಯಲ್ಲಿ ಚರ್ಚಿಸಲು ಮುಕ್ತ ಅವಕಾಶವಿದೆ.

ಉಳ್ಳಾಲ ದರ್ಗಾಕ್ಕೆ ನಾನಾ ಭಾಗಗಳಿಂದ ಸಾವಿರಾರು ಭಕ್ತರು ಸಂದರ್ಶಿಸುತ್ತಿರುವುದು ಸರ್ವೇ ಸಾಮಾನ್ಯವಾಗಿದೆ. ದರ್ಗಾಕ್ಕೆ ಹರಕೆಯ ರೂಪದಲ್ಲಿ ಇವರು ನೀಡುವ ಹಣ, ಚಿನ್ನ, ಬೆಳ್ಳಿ, ಅಕ್ಕಿ, ತೆಂಗಿನಕಾಯಿ, ಸಕ್ಕರೆ, ಆಡು, ಕುರಿ, ಕೋಳಿ ಹಾಗೂ ಇತರ ವಸ್ತುಗಳು ದರ್ಗಾದ ಆರ್ಥಿಕ ಮೂಲವಾಗಿದೆ. ವಸ್ತು ರೂಪದಲ್ಲಿ ಬರುವ ಹರಕೆಗಳನ್ನು ಹರಾಜು ಮಾಡಲಾಗುವುದು. ಹರಕೆಯ ರೂಪಲ್ಲಿ ಬರುವ ಹಣವನ್ನು ಜಮಾಅತ್ ಸದಸ್ಯರು ಎಣಿಕೆ ಮಾಡಿ ನಂತರ ಜಮಾಅತಿನ ಆಂತರಿಕ

ಲೆಕ್ಕ ಪರಿಶೋಧಕರಿಂದ ಪರಿಶೋಧನೆಯಾಗುತ್ತದೆ. ವಾರ್ಷಿಕ ಲೆಕ್ಕ ಪತ್ರವನ್ನು ಜಮಾಅತಿನ ಪರವಾಗಿ ವಿಶೇಷ ಲೆಕ್ಕ ಪರಿಶೋಧಕರಿಂದ ಮಾಡಿಸಿ, ಮಹಾಸಭೆಯಿಂದ ಮಂಜೂರಾತಿ ಪಡೆದು ವಕ್ಫ್ ಬೋರ್ಡಿಗೆ ಕಳುಹಿಸಲಾಗುತ್ತದೆ. ದರ್ಗಾಕ್ಕೆ ಬರುವ ಆದಾಯವನ್ನು ವಿವಿಧ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಉದ್ದೇಶಗಳಿಗೆ ವಿನಿಯೋಗಿಸಲಾಗುತ್ತದೆ. 7

ಆಕರ ಸೂಚಿ

1. ಅಭಿಶಂಕರ್, ಸೌತ್ ಕೆನರಾ ಗಜೆಟಿಯರ್, ಕರ್ನಾಟಕ ಸರಕಾರ, 1973 ಪುಟ 371

2. ಅಲ್-ಮಿಸ್ಬಾಹ್ ಉರೂಸ್ ಸ್ಮರಣ ಸಂಚಿಕೆ-2000, ಸಿರಾಜುಲ್ ಉಲೇಮಾ ವಿದ್ಯಾರ್ಥಿ ಸಂಘ ಎಸ್.ಎಂ.ಎ. ಕಾಲೇಜು ಉಳ್ಳಾಲ, 2000 ಪುಟ 30-33

3. ಅದೇ, ಪುಟ 33-35

4. ಹಸಿರು ಭೂಮಿ-2000, ಉರೂಸ್ ವಿಶೇಷಾಂಕ, ಅಯ್ಯೂಬ್ ಉಳ್ಳಾಲ(ಪ್ರಕಾಶಕರು)-2000 ಪುಟ 25.

5. ಉಳ್ಳಾಲ ಜುಮ್ಮಾ ಮಸ್ಜಿದ್ ಮತ್ತು ಶರೀಫುಲ್ ಮದನಿ ದರ್ಗಾ- ಕಿರುಹೊತ್ತಗೆ, ಉಳ್ಳಾಲ ದರ್ಗಾ ಸಮಿತಿ 1985 ಪುಟ 20-21

6. ಹಸಿರು ಭೂಮಿ-2000, ಉರೂಸ್ ವಿಶೇಷಾಂಕ, ಅಯ್ಯೂಬ್ ಉಳ್ಳಾಲ(ಪ್ರಕಾಶಕರು)-2000 ಪುಟ 28.

7. ಉಳ್ಳಾಲ ಜುಮ್ಮಾ ಮಸ್ಜಿದ್ ಮತ್ತು ಶರೀಫುಲ್ ಮದನಿ ದರ್ಗಾ- ಕಿರುಹೊತ್ತಗೆ, ಉಳ್ಳಾಲ ದರ್ಗಾ ಸಮಿತಿ 1985 ಪುಟ 23 ಮತ್ತು ಉಳ್ಳಾಲ, ಎ ಬ್ರೀಫ್ ಹಿಸ್ಟ್ರಿ, 1998 ಪುಟ 3-9

ಅಧ್ಯಾಯ 6

ಸಮಾರೋಪ

ಅಧ್ಯಾಯ 6

ಸಮಾರೋಪ

ಉಳ್ಳಾಲವು ತುಳುನಾಡಿನ ಒಂದು ಸಣ್ಣ ಪ್ರದೇಶವಾದರೂ ಐತಿಹಾಸಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ತನ್ನದೇ ಆದ ಪ್ರಬಲವಾದ ಅಸ್ತಿತ್ವವನ್ನು ಹೊಂದಿದೆ. ಪೋರ್ಚುಗೀಸರನ್ನು ಸದೆ ಬಡಿಯುವಲ್ಲಿ ರಾಣಿ ಅಬ್ಬಕ್ಕಳಿಗೆ ಮತ ಬೇಧವಿಲ್ಲದೆ ಸಹಾಯ ನೀಡಿದ ಸೈನಿಕರು, ಈ ನಾಡಿನ ಪ್ರಮುಖ ಕಸುಬಾದ ಕೃಷಿ, ಮೀನುಗಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಸ್ಥಳೀಯರು ಹಾಗೂ ಹಿಂದಿನಿಂದಲೂ ಸಾಂಸ್ಕೃತಿಕ ವೈವಿಧ್ಯತೆಯನ್ನು ಸಾರುವ ವಿವಿಧ ದಾರ್ಮಿಕ, ಸಾಂಸ್ಕೃತಿಕ ಕೇಂದ್ರಗಳು, ಉಳ್ಳಾಲಕ್ಕೆ 'ಚೋಟಾ ಮಂಗಳೂರು' ಎಂಬ ಶಿರೋನಾಮೆಯನ್ನು ನೀಡಿದೆ.

ಉಳ್ಳಾಲದ ಸಂತ ಸೈಯದ್ ಮದನಿ ದರ್ಗಾವು ಜಾತಿ ಮತ ಬೇಧವಿಲ್ಲದೆ ಸರ್ವ ಧರ್ಮೀಯರನ್ನೂ ಆಕರ್ಷಿಸುವ ಕೇಂದ್ರವಾಗಿ 20ನೇ ಶತಮಾನದಲ್ಲಿ ಮೂಡಿಬಂತು. ಉಳ್ಳಾಲದ ಇತಿಹಾಸ ಅಧ್ಯಯನ ಮಾಡುವಾಗ ಇದು ಮುಸ್ಲಿಂ ಬಾಹುಳ್ಯವಿರುವ ಪ್ರದೇಶವಾಗಿ ಸಂತರ ಮದನಿಯ ಆಗಮನಕ್ಕೆ ಮೊದಲೇ ರೂಪುಗೊಂಡಿತು. ಇಟಾಲಿಯ ಪ್ರವಾಸಿಗ ಡೆಲ್ಲಾವೆಲ್ಲಿ ತನ್ನ ಉಳ್ಳಾಲ ಸಂದರ್ಶನದ ಬರವಣಿಗೆಯಲ್ಲಿ ಇಲ್ಲಿ ಮೂರರು ಅಥವಾ ಮುಸ್ಲಿಮರು ಹಾಗೂ ಅವರ ಮಸೀದಿಗಳು ಹಲವಾರು ಇವೆ ಎಂದು ಉಲ್ಲೇಖಿಸುತ್ತಾರೆ. ಮಾತ್ರವಲ್ಲದೆ ರಾಣಿ ಅಬ್ಬಕ್ಕಳ ಸೈನ್ಯದಲ್ಲಿ ಮುಸ್ಲಿಮರು ಹಾಗೂ ರಾಣಿಯ ಕಾಲದಲ್ಲೇ ಅಳೇಕಲದಲ್ಲಿ ಮಸೀದಿ ಇದ್ದುದನ್ನು ಗಮನಿಸಬಹುದು.

ಸಂತ ಮದನಿಯವರ ಆಗಮನ, ಜೀವನ ಭೋಧನೆ, ಮರಣ ಇತ್ಯಾದಿ ವಿಷಯಗಳನ್ನು ತಿಳಿಯಲು ಯಾವುದೇ ಅಧಿಕೃತ ಐತಿಹಾಸಿಕ ದಾಕಲೆಗಳು ಸಿಗುವುದಿಲ್ಲ. ಭೂ ದಾಖಲೆಗಳಲ್ಲಿ ಅವರು ನೆಲೆನಿಂತಿದ್ದ ಪ್ರದೇಶಕ್ಕೆ "ಸೈಯದ್ ಮದನಿ ಗುಡಿ" ಎಂದು ನಮೂದಿಸಲಾಗಿದೆ. 19–20ನೇ ಶತಮಾನದ ಶ್ರೇಷ್ಠ ಬಡಗು ಮಲೆಯಾಳ ಕವಿ ಎಂದು ಬಿರುದಾಂಕಿತರಾದ ಕೇರಳ ಮುಸ್ಲಿಮ್ ಹಾಗೂ ಮದ್ರಾಸ್ ಹೈಕೋರ್ಟ್‌ನ ಇಸ್ಲಾಮಿ ಕಾಯ್ದೆಯ ಸಲಹೆಗಾರರಾದ ತಲಪಾಡಿ ಬಾಪಕುಂಞಯವರ 'ಸಯ್ಯಿದ್ ಮದನಿ ಮಾಲೆ' ಎಂಬ ಅರಬ್ಬಿ ಮಲೆಯಾಳಂ ಕಾವ್ಯವೇ ಅಧಿಕೃತವಾಗಿ ಸಂತ ಮದನಿಯವರ ಬಗ್ಗೆ ಮಾಹಿತಿ ನೀಡುವ ದಾಖಲೆಯಾಗಿರುತ್ತದೆ. ಇದರಲ್ಲಿ ಸಂತರ ಜೀವನಚರಿತ್ರೆಯನ್ನು ಐತಿಹ್ಯದೊಂದಿಗೆ ಜೋಡಣೆ ಮಾಡಲಾಗಿದೆ. ಸಂತರ ಜೀವನ ಚರಿತ್ರೆಯನ್ನು ಅರಿಯಲು ಸ್ಥಳೀಯ ಹಲವು ಹಿರಿಯರನ್ನು

ಸಂದರ್ಶಿಸಿದಾಗಲೂ ಅವರಲ್ಲಿ ಮೌಖಿಕವಾಗಿ ಅದ್ಭುತ ಸಿದ್ಧಿಗಳ ಬಗ್ಗೆ ಸ್ಪಷ್ಟ ವಿವರಣೆ ಸಿಗುತ್ತದೆ. ಅದೇ ರೀತಿ ಅಳೇಕಲದಲ್ಲಿರುವ 'ಪಾಂಡೇಲ್ ಪಕ್ಕ' ಮಸೀದಿ ಪಕ್ಕದಲ್ಲಿರುವ ಕೊಳ, ದರ್ಗಾದ ಸಮೀಪವಿರುವ ಬಾವಿ, ಮುಂತಾದ ಕುರುಹುಗಳು ಸಂತ ಮದನಿಯವರ ಜೀವನ ಚರಿತ್ರೆಗೆ ಸಿಗುವಂತಹ ಇತರ ಆಕರಗಳಾಗಿವೆ. ಅಧ್ಯಯನದ ಆಧಾರದಲ್ಲಿ ಈ ದರ್ಗಾ 1920ರಿಂದೀಚೆಗೆ ಪ್ರಸಿದ್ಧಿಯನ್ನು ಪಡೆದು ಕರ್ನಾಟಕ ಕೇರಳ ಹಾಗೂ ಇನ್ನಿತರ ಪ್ರದೇಶಗಳಿಂದ ಲಕ್ಷಾಂತರ ಭಕ್ತರ ಯಾತ್ರಾ ಕೇಂದ್ರವಾಗಿ ಮೂಡಿ ಬಂತು.

ಪ್ರಸಕ್ತ ಅಧ್ಯಯನದಲ್ಲಿ ಉರೂಸ್‌ನ ಬಗ್ಗೆ ಚಿತ್ರಣವನ್ನು ನೀಡಲು ಪ್ರಯತ್ನಿಸಿದ್ದೇನೆ. ಉರೂಸ್ ಆಚರಣೆಯ ಬಗ್ಗೆ ಇಸ್ಲಾಂನಲ್ಲೇ ಬಿನ್ನಾಭಿಪ್ರಾಯವಿರುವ ಈ ಸಂದರ್ಭದಲ್ಲಿ ಅದರ ನಾನಾ ಆಯಾಮಗಳನ್ನು ಅರಿಯುವುದು ಸೂಕ್ತವೆನಿಸುತ್ತದೆ. ಮಹಾತ್ಮರ ಬಗ್ಗೆ ಜನಪದದಲ್ಲಿರುವ ನಂಬಿಕೆ, ಅವರ ಮರಣದ ನಂತರ ಆಚರಣೆಯಾಗಿ ಜನಜನಿತವಾದುದನ್ನು ಉರೂಸ್ ಆಚರಣೆಯ ಮೂಲಕ ಕಾಣಸಿಗುತ್ತದೆ. ಇಸ್ಲಾಂನಲ್ಲಿರುವ ಒಂದು ದೊಡ್ಡ ಗುಂಪಾದ ಸುನ್ನೀ ಪಂಥದ ನಂಬಿಕೆಯಂತೆ ಮಹಾತ್ಮರು ಯಾ ಸಂತರು ತಮ್ಮ ಮರಣಾನಂತರವೂ ಅದ್ಭುತ ಸಿದ್ಧಿಗಳನ್ನು ತೋರಿಸಿಕೊಡುವರು ಎಂಬ ನಂಬಿಕೆಯಿಂದಾಗಿ ಉರೂಸ್ ಆಚರಣೆ ರೂಢಿಯಲ್ಲಿ ಬಂತು. 20ನೇ ಶತಮಾನದವರೆಗೆ ಯಾವುದೇ ರೀತಿಯ ಸದ್ದು ಗದ್ದಲವಿಲ್ಲದ ಆಚರಣೆ ದರ್ಗಾಗಳಲ್ಲಿತ್ತು. ಆದರೆ ದರ್ಗಾದಲ್ಲಿದ್ದ ನಂಬಿಕೆಯನ್ನು ಹಿಂದೆಯೂ ಇದ್ದುದನ್ನು ಕಾಣಬಹುದು. ಉದಾ: ಮೊಘಲ್ ಚಕ್ರವರ್ತಿ ಅಕ್ಬರ್ ವಿವಾಹವಾಗಿ ಹಲವು ವರ್ಷ ಸಂತತಿಯಾಗದೇ ಇರುವಾಗ ಫತೇಪುರ ಸಿಕ್ರಿಯ ಶೇಕ್ ಸಲೀಂ ಚಿಸ್ತಿ ಎಂಬ ಸಂತರ ದರ್ಗಾಕ್ಕೆ ಭೇಟಿ ನೀಡಿ ಬಳೆ ಹರಕೆ ನೀಡುತ್ತಿದ್ದ. ಅದರ ಫಲವಾಗಿ 1572ರಲ್ಲಿ ಅವನಿಗೆ ಮಗುವೊಂದು ಜನಿಸಿದಾಗ ಆ ಮಗುವಿಗೆ 'ಸಲೀಂ' ಎಂದು ಹೆಸರಿಟ್ಟ. ನಂತರ ಅದೇ ಮಗು ಜಹಾಂಗೀರ್‌ನಾಗಿ ರಾಜ್ಯಭಾರ ಮಾಡುತ್ತಾನೆ. ಆ ದರ್ಗಾದಲ್ಲಿ ಮಕ್ಕಳಿಲ್ಲದವರು ಬಂದು ಬಳೆ ಹರಕೆ ಹಾಕುವಂತಹ ಪ್ರತೀತಿ 16ನೇ ಶತಮಾನದಲ್ಲಿದ್ದುದನ್ನು ಇಂದು ನಾವು ಗಮನಿಸಬಹುದು. ಈ ರೀತಿಯ ನಂಬಿಕೆಯಿಂದಲೇ 20ನೇ ಶತಮಾನದಲ್ಲಿ ಮರಣ ಹೊಂದಿದ ಸಮಾಧಿ ಸ್ಥಳಗಳು ಯಾ ದರ್ಗಾಗಳು ಉರೂಸ್ ಆಚರಣೆಯ ಕೇಂದ್ರವಾಯಿತು. ಇಂತಹ ಆಚರಣೆಗಳು ಭಾರತದಲನೇಕ ಕಡೆಗಳಲ್ಲಿ ಜನಪ್ರಿಯತೆಯನ್ನು ಪಡೆದಿದ್ದು, ಭಕ್ತಿ ಆಂದೋಲನ ಮತ್ತು ಸೂಫಿ ಆಂದೋಲನಗಳ ಪ್ರಭಾವವಾಗಿದೆ. ಹಿಂದೂ-ಮುಸ್ಲಿಂ ಧಾರ್ಮಿಕ ಆಂದೋಲನಗಳು ಇಂತಹ ಧಾರ್ಮಿಕ ಸೌಹಾರ್ದಕ್ಕೆ ಅವಕಾಶ ಕಲ್ಪಿಸಿಕೊಟ್ಟದ್ದನ್ನು ಇಲ್ಲಿ ನಾವು ಕಾಣಬಹುದು. ಉಳ್ಳಾಲದ ಉರೂಸ್ ದಕ್ಷಿಣ ಭಾರತದಲ್ಲೇ ಸಂಭ್ರಮದಿಂದ ನಡೆಯುವ ಉರೂಸ್‌ಗಳಲ್ಲಿ ಒಂದಾಗಿದ್ದು ಧರ್ಮಸಾಮರಸ್ಯದ ಸಂಗಮವನ್ನು ಇಲ್ಲಿ ಕಾಣಬಹುದು.

ಹಿಂದೆಂದಿಗಿಂತಲೂ ವೇಗವಾಗಿ ಕೋಮುವಾದ ಹಬ್ಬುತ್ತಿರುವ ಪ್ರಸಕ್ತ ಸನ್ನಿವೇಶದಲ್ಲಿ ಇಂತಹ ಆಚರಣೆ ಸಮಾರಂಭಗಳ ಮೂಲಕ ಸಾಮರಸ್ಯವನ್ನು ಕಾಪಾಡುವ ಕಾರ್ಯ ನಡೆಯಬೇಕಾದುದು ಅತೀ ಅವಶ್ಯಕವಾಗಿದೆ. ಆ ನಿಟ್ಟಿನಲ್ಲಿ ಉರೂಸಿನ ಮಹತ್ವವನ್ನು ಜನರಿಗೆ ತಿಳಿಸಿ ಹಿಂದಿನ ದೃಷ್ಟಾಂತಗಳ ಮಾಹಿತಿಯನ್ನು ನೀಡಿ ಈ ಆಚರಣೆಯ ಮೂಲಕ ಧಾರ್ಮಿಕ ಸಾಮರಸ್ಯವನ್ನು ಕಾಪಾಡಲು ಪ್ರಯತ್ನವನ್ನು ಉರೂಸ್‌ಗಳ ಮೂಲಕವೂ ನಡೆಯಬೇಕಾದುದು ಕಾಲದ ಬೇಡಿಕೆಯಾಗಿದೆ. ಮುಸ್ಲಿಂ ಧಾರ್ಮಿಕ ಕೇಂದ್ರವಾಗಿದ್ದರೂ ಉಳ್ಳಾಲದ ದರ್ಗಾ, ಸಾಮರಸ್ಯದ ಕೇಂದ್ರವಾಗಿರುವುದರಲ್ಲಿ ಯಾವುದೇ ಸಂಶಯವಿಲ್ಲ. ಸಂತರ ಜೀವನದ ಕಾಲದಲ್ಲೇ ಅವರ ನಡೆನುಡಿ, ಸ್ವಭಾವದಿಂದ ಆಕರ್ಷಿತರಾಗಿ ಅವರನ್ನು ಬರಮಾಡಿಕೊಂಡ ಉಳ್ಳಾಲದ ಜನತೆ, ಅವರ ಧಾರ್ಮಿಕ ಬೋಧನೆಗಳಿಗೆ ಮಾರು ಹೋಗಿ ವಿಶೇಷವಾಗಿ ಕೆಳವರ್ಗದ ಹಿಂದೂಗಳು ಇಸ್ಲಾಂನ್ನು ಸ್ವೀಕರಿಸಿದರು. ಶತಮಾನಗಳಿಂದೀಚೆಗೂ ಇಲ್ಲಿನ ಧಾರ್ಮಿಕ ಸಾಮರಸ್ಯಕ್ಕೆ ದರ್ಗಾ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಈ ದರ್ಗಾದಲ್ಲಿ ಪ್ರಾರ್ಥನೆಗೆ ಬರುವ ಭಕ್ತರಲ್ಲಿ ಮುಸ್ಲಿಮರು ಮಾತ್ರವಲ್ಲದೆ ಗಣನೀಯ ಪ್ರಮಾಣದಲ್ಲಿ ಹಿಂದೂಗಳೂ ಇದ್ದರು. ಇಲ್ಲಿಗೆ ಸಮೀಪದ ಪ್ರಾರ್ಥನಾ ಮಂದಿರದಿಂದ ಕಾಣಿಕೆಯ ರೂಪದಲ್ಲಿ ಬರುತ್ತಿದ್ದ ಎಣ್ಣೆ, ಹಿಂದೂ-ಮುಸ್ಲಿಮರು ಹಬ್ಬ ಹರಿದಿನಗಳಲ್ಲಿ ದರ್ಗಾಕ್ಕೆ ಬಂದು ಪ್ರಾರ್ಥನೆ ಸಲ್ಲಿಸಿ ವಸ್ತುರೂಪದ ಮತ್ತು ಹುಂಡಿ ಕಾಣಿಕೆ ನೀಡುತ್ತಿರುವಂತಹ ಸೌಹಾರ್ದ ಪರಂಪರೆಯನ್ನು ಕಾಪಾಡಲು ಈ ದರ್ಗಾ ಒಂದು ವೇದಿಕೆಯಾಗಿದೆ. ದರ್ಗಾದಲ್ಲಿ ನಂಬಿಕೆಯಿಟ್ಟು ಬೇರೆ ಬೇರೆ ಮತ ಧರ್ಮದವರು ಇಂದಿಗೂ ಇಲ್ಲಿ ಭೇಟಿ ನೀಡುತ್ತಿರುವುದರ ಮೂಲಕ ಉಳ್ಳಾಲವನ್ನು ಯಾತ್ರಾ ಸ್ಥಳವಾಗಿ ಮಾರ್ಪಡಿಸುವಲ್ಲಿ ಈ ದರ್ಗಾ ಹಿರಿದಾದ ಪಾತ್ರ ವಹಿಸಿದೆ.

ರಾಷ್ಟ್ರೀಯ ಮಟ್ಟದಲ್ಲಿ ರಾಜ್ಯ ಅಂತರ್‌ರಾಜ್ಯಗಳಲ್ಲಿ ಉಳ್ಳಾಲದ ದರ್ಗಾಕ್ಕೆ ಅನೇಕ ಗಣ್ಯರು ಭೇಟಿ ನೀಡಿದ್ದು ಧಾರ್ಮಿಕ, ಸಾಮಾಜಿಕ ಬೆಳವಣಿಗೆಗೆ ನೀಡಿದ ಪಾತ್ರವನ್ನು ಮುಕ್ತಕಂಠದಿಂದ ಹೊಗಳಿದ್ದು ಈ ದರ್ಗಾದ ಆಡಳಿತ ಸಮಿತಿಯವರು ಕೈಗೊಳ್ಳುತ್ತಿರುವ ನಿಸ್ವಾರ್ಥ ಸೇವೆಗೆ ಒಲಿದ ಫಲವಾಗಿದೆ.

ಉಳ್ಳಾಲ ದರ್ಗಾವನ್ನು ಭೇಟಿ ಮಾಡುವವರಲ್ಲಿ ನಾನಾ ಜಾತಿ ಮತಸ್ಥರು ದಿನಂಪ್ರತಿ ಬರುತ್ತಿದ್ದಾರೆ. ಇವರೆಲ್ಲರಿಗೂ ದರ್ಗಾಕ್ಕೆ ಬಂದು ಪ್ರಾರ್ಥನೆ ಸಲ್ಲಿಸಲು ಅವಕಾಶವನ್ನು ಯಾವುದೇ ತಾರತಮ್ಯವಿಲ್ಲದೇ ನೀಡಲಾಗಿದೆ. ಈ ನಿಟ್ಟಿನಲ್ಲಿ ದರ್ಗಾ ಆಡಳಿತ ಸಮಿತಿ ನಿರಂತರ ಪ್ರಯತ್ನಿಸಿದೆ. ಅದೇ ರೀತಿ ಉಳ್ಳಾಲ ದರ್ಗಾವು ಬೇರೆ ಬೇರೆ ಮತ ಧರ್ಮದವರ ವಿವಿಧ ಹಬ್ಬ ಹರಿದಿನಗಳಂದು ಭೇಟಿ ಮಾಡುವ ಕೇಂದ್ರವಾಗಿದ್ದು ಸೌಹಾರ್ದಯುತ ವಾತಾವರಣವನ್ನು ಸೃಷ್ಟಿಸಲು ಪೂರಕವಾಗಿದೆ. ನಾನಾ ಉದ್ದೇಶಗಳ ಈಡೇರಿಕೆಗಾಗಿ ಈ ದರ್ಗಾವನ್ನು ಸಂದರ್ಶಿಸುವ ಹಲವಾರು ಭಕ್ತರಿಗೆ ತಮ್ಮ ಉದ್ದೇಶಗಳು ಈಡೇರುವ ಆಶಾಭಾವನೆ ಇರುವುದರಿಂದಲೇ ಇಲ್ಲಿಗೆ ದಿನನಿತ್ಯ ನೂರಾರು ಭಕ್ತರು ಇಂದಿಗೂ ಬರುತ್ತಾರೆ. ಬೇರೆ ಬೇರೆ ರೀತಿಯ ಹರಕೆಯನ್ನು ಸಲ್ಲಿಸಿ, ಪ್ರಾರ್ಥನೆ ಮಾಡಿ ಹಿಂದಿರುಗುವುದನ್ನು ಕಾಣಬಹುದು.

ಉರೂಸ್ ಸಮಾರಂಭದಲ್ಲಿ ಸಾವಿರಾರು ಭಕ್ತರು ಇಲ್ಲಿಗೆ ಆಗಮಿಸಿ ಬೃಹತ್ ಪ್ರಮಾಣದಲ್ಲಿ ನೀಡುವ ಹರಕೆಯನ್ನು ಗಮನಿಸುವಾಗ ಈ ದರ್ಗಾದ ಬಗ್ಗೆ ಜನರಿಗಿರುವ ನಂಬಿಕೆಗಳು ಇನ್ನೂ ಜೀವಂತವಿದೆ ಮಾತ್ರವಲ್ಲದೆ ವಿವಿಧ ಮತಸ್ಥರ ಮಿಲನ ಸೌಹಾರ್ಧಕ್ಕೆ ಎಡೆಮಾಡಿ ಕೊಟ್ಟದ್ದನ್ನು ಗಮನಿಸಬಹುದು. ಈ ರೀತಿ ಉಳ್ಳಾಲದ ದರ್ಗಾದ ಬಗ್ಗೆ ಮುಸ್ಲಿಮರು ಮಾತ್ರವಲ್ಲದೆ ಹಿಂದು, ಕ್ರಿಶ್ಚಿಯನ್, ಜೈನರಲ್ಲೂ ಗೌರವಿಸುವುದನ್ನು ಕಾಣಬಹುದು. ಖಂಡಿತವಾಗಿಯೂ ಉಳ್ಳಾಲ ದರ್ಗಾ ಧಾರ್ಮಿಕ ಸೌಹಾರ್ಧತೆಯನ್ನು ಕಾಪಾಡುವಲ್ಲಿ ಜಿಲ್ಲೆಯಲ್ಲಿ ಮುಂಚೂಣಿಯಲ್ಲಿರುವ ಒಂದು ಕೇಂದ್ರವಾಗಿದೆ.

ಉಳ್ಳಾಲ ದರ್ಗಾವು ಉಳ್ಳಾಲ, ಪೆರ್ಮನ್ನೂರು, ಮುನ್ನೂರು ಮತ್ತು ಸೋಮೇಶ್ವರ ಗ್ರಾಮಗಳ ಜನರ ಅವಶ್ಯಕತೆಗಳಿಗೆ ನಾನಾ ರೀತಿಯಲ್ಲಿ ಸ್ಪಂದಿಸಿದೆ ಎಂಬುದು ಈ ಅಧ್ಯಯನದಲ್ಲಿ ಹೊರ ಹೊಮ್ಮಿದ ಒಂದು ಪ್ರಮುಖ ಫಲಿತಾಂಶವಾಗಿದೆ. ಸಮಾಜದ ಬಡವರ ಮತ್ತು ದುರ್ಬಲರ ಅಭಿವೃದ್ಧಿಗೆ ವಿವಿಧ ಕಾರ್ಯಕ್ರಮಗಳನ್ನು ನಡೆಸುತ್ತಾ, ಬಡ ಮತ್ತು ಅನಾಥ ಕನ್ಯೆಯರ ವಿವಾಹಕ್ಕೆ ನೆರವು ನೀಡುತ್ತಾ, ದುರ್ಬಲರಿಗೆ ಮನೆ ಕಟ್ಟಲು ಸಹಾಯ ಕೊಡುತ್ತಾ, ನಿರ್ಗತಿಕ ರೋಗಿಗಳಿಗೆ ಉಚಿತ ವೈದ್ಯಕೀಯ ನೆರವು ನೀಡುತ್ತಾ, ನೆರೆ ಬಿರುಗಾಳಿಯಂತಹ ಪ್ರಾಕೃತಿಕ ವಿಕೋಪಕ್ಕೆ ತುತ್ತಾದವರಿಗೆ ಮತ್ತು ಆಕಸ್ಮಿಕ ಆಘಾತ, ಸಂಕಷ್ಟಕ್ಕೀಡಾದವರಿಗೆ ಸಹಾಯವನ್ನು ನೀಡುತ್ತಾ ಸಮಾಜದ ತಳಮಟ್ಟದವರನ್ನು ಸಕಾಲಿಕವಾಗಿ ಆರ್ಥಿಕ ಮತ್ತು ಮಾನಸಿಕವಾಗಿ ಪ್ರೋತ್ಸಾಹಿಸುತ್ತಾ ಬಂದಿರುವುದು ಸ್ಪಷ್ಟವಾಗುತ್ತದೆ.

ದರ್ಗಾ ಸಮಿತಿಯು ಶಿಕ್ಷಣಕ್ಕೆ ತನ್ನ ಅಮೂಲ್ಯ ಕೊಡುಗೆಯನ್ನು ನೀಡಿದೆ. ಉಳ್ಳಾಲದಂತಹ ಗ್ರಾಮೀಣ ಪ್ರದೇಶದಲ್ಲಿ ಹಲವಾರು ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆ ನೀಡುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ. ಅದರಲ್ಲೂ ಶಿಕ್ಷಣದಲ್ಲಿ ಹಿಂದುಳಿದ ಮುಸ್ಲಿಂ ವಿದ್ಯಾರ್ಥಿಗಳಿಗೆ ದರ್ಗಾ ಆಡಳಿತ ಸಮಿತಿ ವತಿಯಿಂದ ಉಚಿತ ಪುಸ್ತಕ, ಬಟ್ಟೆ ಬರೆಗಳೊಂದಿಗೆ ಪ್ರೋತ್ಸಾಹ ಕಾರ್ಯವು ನಿರಂತರವಾಗಿ ನಡೆಯುತ್ತಿದೆ. ಮಾತ್ರವಲ್ಲದೆ ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದ ಮತ್ತು ತಾಂತ್ರಿಕ ಶಿಕ್ಷಣದ ಸಂಸ್ಥೆಗಳನ್ನು ನಡೆಸಿ ಧಾರ್ಮಿಕ ಕೇಂದ್ರವೊಂದು ಶಿಕ್ಷಣದ ಬಗ್ಗೆ ಯಾವ ರೀತಿಯ ಸಕಾರಾತ್ಮಕ ನಿಲುವು ಮತ್ತು ಕಾಳಜಿಯನ್ನು ತಾಳಬಹುದೆಂದು ತೋರಿಸಿಕೊಟ್ಟಿದೆ. ಇತ್ತೀಚೆಗೆ ವಿದ್ಯಾರ್ಥಿನಿಯರ ಪ್ರೌಢಶಾಲೆಯನ್ನು ಪದವಿಪೂರ್ವ ಕಾಲೇಜು ಆಗಿ ಮಾರ್ಪಡಿಸಿರುವುದು ಹೆಣ್ಮಕ್ಕಳಿಗೆ ವಿದ್ಯಾಭ್ಯಾಸ ನೀಡುವಲ್ಲಿ ಸಮಿತಿ ತಳೆದ ನಿಲುವನ್ನು ಪ್ರತಿಪಾದಿಸುತ್ತದೆ.

ಧಾರ್ಮಿಕ ಶಿಕ್ಷಣವನ್ನು ನೀಡುವಲ್ಲಿ ದರ್ಗಾ ಸಮಿತಿ ತಳೆದ ಆಸಕ್ತಿಯಿಂದಾಗಿ ಇಂದು ಉಳ್ಳಾಲ ಪರಿಸರದಲ್ಲಿ ಹತ್ತು ಹಲವು ಮದ್ರಸಗಳು, ಪ್ರಾರ್ಥನಾ ಮಸೀದಿಗಳು, ಮತ್ತು ಅರೇಬಿಕ್ ಕಾಲೇಜು

ತಲೆಎತ್ತಿ ಜಿಲ್ಲೆಯ ಹಾಗೂ ಪ್ರಾಯಶಃ ರಾಜ್ಯದಲ್ಲೇ ಒಂದು ದೊಡ್ಡ ಧಾರ್ಮಿಕ ಕೇಂದ್ರವಾಗಿ ಮಾರ್ಪಟ್ಟಿದೆ. ಧಾರ್ಮಿಕ ಉನ್ನತ ಶಿಕ್ಷಣ ನೀಡುವ ಉಳ್ಳಾಲದ ಅರೇಬಿಕ್ ಕಾಲೇಜು ರಾಜ್ಯಕ್ಕೆ ಮಾದರಿಯಾಗಿರುವ ಸಂಸ್ಥೆಯಾಗಿದೆ. ಈ ಎಲ್ಲಾ ಮದ್ರಸ ಮತ್ತು ಕಾಲೇಜುಗಳಲ್ಲಿ ಉಚಿತವಾಗಿ ಶಿಕ್ಷಣವನ್ನು ನೀಡಲಾಗುತ್ತಿದೆ. ಈ ಧಾರ್ಮಿಕ ಹಾಗೂ ಉನ್ನತ ಶಿಕ್ಷಂ ಕೇಂದ್ರಗಳಲ್ಲಿ ಸೇವೆ ಸಲ್ಲಿಸುವ ಸಿಬಂದಿ ವರ್ಗಕ್ಕೆ ವೇತನದ ಮೂಲವೂ ದರ್ಗಾದಿಂದಲೇ ಆಗಿದ್ದು, ಈ ಮೂಲಕ ಇಲ್ಲಿನ ಜನಸಾಮಾನ್ಯರ ಬದುಕಿಗೊಂದು ದಾರಿ ಒದಗಿಸುವುದರಲ್ಲಿ ದರ್ಗಾ ಸಮಿತಿಯ ಸೇವೆ ಉಲ್ಲೇಖನೀಯ.

ದರ್ಗಾದ ಆದಾಯದ ಶೇಕಡಾ 90 ಭಾಗ ಇದರ ಕೈ ಕೆಳಗೆ ಬರುವಂತಹ ಹಲವಾರು ಸಂಸ್ಥೆಗಳನ್ನು ಪುನರ್‌ನಿರ್ಮಾಣಗೊಳಿಸಲು ವ್ಯಯಿಸಲಾಗುತ್ತಿದೆ. ದರ್ಗಾದ ವತಿಯಿಂದ ವೈದ್ಯಕೀಯ, ಇಂಜಿಯನಿರಿಂಗ್ ಕಾಲೇಜುಗಳು, ಹಾಸ್ಟೆಲ್, ಅನಾಥಾಲಯ, ಯಾತ್ರಾರ್ಥಿಗಳ ಅನುಕೂಲತೆಗಾಗಿ ವಿಶ್ರಾಂತಿ ಗ್ರಹ, ಸಭಾ ಭವನ, ವಿವಿಧ ಸಣ್ಣ ಉದ್ಯಮಗಳನ್ನು ಸ್ಥಾಪಿಸುವ ಯೋಜನೆಗಳು ಸಮಿತಿಗೆ ಇವೆ. ಆದರೆ ಈ ಸಂಸ್ಥೆಗಳ ನಿರ್ವಹಣೆಯನ್ನು ಬದಲಾಗುತ್ತಿರುವ ಆರ್ಥಿಕ ಸ್ಥಿತಿಗತಿಗಳಲ್ಲಿ ವ್ಯವಸ್ಥಿತವಾಗಿ ನೋಡಿಕೊಳ್ಳುವುದೇ ಒಂದು ಗುರುತರವಾದ ಜವಾಬ್ದಾರಿಯಾಗಿದೆ. ಆರ್ಥಿಕ ಸಂಕಷ್ಟದಿಂದಾಗಿ ಸಾರಿಗೆ ವ್ಯವಸ್ಥೆಯನ್ನು ಮತ್ತು ವೈದ್ಯಕೀಯ ಸಂಸ್ಥೆಯ ಆಡಳಿತವನ್ನು ಹಸ್ತಾಂತರಿಸಿರುವುದನ್ನು ಗಮನಿಸುವಾಗ ದರ್ಗಾವು ತನ್ನ ಆರ್ಥಿಕ ನಿರ್ವಹಣೆಯಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿರುವುದು ಸ್ಪಷ್ಟವಾಗುತ್ತಿದೆ.

ಆದುದರಿಂದ ದರ್ಗಾದ ವತಿಯಿಂದ ನಡೆಯುತ್ತಿರುವ ತಾಂತ್ರಿಕ ವಿದ್ಯಾ ಸಂಸ್ಥೆಗಳಿಗೆ, ಸ್ವ ಉದ್ಯೋಗ ಸಂಸ್ಥೆಗಳಿಗೆ ಸರಕಾರ ಅನುದಾನವನ್ನು ನೀಡಿ ಇಂತಹ ಗ್ರಾಮೀಣ ಪ್ರದೇಶದ ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಮತ್ತಷ್ಟು ಅನುವು ಮಾಡಿಕೊಡಬೇಕಾಗಿದೆ. ಈ ನಿಟ್ಟಿನಲ್ಲಿ ದರ್ಗಾದ ಟ್ರಸ್ಟಿನ ಪದಾಧಿಕಾರಿಗಳು ಗಮನ ಕೊಡುವುದು ಸದ್ಯದ ಆದ್ಯತೆಯಾಗಿದೆ.

ಪ್ರತೀ ವರ್ಷದ ಬೇಸಿಗೆಯಲ್ಲಿ ಉಳ್ಳಾಲದಲ್ಲಿ ನೀರಿನ ಸಮಸ್ಯೆ ಸರ್ವೇ ಸಾಮಾನ್ಯವಾಗಿದೆ. ಈ ಸಂದರ್ಭದಲ್ಲಿ ಉಳ್ಳಾಲ, ಸೋಮೇಶ್ವರ, ಪೆರ್ಮನ್ನೂರು, ಮುನ್ನೂರು ಗ್ರಾಮಗಳ ಪ್ರದೇಶಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಉಳ್ಳಾಲದ ದರ್ಗಾದ ಬಾವಿಯಿಂದ ನಡೆಯುತ್ತಿರುವುದು ಮತ್ತೊಂದು ವಿಶಿಷ್ಟ ಜನಸೇವೆಯಾಗಿದೆ. ಇದಕ್ಕೆ ದರ್ಗಾದ ವತಿಯಿಂದ ವರ್ಷವೊಂದಕ್ಕೆ 2ರಿಂದ 3ಲಕ್ಷ ರೂಪಾಯಿಯವರೇಗೆ ಖರ್ಚಾಗುತ್ತಿದ್ದು, ಇದು ಸಾರ್ವಜನಿಕ ಹಿತಾಸಕ್ತಿಯ ಬಗ್ಗೆ ದರ್ಗಾ ಸಮಿತಿಗಿರುವ ಕಾಳಜಿಯನ್ನು ಇದು ತೋರಿಸುತ್ತದೆ.

ಉಳ್ಳಾಲದ ಜನರಿಗೆ ಸಾರಿಗೆ, ಸಾಗಾಟದ ಅನುಕೂಲತೆಗಾಗಿ 'ಮದನಿ ಟ್ರಾನ್ಸ್‌ಪೋರ್ಟ್' ಎಂಬ ಬಸ್ಸು ಸೌಕರ್ಯವನ್ನು ದರ್ಗಾ ವತಿಯಿಂದ ಕಲ್ಪಿಸಲಾಗಿದೆ. ಕಳೆದ 25 ವರ್ಷಗಳಿಂದ ಪ್ರಯಾಣ

ಕಾರ್ಯ ನಿರ್ವಹಿಸುತ್ತಿರುವ ಈ ಸೌಕರ್ಯವು ದರ್ಗಾದ ಮತ್ತೊಂದು ಗಮನೀಯ ಜನಪರ ಕಾರ್ಯವಾಗಿದೆ.

ಸೈಯ್ಯದ್ ಮದನಿ ಚಾರಿಟೇಬಲ್ ಆಸ್ಪತ್ರೆಯನ್ನು ದರ್ಗಾದ ವತಿಯಿಂದ ನಿರ್ಮಿಸಿದ್ದು ಗ್ರಾಮೀಣ ಪ್ರದೇಶದಲ್ಲಿ ಬಡಜನರಿಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸಿದ ಹಿರಿಮೆ ದರ್ಗಾ ಸಮಿತಿಯದ್ದಾಗಿದೆ. 200 ಹಾಸಿಗೆಯ ವ್ಯವಸ್ಥೆಯಿರುವ ಈ ಆಸ್ಪತ್ರೆಯಲ್ಲಿ ನಾನಾ ರೀತಿಯ ಸೌಕರ್ಯಗಳನ್ನು ಈ ಪ್ರದೇಶದ ಜನರಿಗೆ ಒದಗಿಸಲಾಗಿದ್ದು ಬಡವರಿಗೆ ಹಾಗೂ ನಿರ್ಗತಿಕರಿಗೆ ಉಚಿತ ವೈದ್ಯಕೀಯ ಸೇವೆಯನ್ನು ನೀಡಲಾಗುತ್ತಿದೆ.

ಒಟ್ಟು ನಾಲ್ಕು ಕಡೆ ನಡೆಯುವ ಸುಸಜ್ಜಿತ ವ್ಯಾಯಾಮ ಶಾಲೆಗಳು ಯುವಜನರ ಆರೋಗ್ಯದ ಬಗ್ಗೆ ಇರುವ ಕಾಳಜಿಯನ್ನು ಸ್ಪಷ್ಟಪಡಿಸುತ್ತದೆ.

ದರ್ಗಾದ ಭೇಟಿಗೆ ಆಗಮಿಸುವ ಹಾಗೂ ತಂಗುವ ಪ್ರಯಾಣಿಕರಿಗೆ ಉಚಿತ ಊಟದ ವ್ಯವಸ್ಥೆಯನ್ನು ಮಾಡಲಾಗಿದ್ದು, ಇದರಿಂದ ಪ್ರವಾಸಿಗರಿಗೆ ಹಾಗೂ ಭಕ್ತರಿಗೆ ಪ್ರಯೋಜನವಾಗಿದೆ. ಉಳ್ಳಾಲದ ಬಡ ಸ್ತ್ರೀಯರು ಬೀಡಿ ಕಟ್ಟಿ ಜೀವನ ನಡೆಸುತ್ತಿರುವುದರಿಂದಾಗಿ ಅವರಿಗೆ ಬರುವ ರೋಗಗಳನ್ನು ತಡೆಯಲು ಹಾಗೂ ಅವರಿಗೆ ಸ್ವ ಉದ್ಯೋಗವನ್ನು ಕಲ್ಪಿಸಲು ಹೊಲಿಗೆ ತರಬೇತಿ ಕೇಂದ್ರಗಳನ್ನು ಹಲವು ಕಡೆ ನಿರ್ಮಿಸಿ, ಸಮಿತಿಯು ಸ್ವ ಉದ್ಯೋಗಕ್ಕೆ ಪ್ರೇರಣೆ ನೀಡಿದೆ. ಇಂತಹ ಹೊಲಿಗೆ ಕೇಂದ್ರಗಳಲ್ಲಿ ಕಲಿತು ದರ್ಜಿಗಳಾಗಿ ಕೆಲಸ ಮಾಡುತ್ತಿರುವ ಹಲವು ಸ್ತ್ರೀಯರು ಉಳ್ಳಾಲ ಪರಿಸರದಲ್ಲಿದ್ದಾರೆ.

ಟ್ರಸ್ಟಿನ ವತಿಯಿಂದ ನಡೆಯುವ ಹಲವಾರು ಯೋಜನೆಗಳನ್ನು ಸರಕಾರದ ಗಮನಕ್ಕೆ ತರಬೇಕಾದ ಕಾರ್ಯ ನಡೆಯಬೇಕಿದೆ. ಉಳ್ಳಾಲದಲ್ಲಿ ಶೇ. 40ರಷ್ಟಿರುವ ಮುಸ್ಲಿಮರ ಧಾರ್ಮಿಕ ಕೇಂದ್ರವಾದ ಈ ದರ್ಗಾದ ವತಿಯಿಂದ ಉನ್ನತ ಶಿಕ್ಷಣಕ್ಕೆ ಹಾಗೂ ಇನ್ನಿತರ ಯೋಜನೆಗಳಿಗೆ ಸಾಲ ಸೌಲಭ್ಯಗಳನ್ನು ಪಡೆಯುವ ದಿಸೆಯಲ್ಲಿ ಪ್ರಯತ್ನ ನಡೆಸುವುದು, ಸಹಕಾರ ನೀಡುವುದು ಇಲ್ಲಿನ ಸುಶಿಕ್ಷಿತರ, ಪದಾಧಿಕಾರಿಗಳ ಹಾಗೂ ಹಿತೈಷಿಗಳ ಕರ್ತವ್ಯವಾಗಿದೆ.

ಕೋಮು ಉದ್ವಿಘ್ನತೆ ಆಗಾಗ ಉಂಟಾಗುವ ಉಳ್ಳಾಲ ಪ್ರದೇಶದಲ್ಲಿ ಸಾಮರಸ್ಯವನ್ನು ಕಾಪಾಡುವ ಕೆಲಸವೂ ನಡೆಯಬೇಕಾಗಿದೆ. ಧಾರ್ಮಿಕ ಸೌಹಾರ್ದತೆಯ ವಾತಾವರಣವನ್ನು ನಿರ್ಮಿಸುವುದಕ್ಕಾಗಿ ಸರ್ವಧರ್ಮ ಸಮ್ಮೇಳನಗಳನ್ನು ಸಂಯೋಜಿಸಬಹುದು. ಇಂತಹ ಸಮ್ಮೇಳನಗಳಲ್ಲಿ ಎಲ್ಲಾ ಧರ್ಮಗಳ ಬಗ್ಗೆ ಚಿಂತನ-ಮಂಥನ ನಡೆಸುವಂತಹ ಅವಕಾಶವಾಗಬೇಕು. ತೆರೆದ ಮನಸ್ಸು, ಅನ್ವಯಿಕ ಚರ್ಚೆ,

ವಿಮರ್ಶೆ, ಗೋಷ್ಠಿಗಳ ಮೂಲಕ ಸಾಮರಸ್ಯದ ಮೂಲ ನೆಲೆ ಯಾವ ರೂಪದಲ್ಲಿ ಇತ್ತು, ಹೇಗೆ ಇತ್ತು, ಪ್ರಸಕ್ತ ಯಾವ ರೀತಿಯಲ್ಲಿದೆ ಎಂಬಿತ್ಯಾದಿ ವಿಷಯಗಳ ಬಗ್ಗೆ ಗಹನವಾದ ಅಧ್ಯಯನ ನಡೆಯಬೇಕು. ಆ ಮೂಲಕ ಧಾರ್ಮಿಕ ಸಾಮರಸ್ಯವನ್ನು ಎತ್ತಿ ಹಿಡಿಯುವ ಅಂಶಗಳ ಅನುಷ್ಠಾನಕ್ಕೆ ಒತ್ತು ನೀಡಬೇಕಾದುದು ಇಂದಿನ ಅವಶ್ಯಕತೆ. ಇಂತಹ ಕಾರ್ಯಕ್ರಮಗಳು ಜನಸಾಮಾನ್ಯರಿಗೆ ತಲುಪುವಂತೆ ಆಯೋಜಿಸಬೇಕು. ಈ ನಿಟ್ಟಿನಲ್ಲಿ ದರ್ಗಾ ಸಮಿತಿಯ ಪದಾಧಿಕಾರಿಗಳು ತಮ್ಮ ಗಮನವನ್ನು ನೀಡಬೇಕಾಗಿದೆ.

ವಿವಿಧ ಧರ್ಮೀಯರ ಹಬ್ಬ ಹರಿದಿನಗಳನ್ನು ಪರಸ್ಪರ ಆಚರಿಸುವುದು, ಶುಭಾಶಯಗಳನ್ನು ವಿನಿಯೋಗಿಸಿಕೊಳ್ಳುವ ಮೂಲಕ ಸೌಹಾರ್ದತೆಗೆ ಒತ್ತು ನೀಡಬೇಕಾಗಿದೆ. ದಸರಾ, ದೀಪಾವಳಿ, ರಮ್ಜಾನ್, ಕ್ರಿಸ್‌ಮಸ್ ಮುಂತಾದ ಹಬ್ಬಗಳನ್ನು ಸಾಂಕೇತಿಕವಾಗಿ ಆಚರಿಸಲು ಅವಕಾಶ ನೀಡಿ ಸಾಮರಸ್ಯವನ್ನು ಸಾರಬಹುದು. ಮಹಾತ್ಮರ ಜನ್ಮ ದಿನದ ಆಚರಣೆಗಳನ್ನು ಜೊತೆಯಾಗಿ ಆಚರಿಸಿಕೊಂಡು ಬರುವುದು. ಭಗವಾನ್ ಕೃಷ್ಣ, ಏಸುಕ್ರಿಸ್ತ, ಮಹಮ್ಮದ್ ಪೈಗಂಬರ್ ಅವರ ಸಂದೇಶಗಳನ್ನು ಈ ಸಂದರ್ಭದಲ್ಲಿ ಜನರಿಗೆ ಸಾರುವುದು ಮುಂತಾದ ಸೌಹಾರ್ದಯುತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು.

ಉರೂಸಿನ ಸಂದರ್ಭದಲ್ಲಿ ಧಾರ್ಮಿಕ ಸಾಮರಸ್ಯವನ್ನು ಸಾರಲು ಅವಕಾಶವನ್ನು ಕಲ್ಪಿಸಬಹುದು. ವಿವಿಧ ಧರ್ಮಗಳ ಚಿಂತಕರನ್ನು ಆಮಂತ್ರಿಸಿ ಸಾಮರಸ್ಯದ ಬೋಧನೆಯನ್ನು ಜನರಿಗೆ ನೀಡುವುದಕ್ಕಾಗಿಯೇ ಒಂದು ದಿನವನ್ನು ಮೀಸಲಿಡಬಹುದು.

ಕೋಮು ಸೌಹಾರ್ದಕ್ಕೆ ಉಳ್ಳಾಲ ದರ್ಗಾ ಆಡಳಿತ ಸಮಿತಿ ಆದ್ಯತೆಯನ್ನು ನೀಡುತ್ತಾ ಬಂದಿದೆ. ಇತ್ತೀಚೆಗೆ ಭಯೋತ್ಪಾದಕ ವಿರೋಧಿ ಚಳುವಳಿಯನ್ನು ಸಂಘಟಿಸುವಲ್ಲಿ ಉಳ್ಳಾಲ ದರ್ಗಾ ಸಮಿತಿ ಹಾಗೂ ಪದಾಧಿಕಾರಿಗಳ ಪಾತ್ರ ಗಣನೀಯವಾದುದು. ಇದರ ಜೊತೆಯಲ್ಲೇ ಜನಪರ ಕಾರ್ಯಗಳು ಇನ್ನಷ್ಟು ವ್ಯವಸ್ಥಿತವಾಗಿ ನಡೆಯಬೇಕಾಗಿದೆ. ಉಳ್ಳಾಲ ದರ್ಗಾವನ್ನು ಕೇಂದ್ರವಾಗಿಟ್ಟುಕೊಂಡು ವಾರ್ಷಿಕ ಬೃಹತ್ ಸಾಮೂಹಿಕ ವಿವಾಹ ನಡೆಯಬೇಕಾದುದು ಕಾಲದ ಬೇಡಿಕೆಯಾಗಿದೆ. ವರದಕ್ಷಿಣೆ ರಹಿತ ಮದುವೆಯಾಗಲು ಯುವಕರನ್ನು ಹುರಿದುಂಬಿಸಿ ಅಂತಹ ಸಾಮಾಜಿಕ ಅನಿಷ್ಟಗಳಿಗೆ ಯುವಕರು ಬಲಿಯಾಗುವುದನ್ನು ತಪ್ಪಿಸಬೇಕು. ಈ ದಿಸೆಯಲ್ಲಿ ಯುವಕರಿಗೆ ಮಾರ್ಗದರ್ಶನ ನೀಡಲು ದರ್ಗಾ ಸಮಿತಿಯು ನಾಯಕತ್ವ ವಹಿಸಬೇಕು.

ಸಾರ್ವಜನಿಕ ಅನ್ನದಾನ ಕಾರ್ಯಕ್ರಮಗಳನ್ನು ದರ್ಗಾದ ವತಿಯಿಂದ ದಾರ್ಮಿಕ ಸೌಹಾರ್ದದ ಉದ್ದೇಶದಿಂದ ನೆಲೆಯಲ್ಲಿ ಏರ್ಪಡಿಸಬಹುದು. ಈಗಾಗಲೇ ಯಾತ್ರಾತ್ರಿಗಳಿಗೆ ದಿನವಹಿ ಊಟದ ವ್ಯವಸ್ಥೆಯನ್ನು ಮಾಡಲಾಗಿರುವುದು ಸ್ತುತ್ಯರ್ಹ ಕಾರ್ಯಕ್ರಮವಾಗಿದೆ. ಇದರ ಜೊತೆಗೆ ವಾರ್ಷಿಕ ಅಥವಾ

ಅರ್ಧವಾರ್ಷಿಕ 'ಸೌಹಾರ್ದ ಸಂಗಮ'ದ ಉದ್ದೇಶದೊಂದಿಗೆ ಇಂತಹ ಕಾರ್ಯಕ್ರಮಗಳನ್ನು ಯೋಜಿಸಿಕೊಂಡು ಸಾಮಾಜಿಕ ಸ್ವಾಸ್ಥ್ಯಕ್ಕೆ ಮತ್ತಷ್ಟು ಉತ್ತೇಜನ ನೀಡಬಹುದು.

ಈ ನಿಟ್ಟಿನಲ್ಲಿ ಈಗಾಗಲೇ ದರ್ಗಾವು ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ದರ್ಗಾದ ಸೌಹಾರ್ದಯುತ ಪರಂಪರೆ ಮತ್ತುಷ್ಟು ಮುಂದುವರಿಯಲು ಮೇಲೆ ನಮೂದಿಸಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದರ ಮೂಲಕ ಸಮಾಜದಲ್ಲಿ ಕೋಮು ಸೌಹಾರ್ದಕ್ಕೆ ಮಾರಕ ಹೊಡೆತವಿಕ್ಕುವವರ ಪ್ರಯತ್ನವನ್ನು ಖಂಡಿತವಾಗಿಯೂ ತಹಬಂದಿಗೆ ತರಬಹುದು.

ಉಳ್ಳಾಲ ಸಂತ ಶರೀಫುಲ್ ಮದನಿ ದರ್ಗಾವು ಇಂದು ದ. ಕನ್ನಡ ಮಾತ್ರವಲ್ಲದೆ ರಾಜ್ಯದ ಹಾಗೂ ದಕ್ಷಿಣ ಭಾರತದ ಒಂದು ದೊಡ್ಡ ಧಾರ್ಮಿಕ ಕೇಂದ್ರವಾಗಿ ಹಾಗೂ ಯಾತ್ರಾ ಕೇಂದ್ರವಾಗಿ ಮಾರ್ಪಟ್ಟಿದೆ. ಉಳ್ಳಾಲ ಪರಿಸರ ಹಲವಾರು ಬೇಡಿಕೆಗಳಿಗೆ ಸ್ಪಂದಿಸಿದ ಈ ಧಾರ್ಮಿಕ ಕೇಂದ್ರ ಜಿಲ್ಲೆಯ ಒಂದು ಪ್ರವಾಸಿ ಕೇಂದ್ರವೂ ಆಗಿದೆ. ಇಲ್ಲಿನ ಜನಸಾಮಾನ್ಯರ ಜೀವನಮಟ್ಟ ಶಿಕ್ಷಣ ಮಟ್ಟವನ್ನು ಸುಧಾರಿಸುವಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿರುವುದನ್ನು ಕಾಣಬಹುದು.

ಉಳ್ಳಾಲ ಸಂತ ಶರೀಫುಲ್ ಮದನಿ ದರ್ಗಾ ಭಾರತದ 3ನೇ ಅತಿದೊಡ್ಡ ದರ್ಗಾವಾಗಿದ್ದು ಯಾತ್ರಾರ್ಥಿಗಳ ಸೇರುವಿಕೆಯಲ್ಲಿ ದಕ್ಷಿಣ ಭಾರತದಲ್ಲಿ ಎರಡನೇ ಸ್ಥಾನದಲ್ಲಿದೆ. ಬಹುಜನರ ನಂಬಿಕೆಯ ಕೇಂದ್ರವಾಗಿ ಜಿಲ್ಲೆಯ ಅಪೂರ್ವ ಧಾರ್ಮಿಕ ನೆಲೆಯಾಗಿ, ಕರ್ನಾಟಕದಲ್ಲಿರುವ ಏಕೈಕ ಅರೇಬಿಕ್ ಕಾಲೇಜಿರುವ ತಾಣವಾಗಿ, ಸಾವಿರಾರು ವಿದ್ಯಾರ್ಥಿಗಳು ಅರ್ಜಿಸುತ್ತಿರುವ ಶಿಕ್ಷಣದ ನೆಲೆಯಾಗಿ, ನೂರಾರು ಸಿಬ್ಬಂದಿಗಳ ಜೀವನೋಪಾಯದ ಮೂಲವಾಗಿ, ಪ್ರವಾಸಿಗರ ಆಕರ್ಷಕ ಯಾತ್ರಾ ಸ್ಥಳವಾಗಿ ಜಿಲ್ಲೆಯಲ್ಲಿ ವೈವಿಧ್ಯವನ್ನೂ ಸಾರುವ ಕೇಂದ್ರವಾಗಿದೆ.

ಅನುಬಂಧ

ಅನುಬಂಧ 1

ಉಳ್ಳಾಲ ಖಾಝಿ ಮತ್ತು ಅರೇಬಿಕ್ ಕಾಲೇಜು ಪ್ರಾಂಶುಪಾಲರು

ಉಳ್ಳಾಲದಲ್ಲಿ ನಿರಂತರವಾದ 58 ವರ್ಷಗಳ ಸಾರ್ಥಕ ಸೇವೆ ನೀಡಿ ಇದನ್ನೊಂದು ಪ್ರಮುಖ ಧಾರ್ಮಿಕ ಕೇಂದ್ರವನ್ನಾಗಿಸಿದ ವ್ಯಕ್ತಿಯೆಂದರೆ ಅಲ್‌ಹಾಜ್ ಸೈಯ್ಯದ್ ಅಬ್ದುಲ್‌ರಹಿಮಾನ್ ಅಲ್ ಬುಖಾರಿ ತಂಙಳ್. ಕ್ರಿ. ಶ. 1951ರಲ್ಲಿ ಸೀಮಿತ ಸೌಕರ್ಯ, ಸವಲತ್ತು, ಅಪರಿಚಿತ ನಾಡು ಹಾಗೂ ಭಾಷೆಯ ಸಮಸ್ಯೆಗಳ ಬಗ್ಗೆ ಯೋಚಿಸದೆ, ಉಳ್ಳಾಲ ಮತ್ತು ಪರಿಸರದ ಜನತೆಯ ಧಾರ್ಮಿಕ ಒಳಿತನ್ನು ಮಾತ್ರ ಗುರಿಯಾಗಿಟ್ಟುಕೊಂಡು ಅವರು ಸೇವಾನಿರತರಾದರು. ಅರೇಬಿಕ್ ವಿದ್ಯಾಲಯವನ್ನು ನಡೆಸುತ್ತಾ ಬಂದರು. ಕ್ರಮೇಣ ಅದು ಅರೇಬಿಕ್ ಕಾಲೇಜಾಗಿ ಬದಲಾದಾಗ 1971ರಲ್ಲಿ ತಂಙಳ್‌ರವರು ಪ್ರಾಂಶುಪಾಲರಾದರು. ತದನಂತರ 1978ರಲ್ಲಿ ಉಳ್ಳಾಲ ಖಾಝಿ ಸ್ಥಾನವನ್ನು ಅಲಂಕರಿಸಿದರು. ಪ್ರಸಕ್ತ 88ರ ಇಳಿ ವಯಸ್ಸಿನಲ್ಲಿಯೂ ಅವರು ಲವಲವಿಕೆಯಿಂದ ನಿರಂತರ ಬೋಧನೆ, ಪ್ರವಚನ, ಧಾರ್ಮಿಕ ನೇತೃತ್ವ ಆರಾಧನೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾರೆ. ಕೇರಳದ ಕಲ್ಲಿಕೋಟೆ ಜಿಲ್ಲೆಯ ಕರ್‌ವನ್‌ತುರ್ತಿ ಎಂಬಲ್ಲಿ ಜನಿಸಿದ ಇವರು ಆಧ್ಯಾತ್ಮ ದೀಕ್ಷೆಗಳನ್ನೆಲ್ಲಾ ಕೇರಳದಲ್ಲೇ ಪೂರೈಸಿ, ತಮಿಳುನಾಡಿನ ವೆಲ್ಲೂರಿನಲ್ಲಿ ಅರೇಬಿಕ್ ಪದವಿ ಶಿಕ್ಷಣ ಪೂರೈಸಿ ಸೇವಾ ರಂಗಕ್ಕೆ ಕರ್ನಾಟಕಕ್ಕೆ ಆಗಮಿಸಿದರು. ಈ ನಿಟ್ಟಿನಲ್ಲಿ ಗಮನಿಸಿದರೆ ತಂಙಳ್‌ರವರು ಮೂರು ರಾಜ್ಯಗಳ ಸಂಪರ್ಕ ಹೊಂದಿದ ಅಂತರ್‌ರಾಜ್ಯ ಧಾರ್ಮಿಕ ಧುರೀಣರಾಗಿದ್ದಾರೆ. ಉಳ್ಳಾಲದಲ್ಲೇ ತಮ್ಮ ಸರ್ವಸ್ವವನ್ನು ಅರ್ಪಿಸಿ, ವಿದ್ವತ್ ಪ್ರತಿಭೆಗಳನ್ನೆಲ್ಲ ವ್ಯಯಿಸಿದ್ದರಿಂದ 'ಉಳ್ಳಾಲ ತಂಙಳ್' ಎಂದೇ ಪ್ರಸಿದ್ಧರಾಗಿರುವರು.

ಇವರ ಧಾರ್ಮಿಕ ನೇತೃತ್ವದಲ್ಲಿ ಹಲವಾರು ಧಾರ್ಮಿಕ ಕಾರ್ಯಕ್ರಮಗಳು, ಪ್ರವಚನಗಳು, ವಿದ್ಯಾಲಯಗಳು ಹಾಗೂ ಧಾರ್ಮಿಕ ಸಂಸ್ಥೆಗಳು ಉಳ್ಳಾಲ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ 58 ವರ್ಷಗಳಿಂದಲೂ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಇವರ ನೇತೃತ್ವದಲ್ಲಿ ಧಾರ್ಮಿಕ ರಂಗದಲ್ಲಿ ಹೊಸ ಆಯಾಮ ಸೃಷ್ಟಿಯಾಯಿತು ಮಾತ್ರವಲ್ಲದೆ ಸಾಮಾಜಿಕ ರಂಗದಲ್ಲಿ ದರ್ಗಾ ವತಿಯಿಂದ ಲವಲವಿಕೆಯ ಕಾರ್ಯಕ್ರಮಗಳ ಚಿಗುರೊಡೆಯಿತು. ಆ ಮೂಲಕ ಉಳ್ಳಾಲವು ದ. ಕನ್ನಡ ಜಿಲ್ಲೆಯಲ್ಲಿ ಮಾತ್ರವಲ್ಲ ಕರ್ನಾಟಕ ರಾಜ್ಯದಲ್ಲಿ ದೊಡ್ಡ ಧಾರ್ಮಿಕ ಜ್ಞಾನದ ಕೇಂದ್ರವಾಗಿ ಬೆಳೆದು ನಿಂತಿದೆ.

ಉಳ್ಳಾಲ ತಂಙಳ್‌ರವರು 1951ರಿಂದ ಸಮಸ್ತ ಕೇರಳ ಜಂಇಯತ್ತುಲ್ ಉಲೇಮಾದ ಸದಸ್ಯರಾಗಿ, ಉಪಾಧ್ಯಕ್ಷರಾಗಿ ಹಾಗೂ 1989ರಲ್ಲಿ ಸಮಸ್ತದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದವರು. ಸಮಸ್ತ ಕೇರಳ

ವಿದ್ಯಾಭ್ಯಾಸ ಬೋರ್ಡಿನ ಅಧ್ಯಕ್ಷರಾಗಿ, ಕಾಸರಗೋಡಿನ ಜಾಮಿಯಾ ಸಅದಿಯ ಅರೇಬಿಕ್ ಕಾಲೇಜಿನ 38 ವರ್ಷಗಳಿಂದೀಚೆಗೆ ಅಧ್ಯಕ್ಷರಾಗಿ ಹಾಗೂ ಉಳ್ಳಾಲದ ಪ್ರಿನ್ಸಿಪಾಲ್ ಮತ್ತು ಖಾಝಿಯಾಗಿ ಅಮಿತ ಕಾರ್ಯಭಾರ ಮತ್ತು ನಿಬಿಡತೆಯಿಂದೊಡಗೂಡಿದ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವರು. ಅದೇ ರೀತಿ ಮರ್ಕಝ್ ಸಖಾಫತ್ ಸುನ್ನಿಯ್ಯ ಮತ್ತು ಅಖಿಲ ಭಾರತ ಸುನ್ನೀ ಜಮಾತುಲ್ ಉಲೇಮಾದ ಸಲಹಾ ಸಮಿತಿ ಸದಸ್ಯರಾಗಿರುವರು. ಈಜಿಪ್ಟ್, ಇರಾಕ್, ಯುಎಇ, ಸೌದಿ ಅರೇಬಿಯಾ, ಬಹರೈನ್, ಮಲೇಶ್ಯಾ ಮುಂತಾದ ದೇಶಗಳಲ್ಲಿ ಸಂಚರಿಸಿರುವ ಇವರನ್ನು, ಉಳ್ಳಾಲ ಮದನೀಸ್ ಸಂಘಟನೆಯ ವತಿಯಿಂದ ಕ್ರಿ. ಶ. 2000ದಲ್ಲಿ ಅಭಿನಂದನಾ ಸಮಾರಂಭದ ಮೂಲಕ ಸನ್ಮಾನಿಸಲಾಗಿದೆ. ಅವರ 50ನೇ ವರ್ಷದ ಸೇವೆಯ ಸವಿ ನೆನಪಿಗೋಸ್ಕರ ನಡೆದ ಈ ಸನ್ಮಾನದಲ್ಲಿ ಅವರಿಗೆ 'ತಾಜುಲ್ ಉಲಮಾ' ಎಂಬ ಶಿರೋನಾಮೆಯನ್ನು ನೀಡಲಾಯಿತು.

ಅರೇಬಿಕ್ ಕಾಲೇಜಿನಲ್ಲಿ ಕಳೆದ 36 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಕೆ. ಎನ್. ಅಬ್ದುಲ್ಲ ಮುಸ್ಲಿಯಾರ್ ತಾಯಕ್ಕೋಡ್, ಬಿ. ಮಹಮ್ಮದ್ ಮುಸ್ಲಿಯಾರ್ ಚಿತ್ತಾರ್, 33 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಸ್ಥಳೀಯರಾದ ಎಂ. ಅಹಮ್ಮದ್ ಬಾವ ಮುಸ್ಲಿಯಾರ್, 18 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಸೈಯದ್ ಅಬೂಬಕ್ಕರ್ ತಂಙಳ್ ಮತ್ತು 23 ವರ್ಷಗಳಿಂದ ಅರೇಬಿಕ್ ಕಾಲೇಜಿನ ಪ್ರಾಧ್ಯಾಪಕರಾಗಿರುವ ಸಯ್ಯದ್ ಅಲಿಯುಲ್ ಹಾದಿ ತಂಙಳ್ ಇವರೆಲ್ಲರು ತಮ್ಮ ನಿಸ್ವಾರ್ಥ ಸೇವೆಯಿಂದ ಸಾವಿರಾರು ಮಂದಿ ಶಿಷ್ಯ ವೃಂದವನ್ನು ನಿರ್ಮಿಸಿ ಅರೇಬಿಕ್ ಕಾಲೇಜಿನ ಯಶಸ್ಸಿಗೆ ಕಾರಣೀಕರ್ತರಾಗಿದ್ದಾರೆ.

ಅನುಬಂಧ 2

ಉಳ್ಳಾಲದ ದರ್ಗಾದಲ್ಲಿ ಸೇವೆ ಸಲ್ಲಿಸಿದ ಪ್ರಮುಖ ಅಧ್ಯಕ್ಷರುಗಳು

1. 1952ರ ವರೇಗೆ : ಮಂಚಿಲ ಹಮ್ಮಬ್ಬ
2. 1952ರಿಂದ 1973 ರವರೇಗೆ : ಯು. ಎಂ. ಇಬ್ರಾಹಿಂ
3. 1973 ರಿಂದ 2007ರ ವರೇಗೆ : ಯು. ಕೆ. ಇಬ್ರಾಹಿಂ
4. 2007ರಿಂದ ಇಂದಿನವರೆಗೂ ಹಾಜಿ ಕಣಚೂರು ಯು. ಕೆ. ಮೋನುರವರು ಅಧ್ಯಕ್ಷರುಗಳಾಗಿ ಮಹತ್ತರವಾದ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಹಾಜಿ ಯು. ಕೆ. ಇಬ್ರಾಹಿಂ

ಧಾರ್ಮಿಕ ಲೌಕಿಕ ವಿಧ್ಯಾಭ್ಯಾಸದ ಕೊರತೆಯಿದ್ದ ಉಳ್ಳಾಲದಲ್ಲಿ ಎರಡೂ ಶಿಕ್ಷಣಗಳಿಗೆ ಹೆಚ್ಚು ಮಹತ್ವ ನೀಡಿ ಯಶಸ್ಸು ಗಳಿಸಿಕೊಟ್ಟವರಲ್ಲಿ ಉಳ್ಳಾಲದ ಈ ಹಿಂದಿನ ಅಧ್ಯಕ್ಷರಾದ ದಿ। ಹಾಜಿ ಯು. ಕೆ. ಇಬ್ರಾಹಿಂರವರು ಪ್ರಮುಖರಾಗಿದ್ದಾರೆ. ಆರಂಭದಲ್ಲೇ ಸಾಮಾಜಿಕ ಸೇವಕರಾಗಿದ್ದ ಇವರು ಉಳ್ಳಾಲದ ಪಂಚಾಯತು ಸದಸ್ಯರಾಗಿ ಆಯ್ಕೆಯಾದರು. ಆರಂಭದಲ್ಲಿ ಉಳ್ಳಾಲ ದರ್ಗಾ ಆಡಳಿತ ಸಮಿತಿಯ ಸದಸ್ಯರಾಗಿ, ತದ ನಂತರ 9 ವರ್ಷಗಳ ಕಾಲ ಉಪಾಧ್ಯಕ್ಷರಾಗಿ ಹಾಗೂ 1973ರಿಂದ ಅಧ್ಯಕ್ಷರಾಗಿ 34 ವರ್ಷ ಸಮರ್ಥವಾಗಿ ಕಾರ್ಯನಿರ್ವಹಿಸಿದ ಹಿರಿಮೆ ಇವರದ್ದು. ಬಾಲ್ಯದಿಂದಲೇ ಶ್ರಮಜೀವನವನ್ನು ನಡೆಸಿದ ಇವರು ಸಮಾಜದ ಬಡವರ ಹಾಗೂ ನಿರ್ಗತಿಕರ ಏಳಿಗೆಯ ಬಗ್ಗೆ ತೀವ್ರ ಕಾಳಜಿ ಉಳ್ಳವರಾಗಿದ್ದರು. ಸೆಯ್ಯದ್ ಮದನಿ ಅರೇಬಿಕ್ ವಿದ್ಯಾಸಂಸ್ಥೆಗಳ ಟ್ರಸ್ಟ್, ಸೈಯದ್ ಮದನಿ ಚಾರಿಟೇಬಲ್ ಟ್ರಸ್ಟ್ ಮತ್ತು ಸೈಯ್ಯದ್ ಮದನಿ ವಿವಿದೋದ್ಧೇಶ ಸಹಕಾರಿ ಸೊಸೈಟಿಯ ಅಧ್ಯಕ್ಷರಾಗಿ ಕೂಡಾ ಸೇವೆ ಸಲ್ಲಿಸಿರುವರು. 1973ರಿಂದೀಚೆಗೆ ಉಳ್ಳಾಲದ ಶಾಂತಿ ಸಮಿತಿಯ ಅಧ್ಯಕ್ಷರಾಗಿ, ಕೋಮು ಸೌಹಾರ್ದಕ್ಕೆ ನಿರಂತರವಾಗಿ ಶ್ರಮಿಸಿದರು. 1994ರಿಂದ ಕರ್ನಾಟಕ ಹಜ್ ಕಮಿಟಿಯ ಸದಸ್ಯರಾಗಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆ ಪ್ರಧಾನಮಂತ್ರಿಗಳ 15 ಅಂಶ ಕಾರ್ಯಕ್ರಮದ ಸದಸ್ಯರಾಗಿಯೂ ದುಡಿದಿದ್ದಾರೆ. ಮಾತ್ರವಲ್ಲದೆ ದಕ್ಷಿಣ ಕನ್ನಡ ಜಿಲ್ಲಾ ವಕ್ಫ್ ಸಮಿತಿಯ ಸದಸ್ಯರಾಗಿದ್ದರು.

ಇವರ ಸಾಮಾಜಿಕ ಸೇವೆಯನ್ನು ಪರಿಗಣಿಸಿ ಉಳ್ಳಾಲದ ಜೂನಿಯರ್ ಚೇಂಬರ್ 1996ರಲ್ಲಿ ಮತ್ತು ಬ್ಯಾರೀಸ್ ವೆಲ್‌ಫೇರ್ ಸಂಘಟನೆ 1997ರಲ್ಲಿ ಇವರನ್ನು ಸನ್ಮಾನಿಸಿದೆ. ಕೋಮುಸೌಹಾರ್ದತೆಗಾಗಿ ಅವರು ನೀಡಿದ ಹಲವು ಯೋಜನೆಗಳು ಜನಜನಿತವಾಗಿತ್ತು. ಎಲ್ಲಾ ಜಾತಿ ಬಾಂಧವರನ್ನು ಪ್ರೀತ್ಯಾದರಗಳಿಂದ ಕಾಣುತ್ತಿದ್ದರು. ಇವರ ಬಗ್ಗೆ ಸರ್ವಬಾಂಧವರಿಗೂ ಗೌರವ ಆದರಗಳಿತ್ತು. ಈ

ಸಾಧನೆಗಾಗಿ 1997ರಲ್ಲಿ ದಕ್ಷಿಣ ಕನ್ನಡ ಜಿಲ್ಲಾಡಳಿತ 'ಗಣರಾಜ್ಯೋತ್ಸವ' ಪ್ರಶಸ್ತಿಯನ್ನು ಇವರಿಗೆ ಪ್ರಾಧಾನ್ಯ ಮಾಡಿದೆ. ಜನಕಲ್ಯಾಣಕ್ಕೆ ನೀಡಿದ ಅಮೂಲ್ಯ ಸೇವೆಗೆ ಕೊಲ್ಯ ಶ್ರೀ ರಮಾನಂದಾಶ್ರಮ ಟ್ರಸ್ಟ್, ಯು. ಕೆ. ಇಬ್ರಾಹಿಂ ಹಾಜಿಯವರಿಗೆ ಅಮೂಲ್ಯವಾದ ಹಾಗೂ ಸ್ಮರಣೀಯ "ಧರ್ಮ ಸೇವಾರತ್ನ" ಪ್ರಶಸ್ತಿಯನ್ನು 1999ರಲ್ಲಿ ನೀಡಿ ಸನ್ಮಾನಿಸಿದೆ. ತನ್ನ ನಿಸ್ವಾರ್ಥ ಸೇವೆಯಿಂದ ಉಳ್ಳಾಲದ ಎಲ್ಲಾ ಧರ್ಮಿಯರೊಂದಿಗೂ ಚಿರಪರಿಚಿತರಾಗಿದ್ದ ಹಾಜಿ ಯು. ಕೆ. ಇಬ್ರಾಹಿಂರವರು ಅಕ್ಟೋಬರ್ 08, 2007ರಂದು ನಿಧನರಾದರು. ದರ್ಗಾ ಆಡಳಿತ ಸಮಿತಿಯೊಂದಿಗೆ ಉತ್ತಮ ಬಾಂಧವ್ಯ, ನೇರ ನಡೆನುಡಿಗಳಿಂದ ಜನಮಾನ್ಯತೆಯನ್ನು ಪಡೆದ ಅವರು ಉಳ್ಳಾಲದ ಜನತೆಯ ಮನದಾಳದಲ್ಲಿ ಇಂದಿಗೂ ಹಚ್ಚ ಹಸಿರಾಗಿ ಉಳಿದಿದ್ದಾರೆ. 112

ಹಾಜಿ ಕಣಚೂರು ಮೋಣು

ದರ್ಗಾ ಆಡಳಿತ ಸಮಿತಿಯ ಅಧ್ಯಕ್ಷರಾಗಿ 2007ರಿಂದ ಸೇವೆ ಸಲ್ಲಿಸುತ್ತಿರುವ ಮೋಣು ಹಾಜಿ ಸಾಮಾಜಿಕ ಕಳಕಳಿ ಇರುವ ವ್ಯಕ್ತಿ. ಕಣಚೂರು ಸಾಮಿಲ್ಸ್, ಕಣಚೂರು ವಿದ್ಯಾ ಸಂಸ್ಥೆಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿರುವ ಇವರಿಗೆ ದರ್ಗಾ ಸಮಿತಿಯ ಅಧ್ಯಕ್ಷತೆ ಮತ್ತೊಂದು ಗುರುತರ ಜವಾಬ್ದಾರಿಯಾಗಿದೆ. ಅದಕ್ಕೆ ಬೇಕಾದ ಅರ್ಹತೆಯನ್ನು ಮೈಗೂಡಿಸಿಕೊಂಡಿರುವ ಇವರು ಕಳೆದ ಒಂದು ವರ್ಷದಿಂದೀಚೆಗೆ ಸಮಿತಿಯ ಚುಕ್ಕಾಣಿಯನ್ನು ಸಮರ್ಥವಾಗಿ ನಿರ್ವಹಿಸುತ್ತಿರುವರು. ಮೋಣು ಹಾಜಿಯವರಿಗೆ ಬಡವರಲ್ಲಿ, ನಿರ್ಗತಿಕರಲ್ಲಿ ಅತೀವ ಕಾಳಜಿ ಇರುವುದನ್ನು ಗಮನಿಸಬಹುದಾಗಿದೆ. ಇವರ ಅಧ್ಯಕ್ಷತೆಯಲ್ಲಿ ದರ್ಗಾಕ್ಕೆ ದಿನನಿತ್ಯ ಭೇಟಿ ನೀಡುತ್ತಿರುವ ಸಂದರ್ಶಕರಿಗೆ ಉಚಿತ ಊಟದ ವ್ಯವಸ್ಥೆ ಮಾಡಲಾಗಿದ್ದು ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಇತ್ತೀಚೆಗೆ ನಡೆದ ತನ್ನ ಮಗಳ ವಿವಾಹದ ಸಂದರ್ಭದಲ್ಲಿ 10 ಬಡ ಕನ್ಯೆಯರ ವಿವಾಹವನ್ನೂ ನಡೆಸಿಕೊಟ್ಟಿರುವುದು ಇವರ ಹೃದಯ ಶ್ರೀಮಂತಿಕೆಗೆ ಸಾಕ್ಷಿಯಾಗಿದೆ. ಶ್ರೀಯುತರ ಅಧ್ಯಕ್ಷತೆಯಲ್ಲಿ ದರ್ಗಾಸಮಿತಿ ಇನ್ನಷ್ಟು ಸಾರ್ವಜನಿಕ, ಶೈಕ್ಷಣಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಪೂರೈಸುವ ಇರಾದೆಯನ್ನಿಟ್ಟುಕೊಂಡಿದೆ.

ಅನುಬಂಧ 3

ದರ್ಗಾಕ್ಕೆ ಭೇಟಿ ನೀಡಿದ ಗಣ್ಯರ ಪಟ್ಟಿ

ಉಳ್ಳಾಲ ದರ್ಗಾ ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ ರಾಜ್ಯ ಹಾಗೂ ಭಾರತದಲ್ಲಿ ಒಂದು ವಿಶಿಷ್ಠ ಸ್ಥಾನವನ್ನು ಪಡಕೊಂಡಿದೆ. ದಿನವಹಿ ಸಾವಿರಾರು ಭಕ್ತರು ಸಂದರ್ಶನ ನೀಡುತ್ತಿರುವ ಈ ಕೇಂದ್ರಕ್ಕೆ, ಗಣ್ಯರೂ ಸಹ ಭೇಟಿ ನೀಡುತ್ತಿದ್ದಾರೆ. ಅಂತವರಲ್ಲಿ ಕೆಲವರ ಹೆಸರನ್ನು ಇಲ್ಲಿ ನಮೂದಿಸಲಾಗಿದೆ.

- ದಿ। ಶ್ರೀಮತಿ ಇಂದಿರಾ ಗಾಂಧಿ, ಮಾಜಿ ಪ್ರಧಾನಮಂತ್ರಿ 1983
- ದಿ। ವಿ. ಪಿ. ಸಿಂಗ್, ಮಾಜಿ ಪ್ರಧಾನಮಂತ್ರಿ 1990
- ಶ್ರೀ ಖುರ್ಷಿದ್ ಆಲಂಖಾನ್, ಮಾಜಿ ರಾಜ್ಯಪಾಲರು 1991
- ಶ್ರೀ ಗುಲಾಂ ನಭೀ ಅಝಾದ್, ಮಾಜಿ ಕೇಂದ್ರ ಸಚಿವರು 1991
- ಶ್ರೀಮತಿ ಜಸ್ಟೀಸ್ ಎಂ. ಫಾತಿಮಾ ಬೀವಿ, ನಿವೃತ್ತ ನ್ಯಾಯಾಧೀಶೆ, ಸು. ಕೋರ್ಟ್ 1992
- ದಿ। ಪಿ. ವಿ. ನರಸಿಂಹ ರಾವ್, ಮಾಜಿ ಪ್ರಧಾನಮಂತ್ರಿ 1993
- ಶ್ರೀ ಸಗೀರ್ ಅಹ್ಮದ್, ಮಾಜಿ ಮಂತ್ರಿ (ಕರ್ನಾಟಕ) 1993
- ಶ್ರೀ ರಮಾನಾಥ ರೈ, ಮಾಜಿ ಮಂತ್ರಿ (ಕರ್ನಾಟಕ) 1993
- ಶ್ರೀ ಇಕ್ಬಾಲ್ ಅಹ್ಮದ್, ಸೆಶ್ಯನ್ ಜಡ್ಜ್ 1993
- ಶ್ರೀ ಎಂ.ಎಂ. ಮಿರ್ಧೆ, ಹೈಕೋರ್ಟ್ ಜಡ್ಜ್ 1993
- ಶ್ರೀ ವಸಂತ ಸಾಲ್ಯಾನ್, ಮಾಜಿ ಮಂತ್ರಿ, ಕರ್ನಾಟಕ 1993
- ಶ್ರೀ ಕೆ. ಆರ್ ಜಯದೇವಪ್ಪ, ಮಾಜಿ ಸರಕಾರಿ ಸದಸ್ಯ 1993
- ಶ್ರೀ ಜಿ. ಎಂ. ಬನಾತ್‌ವಾಲ, ಮಾಜಿ ಲೋಕಸಭಾ ಸದಸ್ಯ 1994
- ಶ್ರೀ ಶಂಕರ್ ದಯಾಳ್ ಶರ್ಮ, ಮಾಜಿ ರಾಷ್ಟ್ರಪತಿಗಳು 1994
- ಶ್ರೀ ಮೈಕೆಲ್ ಆರ್. ಜೆ. ಗೊವಿಸ್, ವಿದೇಶಿ ಗಣ್ಯರು 1995
- ಶ್ರೀ ರೋಶನ್ ಬೇಗ್, ಮಾಜಿ ಮಂತ್ರಿ, ಕರ್ನಾಟಕ 1995
- ಶ್ರೀ ಕೆ. ರಾಮ, ಜನರಲ್ ಮ್ಯಾನೇಜರ್, ಟೆಲಿಕಾಮ್ 1995
- ಶ್ರೀ ಜಯಪ್ರಕಾಶ್ ಹೆಗ್ಡೆ, ಮಾಜಿ ಮಂತ್ರಿ, ಕರ್ನಾಟಕ 1996

- ಶ್ರೀ ಜಸ್ಟಿಸ್ ಎ. ಎಂ. ಅಹ್ಮದ್, ನಿವೃತ್ತ ಮುಖ್ಯ ನ್ಯಾಯಾಧೀಶರು, ಸು. ಕೋರ್ಟ್ 1996
- ಶ್ರೀ ಮುಕುಲ್ ಗೋಪಾಲ್ ಮುಖರ್ಜಿ 1998
- ಶ್ರೀ ಎಸ್. ಬಂಗಾರಪ್ಪ, ಮಾಜಿ ಮುಖ್ಯಮಂತ್ರಿಗಳು 1999
- ಶ್ರೀ ಕುಮಾರ ಬಂಗಾರಪ್ಪ, ಮಾಜಿ ರಾಜ್ಯ ಸಹಾಯಕ ಸಚಿವ (ಕರ್ನಾಟಕ) 1999
- ಶ್ರೀ ಧನಂಜಯ ಕುಮಾರ್, ಮಾಜಿ ಕೇಂದ್ರ ಸಚಿವರು 2000
- ಡಾ। ಸೆರಾವ್ ಪೊಲೆಯ್ಯ – ಫ್ರಾನ್ಸಿಸ್ ಸರಕಾರಿ ಅಧಿಕಾರಿ 2000
- ದಿ। ಹೆಚ್. ಡಿ. ದೇವೇಗೌಡ, ಮಾಜಿ ಪ್ರಧಾನಮಂತ್ರಿ 2000
- ಶ್ರೀ ಯೋಗೀಶ್ ಭಟ್, ಎಂ.ಎಲ್.ಎ. 2000
- ಶ್ರೀ ಎ.ಕೆ. ಮೊನ್ನಪ್ಪ, ದ. ಕ. ಜಿಲ್ಲಾಧಿಕಾರಿ 2001
- ಶ್ರೀ ಕೆ. ರಹ್‌ಮಾನ್ ಖಾನ್, ಮಾಜಿ ಡೆಪ್ಯುಟಿ ಸ್ಪೀಕರ್, ರಾಜ್ಯಸಭಾ (ಕರ್ನಾಟಕ) 2004
- ಶ್ರೀ ಜನಾರ್ದನ ಪೂಜಾರಿ, ಮಾಜಿ ಕೇಂದ್ರ ಸಚಿವರು 2005
- ಶ್ರೀ ಎಂ. ಪಿ. ಪ್ರಕಾಶ್, ಮಾಜಿ ಉಪಮುಖ್ಯಮಂತ್ರಿ 2006
- ಶ್ರೀ ಮಿರಾಜುದ್ದೀನ್ ಪಟೇಲ್, ಮಾಜಿ ಮಂತ್ರಿ 2006
- ಶ್ರೀ ಇಕ್ಬಾಲ್ ಅನ್ಸಾರಿ, ಮಾಜಿ ಮಂತ್ರಿ 2006
- ಶ್ರೀ ಸಿದ್ಧರಾಮಯ್ಯ, ಮಾಜಿ ಉಪಮುಖ್ಯಮಂತ್ರಿ 2007
- ಶ್ರೀ ಆಸ್ಕರ್ ಫೆರ್ನಾಂಡೀಸ್, ಕೇಂದ್ರ ಸಚಿವರು 2007
- ಶ್ರೀ ಎಚ್. ಡಿ. ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ 2008
- ಶ್ರೀಮತಿ ರೇಣುಕಾ ಚೌಧುರಿ 2008
- ಜಸ್ಟೀಸ್ ಎ. ಎಮ್. ಫಾರೂಕ್, ಹೈಕೋರ್ಟ್ ಜಡ್ಜ್ 2008
- ಶ್ರೀ ಜೇಸುದಾಸ್, ಖ್ಯಾತ ಗಾಯಕ 2008
- ಶ್ರೀ ರಾಹುಲ್ ಗಾಂಧಿ 2008

ಗ್ರಂಥ ಸೂಚಿ

ಪ್ರಾಥಮಿಕ ಆಕರಗಳು

1. ಸೋಮೇಶ್ವರ ಅಮೃತ ಡಾ। – ಸಂದರ್ಶನ(23ಜೂನ್2008)
2. ಇಚ್ಲಂಗೋಡು ಬಿ.ಎಂ. – ಸಂದರ್ಶನ(20ಮೇ2008)
3. ತಲಪಾಡಿ ಮುಸ್ಲಿಯಾರ್ ಬಾಪ ಕುಂ °, ಸಯ್ಯದ್ ಮದನಿ ಅರಬಿ ಮಲಯಾಳ ಕಾವ್ಯಮಾಲೆ, 1947
4. ಹಾಜಿ ಹಮ್ಮಬ್ಬ, ಮುಕ್ರಿ ಮುತ್ತು ಬಾವು, ಹರೇಕಳ ಉಸ್ತಾದ್ ಪಟ್ಟಾಂಬಿ– ಸಂದರ್ಶನ
5. ಇದ್ದಿನಬ್ಬ ಬಿ.ಎಂ– ಸಂದರ್ಶನ(2ಆಗಸ್ಟ್2008)
6. ಚಂದ್ರ ಕೆ.ಪಿ, ರಾವ್ ವಾಸುದೇವ್, ಭಾಸ್ಕರ್, ಸಾಧು ಕುಂ °, ಹನೀಫ್ ಸಿ.ಎಸ್, ಅಹಮ್ಮದ್ ನಿಸಾರ್, ಮ್ಯಾನೇಜರ್ ದರ್ಗಾ ಕಮಿಟಿ, ದರ್ಗಾಕ್ಕೆ ಭೇಟಿ ನೀಡಿದ ಹಿಂದೂ, ಮುಸ್ಲಿಂ ಮತ್ತು ಕ್ರೈಸ್ತ ಭಕ್ತರ ಸಂದರ್ಶನ.
7. ಸ್ಟರಕ್, ಮೆಡ್ರಾಸ್ ಡಿಸ್ಟ್ರಿಕ್ ಮ್ಯಾನುಯಲ್ಸ್, ಸೌತ್ ಕೆನರಾ ಸಂಪುಟ–1, ಗವರ್ನಮೆಂಟ್ ಪ್ರೆಸ್ ಮದ್ರಾಸ್ 1894

ದ್ವಿತೀಯ ಆಕರಗಳು

1. ನಾಯರ್ ಗೋಪಾಲನ್ ಸಿ, ಮಾಪಿಳ್ಳಾಸ್ ಆಫ್ ಮಲಬಾರ್, ಬಾಸೆಲ್ ಮಿಶನ್ ಮಂಗಳೂರು–1922
2. ಮೊರಾಸ್ ಎಂ. ಜಾರ್ಜ್, ಮಂಗಳೂರು ಎ ಹಿಸ್ಟಾರಿಕಲ್ ಸ್ಕೆಚ್–1927
3. ಗ್ರೇ ಎಡ್ವರ್ಡ್, ದಿ ಟ್ರಾವೆಲ್ಸ್ ಆಫ್ ಪಿಯಾತ್ರೋ ಡೆಲ್ಲಾವೆಲ್ಲಾ ಇನ್ ಇಂಡಿಯಾ, ಇ ಇ ಜಿ ವಾಲ್ಯೂಮ್ 2,
4. ಮಿಲೆ ಎಸ್, *'ಕೆನರಾ ಪಾಸ್ಟ್ ಎಂಡ್ ಪ್ರೆಸೆಂಟ್'* ಮಂಗಳೂರು 1875
5. ರಮೇಶ್ ಕೆ.ವಿ ಡಾ। *'ಎ ಹಿಸ್ಟರಿ ಆಫ್ ಸೌತ್ ಕೆನರಾ'*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 1970
6. ಫಣಿಕ್ಕರ್ ಕೆ. ಎಮ್, *'ಜಿಯೋಗ್ರಫಿಕಲ್ ಫ್ಯಾಕ್ಟರ್ ಇನ್ ಇಂಡಿಯನ್ ಹಿಸ್ಟರಿ'*, ಬಾಂಬೆ 1948
7. ನೂರಿ ಅಬುರೈಹಾನ್ ಅಹಮ್ಮದ್, ಮೈಕಾಳ, ಮಂಗಳೂರು 1960

8. ನಾಗೇಗೌಡ ಎಚ್. ಎಲ್. *ಪ್ರವಾಸಿ ಕಂಡ ಇಂಡಿಯ*, ಸಂ. 1 ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು 1983
9. ಶೇಕ್ ಜೈನುದ್ದೀನ್, ತೌಫತುಲ್ ಮುಜಾಹಿದೀನ್(ತರ್ಜುಮೆ) ರೌಲಾಂಡ್‌ಸನ್ ಲಂಡನ್ 1828
10. ಕಾಮತ್ ಸೂರ್ಯನಾಥ್ ಯು, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಗೀತಾ ಬುಕ್ ಹೌಸ್ ಮೈಸೂರು 1974
11. ಭಟ್ ಪಿ ಗುರುರಾಜ್, ಸ್ಟಡೀಸ್ ಇನ್ ತುಳುವ ಹಿಸ್ಟ್ರಿ ಎಂಡ್ ಕಲ್ಚರ್, ಮಣಿಪಾಲ 1975
12. ಭಟ್ ಪಿ ಗುರುರಾಜ್, ತುಳುನಾಡು, ಭವ್ಯವಾಣಿ ಪಬ್ಲಿಕೇಶನ್ ಉಡುಪಿ 1963
13. ಉಪಾಧ್ಯಾಯ ಸುಶೀಲಾ ಡಾ।, ಮಾಪ್ಲಾಸ್ ಲ್ಯಾಂಗ್ವೇಜ್, ಗೋವಿಂದ ಪೈ ಸಂಶೋಧನಾ ಕೇಂದ್ರ ಉಡುಪಿ
14. ಮಾಧವ ವಸಂತ ಕೆ.ಜಿ., ರಿಲೀಜನ್ ಇನ್ ಕೋಸ್ಟಲ್ ಕರ್ನಾಟಕ(1500–1763), ನ್ಯೂ ಡೆಲ್ಲಿ 1985.
15. ಕುಡ್ವ ಕೇಶವ ದಕ್ಷಿಣ ಕನ್ನಡದ ಇತಿಹಾಸ 1948
16. ಮಾಧವ ವಸಂತ ಕೆ.ಜಿ, ಅಬ್ಬಕ್ಕ ದೇವಿಯರು– ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
17. ಉಳ್ಳಾಲ ಇತಿಆದಿ (ಸಂ), ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
18. ದೊಡ್ಡಮನಿ ವಹಾಬ್ ತುಳುನಾಡ ಮುಸ್ಲಿಮರು ಮಂಗಳೂರು 2008
19. ರಮೇಶ್ ಕೆ.ವಿ. ತುಳುನಾಡ ಇತಿಹಾಸ, ಮೈಸೂರು 1969
20. ಐಗಳ್, ರಾವ್ ಗಣಪತಿ, ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ ಶಾರದಾ ಪ್ರೆಸ್ ಮಂಗಳೂರು 1923
21. ದೊಡ್ಡಮನಿ ವಹಾಬ್, ಮುಸ್ಲಿಂಸ್ ಇನ್ ಸೌತ್ ಕೆನರಾ 1993
22. ಸೋಮೇಶ್ವರ ಅಮೃತ್, ಬಬ್ಬರ್ಯ ಪಾಡ್ದನ, ಪಾಡ್ದನ ಸಂಪುಟ 1997
23. ಪೊಲಿ (ಸಂ) ಕೆನರಾ 200, ಜಿಲ್ಲಾಧಿಕಾರಿ ಮಂಗಳೂರು 2000
24. ಹಿಸ್ಟ್ರಿ ಆಫ್ ಇಂಡಿಯಾ, ಮ್ಯಾಕ್‌ಮಿಲನ್ 1990
25. ಸಾಲೆತ್ತೂರು ಬಿ.ಎ ಏನ್ಸ್‌ಯೆಂಟ್ ಕರ್ನಾಟಕ ಸಂ 1, ಹಿಸ್ಟ್ರಿ ಆಫ್ ತುಳುವ ಓರಿಯಂಟಲ್ ಬುಕ್ ಎಜನ್ಸಿ ಪೂನಾ 1936
26. ಅಭಿಶಂಕರ್, ಸೌತ್ ಕೆನರಾ ಗಜೆಟಿಯರ್, ಕರ್ನಾಟಕ ಸರಕಾರ, 1973